ಬುಧವಾರ, ನವೆಂಬರ್ 2, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹೊಸ ಸಿನಿಮಾ
ನವದೆಹಲಿಯಲ್ಲಿ ಮಂಗಳವಾರ ಬಾಲಿವುಡ್ ನಟಿ ಸೋನಾಕ್ಷಿ ಸಿನ್ಹಾ ತಮ್ಮ ಹೊಸ ಚಿತ್ರ 'ಡಬಲ್ ಎಕ್ಸ್‌ಎಲ್'ನ ಪ್ರಚಾರದಲ್ಲಿ ಭಾಗವಹಿಸಿದ್ದರು



ಎಂಟೂ ವಲಯಗಳಲ್ಲೂ ಕಾರ್ಯಾಚರಣೆ: ಬಿಬಿಎಂಪಿ ಆಯುಕ್ತ

ರಾಜಕಾಲುವೆ ಒತ್ತುವರಿ: ಎಲ್ಲೆಡೆ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಎಂಟೂ ವಲಯದಲ್ಲಿ ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಶೀಘ್ರವೇ ಆರಂಭಿಸಲಾಗುತ್ತದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ರಾಜ್ಯೋತ್ಸವ ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿದ ಅವರು, 'ಈವರೆಗೆ ಮಹದೇವಪುರ ವಲಯದಲ್ಲಿ ಮಾತ್ರ ರಾಜಕಾಲುವೆ ಒತ್ತುವರಿ ಕಾರ್ಯಾಚರಣೆ ಮಾಡಲಾಗುತ್ತಿತ್ತು. ಇನ್ನು ಮುಂದೆ ಎಲ್ಲೆಡೆ ಒತ್ತುವರಿಯಾಗಿರುವುದರ ಅಲ್ಲೆಲ್ಲ ತೆರವು ಕಾರ್ಯಾಚರಣೆ ಮಾಡಲು ಸೂಚಿಸಲಾಗಿದೆ. ಕಂದಾಯ ಇಲಾಖೆಯಿಂದ ನೋಟಿಸ್ ಹಾಗೂ ತೆರವು ಆದೇಶವನ್ನು ನಿರೀಕ್ಷಿಸಲಾಗಿದೆ' ಎಂದು ತಿಳಿಸಿದರು.

ರಾಜಕಾಲುವೆ ಒತ್ತುವರಿ ಬಗ್ಗೆ ಒಂದಷ್ಟು ಮಾಹಿತಿ ಇದೆ. ಇದಲ್ಲದೆ, ಸಂಪೂರ್ಣವಾಗಿ ಎಲ್ಲಿ ಒತ್ತುವರಿಯಾಗಿದೆಯೋ ಅದೆಲ್ಲವನ್ನೂ ಗುರುತು ಮಾಡಿ, ತೆರವು ಆದೇಶ ನೀಡಬೇಕು ಎಂದು ಜಿಲ್ಲಾಧಿಕಾರಿ ಹಾಗೂ ಸಂಬಂಧಿಸಿದ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಗಿದೆ. ಅವರು ಆದೇಶ ನೀಡಿದ ತಕ್ಷಣವೇ ತೆರವು ಆರಂಭಿಸಲಾಗುತ್ತದೆ ಎಂದರು.



ಬಿಬಿಎಂಪಿ ನೌಕರರ ಕನ್ನಡ ಸಂಘದ ವತಿಯಿಂದ ಆಹಾರದ ಕಿಟ್ ವಿತರಿಸಲಾಯಿತು. ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಸಂಘದ ಪದಾಧಿಕಾರಿಗಳು ಇದ್ದರು

ನ್ಯಾಯಾಲಯದ ಹಲವು ಪ್ರಕರಣಗಳ ಮಹದೇವಪುರ ವಲಯದಲ್ಲಿ ತೆರವು ಕಾರ್ಯಾಚರಣೆ ನಿಧಾನಗತಿಯಲ್ಲಿದೆ. ನ್ಯಾಯಾಲಯದಲ್ಲಿ ತ್ವರಿತ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗಿದೆ. ಎಲ್ಲ ಒತ್ತುವರಿಯನ್ನೂ ತೆರವು ಮಾಡಲಾಗುತ್ತದೆ ಎಂದರು.

ರಸ್ತೆ ಗುಂಡಿಗಳನ್ನು ಮುಚ್ಚುವ ಕೆಲಸ ಆರಂಭವಾಗಿದೆ. ಎಂಜಿನಿಯರ್‌ಗಳಿಗೆ ಗುರಿ ನೀಡಲಾಗಿದ್ದು, ಅವರು ಕಾರ್ಯನಿರ್ವಹಿಸದಿದ್ದರೆ ನೋಟಿಸ್ ನೀಡಲಾಗುತ್ತದೆ. ಅಗತ್ಯವಿದ್ದರೆ ಅಮಾನತು ಮಾಡಲಾಗುತ್ತದೆ ಎಂದು ತುಷಾರ್ ಗಿರಿನಾಥ್ ಹೇಳಿದರು.

ರಾಜ್ಯೋತ್ಸವ: ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ರಾಜ್ಯೋತ್ಸವದ ಅಂಗವಾಗಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಹಾಗೂ ತುಷಾರ್ ಗಿರಿನಾಥ್ ಧ್ವಜಾರೋಹಣ ನೆರವೇರಿಸಿದರು.

ಕಿಟ್ ವಿತರಣೆ: ಪ್ರಧಾನ ಮಂತ್ರಿಯವರ ಕ್ಷಯ ಮುಕ್ತ ಭಾರತ ಅಭಿಯಾನದ ಅಂಗವಾಗಿ ಬಿಬಿಎಂಪಿ ನೌಕರರ ಕನ್ನಡ ಸಂಘದ ವತಿಯಿಂದ 200 ಮಂದಿ ಕ್ಷಯ ರೋಗಿಗಳಿಗೆ ಆಹಾರದ ಕಿಟ್ ವಿತರಿಸಲಾಯಿತು.

ಸಹಾಯಧನ: ಬಿಬಿಎಂಪಿಯಲ್ಲಿ ಲಿಂಕ್ ವರ್ಕರ್ ಆಗಿದ್ದ ಪಾರ್ವತಿ ಅವರು ಹೃದಯಾಘಾತದಿಂದ ಮೃತಪಟ್ಟಿದ್ದರಿಂದ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಸಂಘದ ವತಿಯಿಂದ ಮೃತರ ಕುಟುಂಬಕ್ಕೆ ₹1 ಲಕ್ಷ ಸಹಾಯ ಧನ ನೀಡಲಾಯಿತು.

ವಿಶೇಷ ಆಯುಕ್ತರಾದ ಡಾ. ಹರೀಶ್ ಕುಮಾರ್, ಪಿ.ಎನ್.ರವೀಂದ್ರ, ಎಸ್.ರಂಗಪ್ಪ ಉಪಸ್ಥಿತರಿದ್ದರು.

ಬಾಲಕಿ ಮೇಲೆ ಅತ್ಯಾಚಾರ ಎಸಗಿ ಕೊಲೆ

ಆಳಂದ (ಕಲಬುರಗಿ ಜಿಲ್ಲೆ): ಬಯಲು ಬಹಿರ್ದೆಸೆಗೆ ಹೋಗಿದ್ದ ಬಾಲಕಿ ಮೇಲೆ ಅತ್ಯಾಚಾರವೆಸಗಿ, ಕೊಲೆ ಮಾಡಿದ ಘಟನೆ ಆಳಂದ ತಾಲ್ಲೂಕಿನ ಗ್ರಾಮವೊಂದರಲ್ಲಿ ಮಂಗಳವಾರ ನಡೆದಿದೆ.

'ಗ್ರಾಮದ ಹೊರವಲಯದ ಕಬ್ಬಿನ ಗದ್ದೆಯಲ್ಲಿ ಬಾಲಕಿಯ ಮೃತ ದೇಹ ಪತ್ತೆಯಾಗಿದ್ದು, ಅತ್ಯಾಚಾರ ನಡೆಸಿ ಕೊಲೆ ಮಾಡಲಾಗಿದೆ ಎಂದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಅತ್ಯಾಚಾರ ಮತ್ತು ಕೊಲೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಪತ್ತೆಗೆ ತನಿಖೆ ಕೈಗೊಳ್ಳಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಬಾಲಕಿಯನ್ನು ಕಬ್ಬಿನ ಗದ್ದೆಗೆ ಎಳೆದೊಯ್ದು ಅತ್ಯಾಚಾರ ಮಾಡಲಾಗಿದೆ. ದೇಹದ ಮೇಲೂ ತರಚಿದ ಗಾಯಗಳಾಗಿವೆ. ಕುತ್ತಿಗೆಗೆ ವೇಲ್ ಬಿಗಿಯಲಾಗಿದೆ' ಎಂದು ಅವರು ತಿಳಿಸಿದ್ದಾರೆ.

ಆಳಂದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇಶಾ ಪಂತ್ ಭೇಟಿ ನೀಡಿ, ಪರಿಶೀಲಿಸಿದರು.

ಹೆಸರಘಟ್ಟ ಮೀಸಲು ಘೋಷಣೆ ಪ್ರಸ್ತಾವ ವಿರೋಧಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಹೆಸರಘಟ್ಟ ಸಂರಕ್ಷಣಾ ಹುಲ್ಲುಗಾವಲು ಪ್ರದೇಶವನ್ನು ಮೀಸಲು ಪ್ರದೇಶವನ್ನಾಗಿ ಘೋಷಣೆ ಮಾಡುವ ಪ್ರಸ್ತಾವನೆಯನ್ನು ಕೂಡಲೇ ಕೈಬಿಡಬೇಕೆಂದು ಒತ್ತಾಯಿಸಿ, ಸ್ಥಳೀಯ ರೈತರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಕಾಕೋಳು ಸಮೀಪದ ಕೆ.ಎಂ.ಎಫ್ ಗೇಟ್ ಬಳಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಯಲಹಂಕ ತಾಲ್ಲೂಕಿನ ಹೆಸರಘಟ್ಟ ಹೋಬಳಿ, ಸೊಣ್ಣೇನಹಳ್ಳಿ, ಹೆಸರಘಟ್ಟ, ಶಿವಕೋಟೆ, ಗ್ರಾಮಪಂಚಾಯಿತಿಗಳ ವ್ಯಾಪ್ತಿಯ ಗ್ರಾಮಗಳ ರೈತರು, ರೈತ-ಸಂಘಟನೆಗಳ ಪದಾಧಿಕಾರಿಗಳು, ಗ್ರಾಮ ಪಂಚಾಯಿತಿ ಸದಸ್ಯರು, ದಲಿತ ಮತ್ತು ಕನ್ನಡಪರ ಸಂಘಟನೆಗಳ ಸದಸ್ಯರು ಹೆಸರಘಟ್ಟದ ಹುಲ್ಲಗಾವಲು ಪ್ರದೇಶದಲ್ಲಿ ಕಾಲ್ನಡಿಗೆ ಜಾಥಾ ನಡೆಸುವ ಮೂಲಕ ಪ್ರತಿಭಟನೆ ನಡೆಸಿದರು.

ಈ ವೇಳೆ ಅರಣ್ಯ ಇಲಾಖೆ ಹಾಗೂ ವನ್ಯಜೀವಿ ಮಂಡಳಿ ವಿರುದ್ಧ ಫಲಕಗಳನ್ನು ಹಿಡಿದು ಘೋಷಣೆಗಳನ್ನು ಕೂಗುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ರಾಜ್ಯಘಟಕದ ಅಧ್ಯಕ್ಷ ವಿ.ಆರ್.ನಾರಾಯಣರೆಡ್ಡಿ ಮಾತನಾಡಿ, 'ಹುಲ್ಲುಗಾವಲಿನ ಪ್ರದೇಶವು ಪಶುಪಾಲನಾ ಇಲಾಖೆಯ ಸುಪರ್ದಿಯಲ್ಲಿರುವ ಜಾಗವಾಗಿದೆ. ಇದು ಅರಣ್ಯ ಇಲಾಖೆಗೆ ಸಂಬಂಧಿಸಿದ ಜಾಗವಾಗಿದೆ ಎಂಬುದರ ಬಗ್ಗೆ ಅಧಿಸೂಚನೆ ಹೊರಡಿಸದೆ ಏಕಾಏಕಿ ಪ್ರಸ್ತಾವನೆ ಸಲ್ಲಿಸಿರುವುದು ಕಾನೂನು ಬಾಹಿರವಾಗಿದೆ. ವನ್ಯಜೀವಿ (ರಕ್ಷಣೆ) ಕಾಯಿದೆ 1972ರಲ್ಲಿ ವಿಭಾಗ 36ಎ(1)ರಲ್ಲಿರಾಜ್ಯಸರ್ಕಾರವುಸ್ಥಳೀಯ ಸಮುದಾಯಗಳೊಂದಿಗೆ ಸಮಾಲೋಚನೆ ನಡೆಸಿಲ್ಲ' ಎಂದು ಪ್ರತಿಭಟನಕಾರರು ದೂರಿದರು.

ರಾಷ್ಟ್ರೀಯ ಕಿಸಾನ್ ಸಂಘಟನೆಯ ರಾಜ್ಯ ಕಾರ್ಯಾಧ್ಯಕ್ಷ ಶಿವಕೋಟೆ ಆನಂದ್, ಯುವ ಮುಖಂಡ ಸೀತಕೆಂಪನಹಳ್ಳಿ ಮಧುಕುಮಾರ್ ಮಾತನಾಡಿದರು.



ಹೆಸರಘಟ್ಟ ಸಂರಕ್ಷಣಾ ಹುಲ್ಲುಗಾವಲು ಪ್ರದೇಶವನ್ನು ಮೀಸಲು ಪ್ರದೇಶವನ್ನಾಗಿ ಘೋಷಣೆ ಮಾಡುವ ಪ್ರಸ್ತಾವನೆಯನ್ನು ಕೂಡಲೇ ವಾಪಸ್ ಪಡೆಯಬೇಕೆಂದು ಒತ್ತಾಯಿಸಿ ರೈತರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸ್ಥಳೀಯರು ಹುಲ್ಲುಗಾವಲು ಪ್ರದೇಶದಲ್ಲಿ ಪ್ರತಿಭಟನೆ ನಡೆಸಿದರು.

ಬುಧವಾರ, ನವೆಂಬರ್ 2, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 302 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಮೊರ್ಬಿ ತೂಗುಸೇತುವೆ ದುರಂತದ ಸುತ್ತ

ಇಂದು
ತಂತ್ರಜ್ಞಾನ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,121	18,145	₹ 52,066 (ಬೆಂಗಳೂರು)	₹ 59,900 (ಬೆಂಗಳೂರು)	82.59

ಧಾರಾಕಾರ ಮಳೆಯ ಮಧ್ಯೆಯೇ ಪ್ರಶಸ್ತಿ ಪ್ರದಾನ ಸಮಾರಂಭ

ಪುನೀತ್‌ಗೆ 'ರತ್ನ' ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರಾಕಾರವಾಗಿ ಸುರಿಯುತ್ತಿದ್ದ ಮಳೆ ಮತ್ತು ಸಹಸ್ರಾರು ಅಭಿಮಾನಿಗಳ ಹರ್ಷೋದ್ಗಾರಗಳ ಮಧ್ಯೆಯೇ, ನಾಡಿನ ಜನರ ಮನಗೆದ್ದ ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರವಾಗಿ 'ಕರ್ನಾಟಕ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಮಂಗಳವಾರ ಸಂಜೆ ನಡೆದ ಸಮಾರಂಭದಲ್ಲಿ, ಪುನೀತ್ ಅವರನ್ನು ಕಳೆದುಕೊಂಡು ಆಗಸವೇ ಅಳುತ್ತಿದೆಯೇನೋ ಎಂಬಂತೆ ಭೋರ್ಗರೆದು ಸುರಿಯುತ್ತಿದ್ದ ವರ್ಷಧಾರೆಯ ನಡುವೆಯೇ ಛತ್ರಿಯ ಆಸರೆಯಲ್ಲಿ ಸಮಾರಂಭ ನಡೆಯಿತು. ತಂದೆ ಡಾ. ರಾಜ್‌ಕುಮಾರ್ ಅವರಿಗೆ 30 ವರ್ಷಗಳ ಹಿಂದೆ 'ಕರ್ನಾಟಕ ರತ್ನ' ಪ್ರಶಸ್ತಿ ಪ್ರದಾನ ಮಾಡಿದ್ದ ಸ್ಥಳದಲ್ಲೇ ಪುನೀತ್ ಅವರಿಗೂ ಇದೇ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಪುನೀತ್ ಅವರ ಪತ್ನಿ ಅಶ್ವಿನಿ ಪ್ರಶಸ್ತಿ ಸ್ವೀಕರಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡಿದರು. ಚಿತ್ರನಟರಾದ ರಜನಿಕಾಂತ್, ನಂದಮೂರಿ ತಾರಕ ರಾಮರಾವ್ (ಜೂನಿಯರ್ ಎನ್.ಟಿ.ಆರ್.), ಇನ್ಫೋಸಿಸ್ ಫೌಂಡೇಷನ್ ಅಧ್ಯಕ್ಷೆ ಸುಧಾ ಮೂರ್ತಿ, ಪುನೀತ್ ಅವರ ಅಣ್ಣಂದಿರಾದ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಸಹೋದರಿಯರು ಸೇರಿದಂತೆ ಕುಟುಂಬದ ಸದಸ್ಯರು, ಸಚಿವರಾದ ಆರ್. ಅಶೋಕ, ವಿ. ಸುನಿಲ್ ಕುಮಾರ್, ವಿ. ಸೋಮಣ್ಣ, ಎಸ್.ಟಿ. ಸೋಮಶೇಖರ್, ಬಿ.ಸಿ. ನಾಗೇಶ್, ಬೈರತಿ ಬಸವರಾಜ, ಡಾ.ಕೆ. ಸುಧಾಕರ್, ಮುನಿರತ್ನ, ವಿಧಾನ ಪರಿಷತ್ ಹಂಗಾಮಿ ಸಭಾಪತಿ ರಘುನಾಥರಾವ್ ಮಲ್ಕಾಪೂರೆ, ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ರಿಜ್ವಾನ್ ಅರ್ಷದ್, ಉದಯ್ ಗರುಡಾಚಾರ್ ಸೇರಿ ಹಲವರು ವೇದಿಕೆಯಲ್ಲಿದ್ದರು.

5ನೇ ಪುಟ ನೋಡಿ

ಅಪ್ಪು ದೇವರ ಮಗು: ರಜನಿಕಾಂತ್

'ಡಾ.ರಾಜ್‌ಕುಮಾರ್ ಸೇರಿದಂತೆ ಕರ್ನಾಟಕ ರತ್ನ ಪ್ರಶಸ್ತಿ ಪುರಸ್ಕೃತರಾಗಿರುವ ಉಳಿದ ಎಲ್ಲರೂ 70 ವರ್ಷಗಳಲ್ಲಿ ಮಾಡಿರುವ ಸಾಧನೆಯನ್ನು ನಮ್ಮ ಪ್ರೀತಿಯ ಪುನೀತ್ ರಾಜ್‌ಕುಮಾರ್ 21 ವರ್ಷಗಳಲ್ಲೇ ಮಾಡಿ ಹೋಗಿದ್ದಾನೆ' ಎಂದು ನಟ ರಜನಿಕಾಂತ್ ಹೇಳಿದರು.

ಕನ್ನಡದಲ್ಲೇ ಮಾತನಾಡಿದ ಅವರು, 'ಮಾರ್ಕಂಡೇಯ, ಪ್ರಹ್ಲಾದ, ನಚಿಕೇತನಂತೆ ಕಲಿಯುಗದಲ್ಲಿ ಈ ಅಪ್ಪು. ಅವನು ದೇವರ ಒಬ್ಬ ಮಗು. ಸ್ವಲ್ಪ ದಿನ ಇಲ್ಲಿಗೆ ಬಂದು ನಮ್ಮ ಜತೆ ಇದ್ದು ಆಟವಾಡಿ, ತನ್ನಲ್ಲಿ ಇರುವುದನ್ನೆಲ್ಲ ತೋರಿಸಿ ದೇವರ ಹತ್ತಿರ ಹೋಗಿದ್ದಾನೆ. ಅವನ ಆತ್ಮ ಇಲ್ಲೇ ನಮ್ಮ ಸುತ್ತವೇ ಇದೆ. ಬಹಳ ದೊಡ್ಡ ಜೀವ ಅದು' ಎಂದರು.

ಕಾರ್ಯಕ್ರಮ ಮುಗಿಯುತ್ತಿದ್ದಂತೆಯೇ ಮಳೆ ಕೊಂಚ ಕಡಿಮೆಯಾಗಿದ್ದನ್ನು ಗಮನಿಸಿದ ರಜನಿಕಾಂತ್ ಮತ್ತೆ ಮಾತಿಗಿಳಿದರು. ಪುನೀತ್ ಅವರು 4 ವರ್ಷಗಳ ಪುಟ್ಟ ಮಗುವಾಗಿ ಪರಿಚಯವಾದದ್ದು, ಅವರ ಬೆಳವಣಿಗೆಯನ್ನು ಸ್ಮರಿಸಿದರು. ರಾಜ್ ಅವರು ಪ್ರತಿವರ್ಷ ಶಬರಿಮಲೆಗೆ ಹೋಗುತ್ತಿದ್ದರು. 48 ಕಿ.ಮೀ ದೂರ ಅಪ್ಪುವನ್ನು ಹೆಗಲ ಮೇಲೆಯೇ ಕೂರಿಸಿಕೊಂಡು ನಡೆದೇ ಹೋಗುತ್ತಿದ್ದರು. ಇರುಮುಡಿ ಕಟ್ಟಿದ ಬಳಿಕ ಶಬರಿಮಲೆಗೆ ಹೊರಡುವ ಮುನ್ನ ಯಾವಾಗಲೂ ಖ್ಯಾತಗಾಯಕ ವೀರಮಣಿ ಅವರು ಸ್ವಾಮಿಯೇ ಶರಣಂ ಅಯ್ಯಪ್ಪ ಎಂದು ಭಜನೆ ಆರಂಭಿಸುತ್ತಿದ್ದರು.

5ನೇ ಪುಟ ನೋಡಿ

'ಒಳ್ಳೆಯತನದಿಂದ ರಾಜ್ಯ ಗೆದ್ದ ವ್ಯಕ್ತಿ'

'ಯುದ್ಧ ಮಾಡದೆ, ಕೇವಲ ವ್ಯಕ್ತಿತ್ವ, ನಗು ಮತ್ತು ಅಹಂಕಾರವಿಲ್ಲದ ಒಳ್ಳೆಯತನದಿಂದ ರಾಜ್ಯ ಗೆದ್ದ ವ್ಯಕ್ತಿ ಪುನೀತ್ ರಾಜ್‌ಕುಮಾರ್' ಎಂದು ಜೂನಿಯರ್ ಎನ್‌ಟಿಆರ್ ಬಣ್ಣಿಸಿದರು.

ಕನ್ನಡದಲ್ಲೇ ಮಾತನಾಡಿದ ಅವರು, 'ಒಬ್ಬ ಮನುಷ್ಯನಿಗೆ ಪರಂಪರೆ ಮತ್ತು ಉಪನಾಮಗಳು ಹಿರಿಯರಿಂದ ಬರುತ್ತವೆ. ಆದರೆ, ವ್ಯಕ್ತಿತ್ವ ಮಾತ್ರ ಮನುಷ್ಯನ ಸ್ವಂತ ಸಂಪಾದನೆ. ಆ ರೀತಿ ವ್ಯಕ್ತಿತ್ವದಿಂದ ರಾಜ್ಯ ಗೆದ್ದ ಏಕೈಕ ರಾಜ ಪುನೀತ್' ಎಂದರು.

'ಈಗ ಕರ್ನಾಟಕ ರತ್ನ ಪ್ರಶಸ್ತಿ ನೀಡುತ್ತಿರಬಹುದು. ಆದರೆ, ಪುನೀತ್ ಕರ್ನಾಟಕದ ರತ್ನವೇ ಆಗಿದ್ದರು. ನಾನು ಸಾಧನೆಯ ಅರ್ಹತೆಗಳಿಂದ ಇಲ್ಲಿ ಬಂದು ನಿಂತಿಲ್ಲ. ಕೇವಲ ಒಬ್ಬ ಹೆಮ್ಮೆಯ ಗೆಳೆಯನಾಗಿ ಬಂದಿದ್ದೇನೆ' ಎಂದು ಎನ್‌ಟಿಆರ್ ಪುನೀತ್ ಜತೆಗಿನ ಗೆಳೆತನವನ್ನು ಸ್ಮರಿಸಿದರಲ್ಲದೇ, ಕರ್ನಾಟಕ ರಾಜ್ಯೋತ್ಸವದ ಶುಭಾಶಯವನ್ನೂ ಹೇಳಿದರು.



ಬೆಂಗಳೂರಿನ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಮಂಗಳವಾರ ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರವಾಗಿ 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಪುನೀತ್ ಪತ್ನಿ ಅಶ್ವಿನಿ ಪ್ರಶಸ್ತಿ ಸ್ವೀಕರಿಸಿದರು. ಸಚಿವ ಸುನಿಲ್ ಕುಮಾರ್, ನಟ ಶಿವರಾಜ್‌ಕುಮಾರ್, ನಟ ರಜನಿಕಾಂತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಇನ್ಫೋಸಿಸ್ ಫೌಂಡೇಶನ್ ಮುಖ್ಯಸ್ಥೆ ಸುಧಾಮೂರ್ತಿ, ನಟ ಜೂನಿಯರ್ ಎನ್‌ಟಿ.ಆರ್, ಸಚಿವರಾದ ಆರ್ ಅಶೋಕ, ಡಾ. ಸುಧಾಕರ್, ವಿ. ಸೋಮಣ್ಣ ಇದ್ದಾರೆ
–ಪ್ರಜಾವಾಣಿ ಚಿತ್ರ: ಎಂ.ಎಸ್ ಮಂಜುನಾಥ್

ದೇವೇಗೌಡರ ನೇತೃತ್ವದಲ್ಲಿ ಪೂಜೆ • ಮಳೆ ಕಾರಣ ವಾರದಮಟ್ಟಿಗೆ ಮುಂದಕ್ಕೆ

ಮಳೆ ನಡುವೆ 'ಪಂಚರತ್ನ' ಯಾತ್ರೆ ಶುರು

ಪ್ರಜಾವಾಣಿ ವಾರ್ತೆ

ಮುಳಬಾಗಿಲು (ಕೋಲಾರ ಜಿಲ್ಲೆ): ಜೆಡಿಎಸ್‌ನ ಮಹತ್ವಾಕಾಂಕ್ಷೆಯ 'ಪಂಚರತ್ನ' ರಥಯಾತ್ರೆ ಹಾಗೂ ಚುನಾವಣಾ ಪ್ರಚಾರಕ್ಕೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಮಂಗಳವಾರ ಭಾರಿ ಮಳೆಯ ನಡುವೆ ಕುರುಡುಮಲೆಯ ಗಣಪತಿ ಸನ್ನಿಧಾನದಲ್ಲಿ ಅಧಿಕೃತ ಚಾಲನೆ ನೀಡಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ, ಶಾಸಕಿ ಅನಿತಾ ಕುಮಾರಸ್ವಾಮಿ, ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ ಸೇರಿದಂತೆ ಹಲವು ಶಾಸಕರು ಹಾಗೂ ಸಂಭಾವ್ಯ ಅಭ್ಯರ್ಥಿಗಳು ಹೋಮ, ವಿಶೇಷ ಪೂಜೆಯಲ್ಲಿ ಪಾಲ್ಗೊಂಡಿದ್ದರು.

ಯಾತ್ರೆಗೆಂದು ವಿಶೇಷವಾಗಿ ಸಿದ್ಧಪಡಿಸಿರುವ ವಾಹನಗಳಿಗೆ ಪೂಜೆ ಸಲ್ಲಿಸಿ ಗೌಡರು ಹಸಿರು ನಿಶಾನೆ ತೋರಿದರು. ಬಳಿಕ ಆಂಜನೇಯ ದೇಗುಲ, ದರ್ಗಾಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿ ದರು.

ಕೆಸರು ಗದ್ದೆಯಾದ ಮೈದಾನ, ರದ್ದಾದ ಸಮಾವೇಶ: ಮಧ್ಯಾಹ್ನ ಆಯೋಜಿಸಿದ್ದ ಸಮಾವೇಶ ಮಳೆ ಕಾರಣ ರದ್ದಾಯಿತು. ನಗರದ 32 ಎಕರೆ ಪ್ರದೇಶದಲ್ಲಿ ಸುಮಾರು ಒಂದೂವರೆ ಲಕ್ಷ ಕುರ್ಚಿ ವ್ಯವಸ್ಥೆ ಮಾಡಲಾಗಿತ್ತು. ವಿವಿಧೆ ಜಿಲ್ಲೆ ಗಳಿಂದ ಜನರನ್ನು ಕರೆತರಲು ಸಾವಿರಕ್ಕೂ ಅಧಿಕ ಬಸ್ ವ್ಯವಸ್ಥೆ ಮಾಡಲಾಗಿತ್ತು. ಈ ಪ್ರದೇಶ ಕೆಸರು ಗದ್ದೆಯಂತಾಗಿತ್ತು. ಜನರು ಫ್ಲೆಕ್ಸ್ ಹಾಗೂ ಬ್ಯಾನರ್ ಕಿತ್ತು ತಲೆಮೇಲೆ ಇಟ್ಟುಕೊಂಡು ಮಳೆಯಿಂದ ರಕ್ಷಿಸಿಕೊಂಡರು.

ಮೊದಲ ದಿನ ತಾಲ್ಲೂಕಿನ ಬಟ್ಲಬಾವನಹಳ್ಳಿ ಗ್ರಾಮದಲ್ಲಿ ಗ್ರಾಮ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಮಳೆಯಿಂದ ಅದೂ ರದ್ದಾಯಿತು.

ಗ್ರಾಮಸ್ಥರಿಗೆ ಬೇಸರವಾಗದಿರಲೆಂದು ಕುಮಾರಸ್ವಾಮಿ ಗ್ರಾಮಕ್ಕೆ ಭೇಟಿ ನೀಡಿ ಹಿಂದಿರುಗಿದರು.

'ತೆಲಂಗಾಣ ಸಚಿವ ರಾಜೇಂದ್ರ ರೆಡ್ಡಿ ಕೂಡ ಬಂದಿದ್ದರು. ಗಡಿಭಾಗದಲ್ಲಿ ಅವರು ನಮಗೆ ಸಹಕಾರ ನೀಡಲಿದ್ದಾರೆ' ಎಂದು ಕುಮಾರಸ್ವಾಮಿ ಹೇಳಿದರು.



ಮುಳಬಾಗಿಲು ತಾಲ್ಲೂಕಿನ ಕುರುಡುಮಲೆ ಗಣೇಶನ ದೇಗುಲದಲ್ಲಿ ಮಂಗಳವಾರ ಎಚ್‌.ಡಿ.ದೇವೇಗೌಡರು ಜೆಡಿಎಸ್ ಪಂಚರತ್ನ ರಥಯಾತ್ರೆಗೆ ಅಧಿಕೃತವಾಗಿ ಚಾಲನೆ ನೀಡಿದರು. ಎಚ್‌.ಡಿ.ಕುಮಾರಸ್ವಾಮಿ ಇದ್ದಾರೆ

> ಎರಡಂಕಿ ದಾಟುವುದಿಲ್ಲ ಎಂಬ ಆರ್.ಅಶೋಕ ಟೀಕೆಗೆ ಈಗ ಏಕೆ ಉತ್ತರ ಕೊಡಲಿ? 2023ರ ಚುನಾವಣೆ ಫಲಿತಾಂಶದ ಬಳಿಕ ಬಿಜೆಪಿಯವರು ಯಾರ ಮನೆಗೆ ಅಲೆಯುತ್ತಾರೆಂಬುದು ಗೊತ್ತಾಗಲಿದೆ
> – ಎಚ್‌.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಸೇತುವೆ ದುರಂತ ಸ್ಥಳಕ್ಕೆ ಮೋದಿ ಭೇಟಿ

ಮೊರ್ಬಿ (ಪಿಟಿಐ): ಮೊರ್ಬಿ ತೂಗುಸೇತುವೆ ಕುಸಿತದ ಕುರಿತು 'ವಿವರವಾದ ಮತ್ತು ವ್ಯಾಪಕವಾದ' ತನಿಖೆ ನಡೆಸಬೇಕು. ತನಿಖೆಯಿಂದ ತಿಳಿದು ಬಂದ ಅಂಶಗಳನ್ನು ಸಾಧ್ಯವಾದಷ್ಟು ಬೇಗ ಅನುಷ್ಠಾನಕ್ಕೆ ತರಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದ್ದಾರೆ.

ಸೇತುವೆ ಕುಸಿದ ಸ್ಥಳ ಮತ್ತು ಗಾಯಾಳುಗಳು ಚಿಕಿತ್ಸೆ ಪಡೆಯುತ್ತಿದ್ದ ಆಸ್ಪತ್ರೆಗೆ ಮೋದಿ ಅವರು ಭೇಟಿ ಕೊಟ್ಟರು. ಉನ್ನತ ಮಟ್ಟದ ಸಭೆ ನಡೆಸಿದ ಅವರು ಪರಿಸ್ಥಿತಿಯ ಪರಾಮರ್ಶೆ ನಡೆಸಿದರು ಎಂದು ಪ್ರಧಾನಿ ಕಾರ್ಯಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ದುರಂತಕ್ಕೆ ಕಾರಣವಾದ ಎಲ್ಲ ಅಂಶಗಳನ್ನು ಗುರುತಿಸಬೇಕು. ಬಾಧಿತ ಕುಟುಂಬಗಳ ಜತೆಗೆ ಅಧಿಕಾರಿಗಳು ಸಂಪರ್ಕದಲ್ಲಿ ಇರಬೇಕು. ಈ ದುರಂತದ ಸಂದರ್ಭದಲ್ಲಿ ಅವರಿಗೆ ಅಗತ್ಯವಾದ ಎಲ್ಲ ನೆರವು ದೊರೆಯುವಂತೆ ನೋಡಿಕೊಳ್ಳಬೇಕು ಎಂದು ಹೇಳಿದ್ದಾರೆ. ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಮುಂತಾದವರು ಸಭೆಯಲ್ಲಿ ಹಾಜರಿದ್ದರು.

ಇನ್ನಷ್ಟು ಸುದ್ದಿಗಳು 9

ಪ್ರಧಾನಿ ಅವರಿಂದ ವರ್ಚುವಲ್ ಉದ್ಘಾಟನೆ

3 ದಿನ ಉದ್ಯಮದ ಹಬ್ಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಷ್ಠಿತ ಜಾಗತಿಕ ಹೂಡಿಕೆದಾರರ ಸಮಾವೇಶ ನಗರದ ಅರಮನೆ ಮೈದಾನದಲ್ಲಿ ಬುಧವಾರದಿಂದ (ನ.2 ರಿಂದ 4) ಆರಂಭಗೊಳ್ಳಲಿದ್ದು, ಪ್ರಧಾನಿ ನರೇಂದ್ರ ಮೋದಿಯವರು ವರ್ಚುವಲ್ ಆಗಿ ಇದರ ಉದ್ಘಾಟನೆ ನೆರವೇರಿಸಲಿದ್ದಾರೆ.

ಕೋವಿಡ್ ಸಂಕಷ್ಟದಿಂದ ಹೊರಬಂದಿರುವುದರಿಂದ ಪೂರ್ಣ ಪ್ರಮಾಣದಲ್ಲಿ ಈ ಸಮಾವೇಶ ನಡೆಯಲಿದ್ದು, ವಿಶ್ವದ ಹಲವು ರಾಷ್ಟ್ರಗಳ ಪ್ರತಿನಿಧಿಗಳು, ಉದ್ಯಮಿಗಳು ಭಾಗವಹಿಸಲಿದ್ದಾರೆ. ಇದರಿಂದಾಗಿ ರಾಜ್ಯಕ್ಕೆ ₹5 ಲಕ್ಷ ಕೋಟಿ ಬಂಡವಾಳ ಹರಿದು ಬರುವ ವಿಶ್ವಾಸವನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ವ್ಯಕ್ತಪಡಿಸಿದರು.

ದೇಶ– ವಿದೇಶಗಳ ಉದ್ಯಮ ಕ್ಷೇತ್ರಗಳ ದಿಗ್ಗಜರು ಭಾಗವಹಿಸಲಿದ್ದಾರೆ. ಈ ಬಾರಿ ಸಮಾವೇಶಕ್ಕೆ 'ಬಿಲ್ಡ್ ಫಾರ್ ವರ್ಲ್ಡ್' ಎಂಬ ಘೋಷ ವಾಕ್ಯವನ್ನು ಇಡಲಾಗಿದೆ. ಕಾರ್ಯಕ್ರಮದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಭಾಗವಹಿಸಲಿದ್ದಾರೆ.

8ನೇ ಪುಟ ನೋಡಿ

ಪ್ರಮುಖ ಉದ್ಯಮಿಗಳ ಭಾಷಣ

ಜೆಎಸ್‌ಡಬ್ಲ್ಯು ಅಧ್ಯಕ್ಷ ಸಜ್ಜನ್ ಜಿಂದಾಲ್, ಸ್ಟೆರ್ಲೈಟ್ ಪವರ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಪ್ರತೀಕ್ ಅಗರ್‌ವಾಲ್, ಅದಾನಿ ಪೋರ್ಟ್ ಮತ್ತು ಎಸ್‌ಇಝಡ್‌ನ ಕರಣ್ ಗೌತಮ್ ಅದಾನಿ, ಭಾರ್ತಿ ಎಂಟರ್‌ಪ್ರೈಸಸ್‌ನ ರಾಜನ್ ಭಾರ್ತಿ ಮಿತ್ತಲ್, ವಿಪ್ರೊ ಅಧ್ಯಕ್ಷ ರಿಶದ್ ಪ್ರೇಮ್‌ಜಿ, ಕಿರ್ಲೋಸ್ಕರ್ ಸಿಸ್ಟಮ್ಸ್‌ನ ವ್ಯವಸ್ಥಾಪಕ ನಿರ್ದೇಶಕ ವಿಕ್ರಂ ಕಿರ್ಲೋಸ್ಕರ್, ಆದಿತ್ಯ ಬಿರ್ಲಾ ಗ್ರೂಪ್‌ನ ಅಧ್ಯಕ್ಷ ಕೆ.ಎಂ.ಬಿರ್ಲಾ ವಿಶೇಷ ಭಾಷಣ. ಕೇಂದ್ರ ಸಚಿವರಾದ ಪೀಯೂಷ್ ಗೋಯಲ್, ನಿರ್ಮಲಾ ಸೀತಾರಾಮನ್ ಅವರಿಂದ ಪ್ರಧಾನ ಭಾಷಣ.

ಗುರುವಾರ ನಡೆಯುವ 'ಲಿಂಗ ಸಮಾನತೆ' ಕುರಿತ ಗೋಷ್ಠಿಯಲ್ಲಿ ಮಹಿಳಾ ಉದ್ಯಮಿಗಳಾದ ಸೇಲ್ಸ್‌ಫೋರ್ಸ್ ಇಂಡಿಯಾದ ಅಧ್ಯಕ್ಷೆ ಅರುಂಧತಿ ಭಟ್ಟಾಚಾರ್ಯ, ಬಯೋಕಾನ್ ಅಧ್ಯಕ್ಷೆ ಕಿರಣ್ ಮಜುಂದಾರ್ ಷಾ, ಗೋದ್ರೆಜ್ ಕನ್ಸ್ಯೂಮರ್ ಪ್ರಾಡಕ್ಟ್ಸ್‌ನ ನಿಸಬಾ ಗೋದ್ರೆಜ್, ಐಎನ್‌ಕೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲಕ್ಷ್ಮಿ ಪಾತುರಿ, ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರೂ ವಿಷಯ ಮಂಡಿಸಲಿದ್ದಾರೆ.

ಮುಖ್ಯಮಂತ್ರಿ ಸಂದರ್ಶನ 8

'ಪೊಲೀಸ್ ನೇಮಕ ವಯೋಮಿತಿ ಸಡಿಲಿಕೆ ಚಿಂತನೆ'

ತುಮಕೂರು: ಪೊಲೀಸರ ನೇಮಕಾತಿಯಲ್ಲಿ 2 ವರ್ಷ ವಯೋಮಿತಿ ಹೆಚ್ಚಿಸುವ ಕುರಿತು ಚಿಂತನೆ ನಡೆದಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಮಂಗಳವಾರ ಹೇಳಿದ್ದಾರೆ. 5



3 ಕಿ.ಮೀ ಉದ್ದದ ಬಾವುಟ ಬೆಳಗಾವಿಯಲ್ಲಿ ಮಂಗಳವಾರ ನಡೆದ ಕರ್ನಾಟಕ ರಾಜ್ಯೋತ್ಸವದ ಮೆರವಣಿಗೆಯಲ್ಲಿ 3 ಕಿ.ಮೀ ಉದ್ದದ ಕನ್ನಡ ಬಾವುಟ ಪ್ರದರ್ಶನ ಗಮನ ಸೆಳೆಯಿತು. ಬೆಂಗಳೂರಿನ 'ಕನ್ನಡ ಮನಸ್ಸುಗಳು' ತಂಡ ಗಿನ್ನಿಸ್ ದಾಖಲೆಗಾಗಿ ಈ ಬಾವುಟವನ್ನು ಸಿದ್ಧಪಡಿಸಿತ್ತು ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

'ರಾಜ್ಯೋತ್ಸವ ಪ್ರಶಸ್ತಿ: ವಯೋಮಿತಿ ಬದಲಾವಣೆ'

ಬೆಂಗಳೂರು: 'ರಾಜ್ಯೋತ್ಸವ ಪ್ರಶಸ್ತಿಗೆ 60 ವರ್ಷದ ವಯೋಮಿತಿ ನಿಗದಿಪಡಿಸಿರುವುದು ಸರಿಯಾದ ಕ್ರಮವಲ್ಲ. ಈ ನಿಯಮ ಬದಲಿಸಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಮಂಗಳವಾರ ರಾತ್ರಿ ವಿವಿಧ ಕ್ಷೇತ್ರದ 67 ಸಾಧಕರು ಹಾಗೂ 10 ಸಂಸ್ಥೆಗಳಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡುವುದಕ್ಕೂ ಮೊದಲು ಅವರು ಮಾತನಾಡಿದರು.

'ಚಿಕ್ಕ ವಯಸ್ಸಿನಲ್ಲಿ ಸಾಧಿಸಿದ್ದರೂ 60 ವರ್ಷದ ತನಕ ರಾಜ್ಯೋತ್ಸವ ಪ್ರಶಸ್ತಿಗೆ ಕಾಯಬೇಕಿದೆ. ಸಣ್ಣ ವಯಸ್ಸಿನಲ್ಲಿಯೇ ಸಾಧಕರನ್ನು ಗುರುತಿಸಿದರೆ ಇತರರಿಗೂ ಪ್ರೇರಣೆ ಆಗಲಿದೆ. ವಯಸ್ಸಿನ ಮಿತಿ ಹೇರಿ ಸರ್ಕಾರ ತಪ್ಪು ಮಾಡಿತ್ತು' ಎಂದರು.

'ತಮ್ಮಷ್ಟಕ್ಕೆ ಸಾಧನೆ ಮಾಡಿದ್ದವರನ್ನು ಈ ವರ್ಷ ಗುರುತಿಸಿದ್ದೇವೆ. ಹೀಗಾಗಿ ಪ್ರಶಸ್ತಿಯೇ ಮೆರುಗು ಹೆಚ್ಚಿಸಿಕೊಂಡಿದೆ' ಎಂದರು.

₹1.52ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ಅಕ್ಟೋಬರ್ ತಿಂಗಳಲ್ಲಿ ₹ 1.52 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಇದು ಜಿಎಸ್‌ಟಿ ಜಾರಿಗೆ ಬಂದ ನಂತರದಲ್ಲಿ ಆಗಿರುವ ಎರಡನೆಯ ಅತಿಹೆಚ್ಚಿನ ಮಾಸಿಕ ವರಮಾನ ಸಂಗ್ರಹ.

ಅಕ್ಟೋಬರ್ ತಿಂಗಳ ವರಮಾನ ಸಂಗ್ರಹವು ಹಬ್ಬಗಳ ಸಂದರ್ಭದಲ್ಲಿ ದೇಶದಲ್ಲಿ ಆರ್ಥಿಕ ಚಟುವಟಿಕೆಗಳು ಗರಿಗೆದರಿದ್ದವು ಎಂಬುದನ್ನೂ ಸೂಚಿಸುತ್ತಿದೆ. ಹಿಂದಿನ ವರ್ಷದ ಅಕ್ಟೋಬರ್ ತಿಂಗಳಲ್ಲಿ ₹ 1.30 ಲಕ್ಷ ಕೋಟಿ ವರಮಾನ ಸಂಗ್ರಹವಾಗಿತ್ತು.

8ನೇ ಪುಟ ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ



ಯಲ್ಲಾಪುರ ತಾಲ್ಲೂಕಿನ ಶಿವಪುರ ಗ್ರಾಮದಲ್ಲಿ ನಡೆದ ಘಟನೆ

ತೂಗುಸೇತುವೆ ಮೇಲೆ ಕಾರು ಚಾಲನೆ: ಕ್ರಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಕಾರವಾರ: ಯಲ್ಲಾಪುರ ತಾಲ್ಲೂಕಿನ ಶಿವಪುರ ಗ್ರಾಮದಲ್ಲಿ ಕಾಳಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ತೂಗುಸೇತುವೆಯ ಮೇಲೆ ಅಪರಿಚಿತರು ಸೋಮವಾರ ಕಾರನ್ನು ಚಲಾಯಿಸಿಕೊಂಡು ಬಂದಿದ್ದಾರೆ. ಇದಕ್ಕೆ ಸ್ಥಳೀಯರು ಆಕ್ಷೇಪಿಸಿದಾಗ ಕಾರಿನಲ್ಲಿದ್ದವರು ಅನುಚಿತವಾಗಿ ವರ್ತಿಸಿ, ದರ್ಪ ತೋರಿದ್ದಾರೆ ಎಂದು ಸ್ಥಳದಲ್ಲಿದ್ದ ಪ್ರವಾಸಿಗರು ದೂರಿದ್ದಾರೆ.

ಸೇತುವೆಯಲ್ಲಿ ಸುಮಾರು ಮುಂದೆ ಬಂದಿದ್ದ ಕಾರನ್ನು ಸ್ಥಳೀಯರು ತಡೆದು, ಹಿಂದಕ್ಕೆ ಕಳುಹಿಸಿದ್ದಾರೆ. ಸೇತುವೆಗೆ ಹಾನಿಯಾಗಿ ಅಪಾಯವಾದರೆ ಯಾರು ಹೊಣೆಯಾಗುತ್ತಾರೆ ಎಂದು ಪ್ರವಾಸಿಗರು, ಸ್ಥಳೀಯರು ಪ್ರಶ್ನಿಸಿದ್ದಾರೆ.

ಪ್ರಸಿದ್ಧ ಯಾತ್ರಾಸ್ಥಳ ಜೊಯಿಡಾ ತಾಲ್ಲೂಕಿನ ಉಳವಿಯಿಂದ ಬರುವ ಅನೇಕ ಮಂದಿ ಶಿವಪುರದ ತೂಗುಸೇತುವೆಗೆ ಭೇಟಿ ನೀಡುತ್ತಾರೆ.

ಈ ಬಗ್ಗೆ ಕಾರವಾರದಲ್ಲಿ ಮಂಗಳವಾರ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಪ್ರಕರಣದ ಬಗ್ಗೆ ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಸೂಚಿಸಿದ್ದಾಗಿ ತಿಳಿಸಿದ್ದಾರೆ.

'ತೂಗುಸೇತುವೆಗಳ ಸ್ಥಿತಿಗತಿ ಅರಿಯಲು ಮತ್ತು ಅಗತ್ಯವಿರುವ ನಿರ್ವಹಣೆಗೆ ಸಂಬಂಧಿಸಿ ಎಲ್ಲ ಶಾಸಕರು ಮತ್ತು ಜಿಲ್ಲಾಧಿಕಾರಿ ಜೊತೆ ಸಭೆ ನಡೆಸಲಾಗುವುದು. ಜನರಿಗೆ ತೊಂದರೆ ಆಗದಂತೆ ನೋಡಿಕೊಳ್ಳಲಾಗುವುದು' ಎಂದು ಭರವಸೆ ನೀಡಿದ್ದಾರೆ.



ಯಲ್ಲಾಪುರ ತಾಲ್ಲೂಕು ಶಿವಪುರದಲ್ಲಿ ಕಾಳಿ ನದಿಯ ತೂಗುಸೇತುವೆಯ ಮೇಲೆ ಪ್ರವಾಸಿಗರೊಬ್ಬರು ಸೋಮವಾರ ಕಾರು ಚಲಾಯಿಸಿಕೊಂಡು ಬಂದಿದ್ದರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂ: ಬೆಂಅಪ್ರಾ/ನಯೋಸ/ಸಿಎಲ್‌ಯು–120/1703/2022–23 ದಿ: 31.10.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ.ನಂ	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ತಾಯಮ್ಮ	ಆನೇಕಲ್	ಸರ್ಜಾಪುರ	ಕಗ್ಗಲೀಪುರ	79	3–30	ವ್ಯವಸಾಯ	ವಸತಿ
			ಒಟ್ಟು			3–30		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಸುತ್ತಮುತ್ತಲ ಪ್ರದೇಶವು ಅಭಿವೃದ್ಧಿಗೆ ಸಹಕಾರಿಯಾಗಲಿದೆ ಮತ್ತು ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕ ಉಪಯೋಗಕ್ಕೆ ಲಭ್ಯವಾಗುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನುಗಳನ್ನು "ವ್ಯವಸಾಯ ವಲಯ" ದಿಂದ "ವಸತಿ ಉಪಯೋಗಕ್ಕೆ" ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/133/2022-23 ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, ಇಲ್ಲಿ ಕೆಳಗಿನ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ, ಇಲ್ಲಿ ಇನ್ನುಮುಂದೆ **ಷೆಡ್ಯೂಲ್ ಪ್ರಾಪರ್ಟಿ** ಎನ್ನಲಾಗುವ ಮತ್ತು ಬೇಗೂರು ಗ್ರಾಮ, ಸೂಲಿಬೆಲೆ ಹೋಬಳಿ ಮತ್ತು ದಾಸರತಿಮ್ಮನಹಳ್ಳಿ ಗ್ರಾಮ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ, (1) ಸರ್ವೆ ನಂ. 87/1 ವಿಸ್ತೀರ್ಣ ಸುಮಾರು 7 ಗುಂಟೆ, (2) ಸರ್ವೆ ನಂ. 93/4 ವಿಸ್ತೀರ್ಣ ಸುಮಾರು 13 ಗುಂಟೆ, (3) ಸರ್ವೆ ನಂ. 93/5 ವಿಸ್ತೀರ್ಣ ಸುಮಾರು 16 ಗುಂಟೆ, (4) ಸರ್ವೆ ನಂ. 84/10 (ಹಿಂದಿನ ಸರ್ವೆ ನಂ. 84/1ರಲ್ಲಿನ ಭಾಗ) ವಿಸ್ತೀರ್ಣ ಸುಮಾರು 4.5 ಗುಂಟೆ, (5) ಸರ್ವೆ ನಂ. 87/10 (ಹಿಂದಿನ ಸರ್ವೆ ನಂ. 87/5ರಲ್ಲಿನ ಭಾಗ) ವಿಸ್ತೀರ್ಣ ಸುಮಾರು 8 ಗುಂಟೆ, (6) ಸರ್ವೆ ನಂ. 87/11 (ಹಿಂದಿನ ಸರ್ವೆ ನಂ. 87/5ರಲ್ಲಿನ ಭಾಗ) ವಿಸ್ತೀರ್ಣ ಸುಮಾರು 8 ಗುಂಟೆ ವಿಸ್ತೀರ್ಣವುಳ್ಳ ಕೃಷಿ ಜಮೀನುಗಳ ಎಲ್ಲಾ ಭೂಭಾಗಗಳನ್ನು, ಷೆಡ್ಯೂಲ್‌ನಲ್ಲಿ ನಿರ್ದಿಷ್ಟ ಐಟಂ ಎದುರಿಗೆ ಹೆಸರಿಸಲಾಗಿರುವ, ಅವುಗಳ ಪ್ರಸಕ್ತ ಮಾಲಿಕರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಅಥವಾ ಅವುಗಳ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಾಗಲಿ ಅಥವಾ ವ್ಯಕ್ತಿಗಳಿಗಾಗಲಿ ಯಾವುದೇ ಸ್ವರೂಪದ ಯಾವುದೇ ಹಕ್ಕು, ಬಾದ್ಯತೆ, ಹಿತಾಸಕ್ತಿ ಅಥವಾ ಕ್ಲೇಮ್‌ಗಳಿದ್ದಲ್ಲಿ, ಅಥವಾ ಷೆಡ್ಯೂಲ್ ಸ್ವತ್ತಿಗೆ ವಿರುದ್ಧವಾಗಿ ಅಥವಾ ಸ್ವತ್ತಿನ ದಾಖಲಾತಿಗಳ ಬಗ್ಗೆ ಅಥವಾ ಮಾಲಿಕರ ವಿರುದ್ಧವಾಗಲಿ ಯಾವುದೇ ಕ್ಲೇಮ್ ಹೊಂದಿದ್ದಲ್ಲಿ ಅಥವಾ ನಮ್ಮ ಕಕ್ಷಿದಾರರ ಈ ವ್ಯವಹಾರಕ್ಕೆ ಆಕ್ಷೇಪಣೆ ಹೊಂದಿದ್ದಲ್ಲಿ, ಅಂತಹವರು ಕಡ್ಡಾಯವಾಗಿ ಸದರಿ ನೋಟಿಸ್ ಹೊರಡಿಸಿದ ದಿನಾಂಕದಿಂದ **ಹದಿನೈದು ದಿನಗಳೊಳಗೆ** (15 ದಿನಗಳು), ತಾವು ಕ್ಲೇಮ್ ಮಾಡುವ ಷೆಡ್ಯೂಲ್ ಸ್ವತ್ತಿಗೆ ಅಥವಾ ಸ್ವತ್ತಿನ ಭಾಗಕ್ಕೆ ಸಂಬಂಧಿತ ಕ್ಲೇಮ್‌ನ್ನು ಪುರಸ್ಕರಿಸಬಲ್ಲ ಮತ್ತು ಖಚಿತಪಡಿಸಬಲ್ಲ ದಾಖಲಾತಿ ಪುರಾವೆಗಳ ಸಮೇತ ಇಲ್ಲಿ ಕೆಳಗೆ ಸಹಿ ಹಾಕಿರುವವರಿಗೆ ಬರೆದು ತಿಳಿಸತಕ್ಕದ್ದು. ನಿಗದಿತ ಅವಧಿಯ ನಂತರ ನಮ್ಮ ಕಕ್ಷಿದಾರರು, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಯಾವುದೇ ಸ್ವರೂಪದ ಕ್ಲೇಮ್‌ಗಳಿಲ್ಲ ಎಂದು ಪರಿಭಾವಿಸಿ ತಮ್ಮ ವ್ಯವಹಾರವನ್ನು ಮುಂದುವರಿಸುತ್ತಾರೆ.

ಷೆಡ್ಯೂಲ್

ಬೇಗೂರು ಗ್ರಾಮ, ಸೂಲಿಬೆಲೆ ಹೋಬಳಿ ಮತ್ತು ದಾಸರತಿಮ್ಮನಹಳ್ಳಿ ಗ್ರಾಮ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ, ಎಲ್ಲಾ ಸೇರಿ ಒಟ್ಟು ಸುಮಾರು 01 ಎಕರೆ 16.5 ಗುಂಟೆ, ಸೇರಿದ ಎಲ್ಲಾ ಕೃಷಿ ಜಮೀನುಗಳ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸರ್ವೆ ನಂಬರ್ ವಿವರಗಳು ಹಾಗೂ ಚಕ್ಕುಬಂದಿ ಕೆಳಗಿನಂತಿರುತ್ತದೆ:–

ಐಟಂ ನಂ.	ಸರ್ವೆ ನಂ.	ಮಾಲಿಕರ ಹೆಸರು	ವಾಸ್ತವ ಕ್ಷೇತ್ರಫಲ		ಖರಾಬ್ ವಿಸ್ತೀರ್ಣ		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
			ಎಕರೆ	ಗುಂಟೆ	ಎಕರೆ	ಗುಂಟೆ				
1.	87/1	ಮುನಿವೆಂಕಟಪ್ಪ ಬಿನ್ ಹನುಮಪ್ಪ	0	07	00	00	ಸರ್ವೆ ನಂ.84/5, 84/9&86	ಸರ್ವೆ ನಂ. 91/4 & 91/7	ಸರ್ವೆ ನಂ. 93/10	ಸರ್ವೆ ನಂ. 87/2
2.	93/4	ಬಿ ಮುನಿಶಾಮಿಗೌಡ ಬಿನ್ ಲೇಟ್ ಭೀಮಣ್ಣ	0	13	00	00	ಸರ್ವೆ ನಂ. 93/5	ಸರ್ವೆ ನಂ. 95	ಸರ್ವೆ ನಂ. 93/3ಎ	ಕಾಲುವೆ & ಸರ್ವೆ ನಂ. 92/3 & 92/4
3.	93/5	ಬಿ ಮುನಿಶಾಮಿಗೌಡ ಬಿನ್ ಲೇಟ್ ಭೀಮಣ್ಣ	0	16	00	00	ಸರ್ವೆ ನಂ. 81/1	ಸರ್ವೆ ನಂ. 93/4	ಸರ್ವೆ ನಂ.93/3ಬಿ	ಕಾಲುವೆ, ನಾಲೆ & ಸರ್ವೆ ನಂ. 93/6ಎ
4.	84/10 (ಹಳೆಯ ನಂ. 84/1)	ಬಿ ಮುನಿಶಾಮಿಗೌಡ ಬಿನ್ ಲೇಟ್ ಭೀಮಣ್ಣ	0	04.5	00	00	ಸರ್ವೆ ನಂ. 84/1	ಸರ್ವೆ ನಂ.93/6ಎ&93/6ಬಿ	ಸರ್ವೆ ನಂ. 82	ಸರ್ವೆ ನಂ. 83/1ಬಿ & 83/1ಎ
5.	87/10 (ಹಳೆಯ ನಂ. 87/5)	ಬಿ ಮುನಿಶಾಮಿಗೌಡ ಬಿನ್ ಲೇಟ್ ಭೀಮಣ್ಣ	0	08	00	00	ಕಾಲುವೆ	ನಾಲಾ&ಸರ್ವೆ ನಂ. 87/3	ಸರ್ವೆ ನಂ. 87/11	ನಾಲಾ & ಸರ್ವೆ ನಂ. 87/5 & 87/17
6.	87/11 (ಹಳೆಯ ನಂ. 87/5)	ಬಿ ಮುನಿಶಾಮಿಗೌಡ ಬಿನ್ ಲೇಟ್ ಭೀಮಣ್ಣ	0	08	00	00	ಕಾಲುವೆ	ನಾಲಾ&ಸರ್ವೆ ನಂ. 87/3	ಸರ್ವೆ ನಂ. 87/14, 87/15 & 87/16	ಸರ್ವೆ ನಂ. 87/10
		ಒಟ್ಟು	1	16.5	00	00				

ಸಹಿ/– (ಕೆ.ಎನ್. ಗೀತಾ)
ಇಂಡಸ್‌ಲಾ
7ನೇ ಅಡ್ಡರಸ್ತೆ, ವಸಂತನಗರ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560001, ಫೋನ್ ನಂ.: 91–80–42423000

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ. ಬಿ/ಟಿಆರ್‌ಡಿ.2022–23/06
ದಿನಾಂಕ : 27–10–2022


ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಕೆಲಸದ ಹೆಸರು	ಅಂದಾಜು ಮೌಲ್ಯ
1	ಬೆಂಗಳೂರು ವಿಭಾಗದ ಟವರ್ ವ್ಯಾಗನ್‌ಗಳಿಗಾಗಿ 2 ವರ್ಷಗಳ ಅವಧಿಗಾಗಿ ಸಮಗ್ರ ನಿರ್ವಹಣಾ ಗುತ್ತಿಗೆ.	ರೂ. 2,90,37,357.76
2	ಬೆಂಗಳೂರು – ಜೋಲಾರಪೇಟೆಯಲ್ಲಿ ಎಂಝೆಡ್‌ವಿ ಯಾರ್ಡ್ ಕಿ.ಮೀ. 293ನಲ್ಲಿ ತಗ್ಗಿನ ಹಂತದ ಪ್ಲ್ಯಾಟ್‌ಫಾರಂನ ಒದಗಿಸುವಿಕೆಯಿಂದ ಓಹೆಚ್‌ಇಗೆ ಮಾರ್ಪಾಡು ಮತ್ತು ಐಸೊಲೇಟರ್‌ಗಳು, ಸಿಟಿ, ಬ್ಯಾಟರಿ, ಸಿಎ ಇತ್ಯಾದಿಗಳಂತಹ ಓಹೆಚ್‌ಇ/ಪಿಎಸ್‌ಐ ಉಪಕರಣಗಳ ಏಜ್ ಕಂ ಕಂಡಿಷನ್ ಆಧಾರದ ಮೇಲೆ ಬದಲಾವಣೆ ಮತ್ತು ಉನ್ನತೀಕರಣ.	ರೂ. 59,54,781.15

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 17–11–2022ರಂದು 15:00 ಗಂಟೆವರೆಗೆ.

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಟಿಆರ್‌ಡಿ
ಪಿಯುಬಿ/458/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23 ಬೆಂಗಳೂರು
S.W.Railways SWRRLY SWRRLY



ಬೆಂಗಳೂರು ಆಗ್ನೇಯ ವಿಭಾಗದ ಠಾಣೆಯಲ್ಲಿ ತೆರೆಯಲಾದ ಜನಸ್ನೇಹಿ ಗ್ರಂಥಾಲಯದಲ್ಲಿರುವ ಪುಸ್ತಕಗಳನ್ನು ಡಿಸಿಪಿ ಸಿ.ಕೆ. ಬಾಬಾ ವೀಕ್ಷಿಸಿದರು

ಪೊಲೀಸ್ ಠಾಣೆಗಳಲ್ಲಿ ಗ್ರಂಥಾಲಯ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿರುವ ಆಗ್ನೇಯ ವಿಭಾಗದ ಪೊಲೀಸರು, ಕೆಲ ಠಾಣೆಗಳಲ್ಲಿ ಪ್ರಾಯೋಗಿಕವಾಗಿ ಜನಸ್ನೇಹಿ ಗ್ರಂಥಾಲಯ ತೆರೆದಿದ್ದಾರೆ. ರಾಜ್ಯೋತ್ಸವ ದಿನವಾದ ಮಂಗಳವಾರ ಗ್ರಂಥಾಲಯಗಳನ್ನು ಉದ್ಘಾಟಿಸಿದ ಹಿರಿಯ ನಾಗರಿಕರು, ಜನರ ಓದಿಗೆ ಮುಕ್ತಗೊಳಿಸಿದರು.

ಕೋರಮಂಗಲ, ಮೈಕೊ ಲೇಔಟ್ ಹಾಗೂ ಎಲೆಕ್ಟ್ರಾನಿಕ್ ಸಿಟಿ ಠಾಣೆಗಳಲ್ಲಿ ಪ್ರತ್ಯೇಕವಾಗಿ ಗ್ರಂಥಾಲಯಗಳನ್ನು ತೆರೆಯಲಾಗಿದೆ. ಕುವೆಂಪು, ದ.ರಾ. ಬೇಂದ್ರೆ, ಚಂದ್ರಶೇಖರ್ ಕಂಬಾರ ಸೇರಿದಂತೆ ವಿವಿಧ ಸಾಹಿತಿಗಳ ಪುಸ್ತಕಗಳು ಹಾಗೂ ದಿನಪತ್ರಿಕೆಗಳು ಗ್ರಂಥಾಲಯದಲ್ಲಿ ಲಭ್ಯವಿರಲಿವೆ. ಠಾಣೆಗೆ ಬರುವ ಪ್ರತಿಯೊಬ್ಬರು ಗ್ರಂಥಾಲಯದಲ್ಲಿರುವ ಪುಸ್ತಕಗಳನ್ನು ಪಡೆದುಕೊಂಡು ಓದಲು ಅವಕಾಶ ಇರಲಿದೆ.

ಸಾಹಿತಿ ಹುಯಿಲಗೋಳ ನಾರಾಯಣರಾವ್ ಅವರ ಮೊಮ್ಮಗಳು ರಾಧಾ ಕುಲಕರ್ಣಿ, ಡಾ. ಬಾಬು ಕೃಷ್ಣಮೂರ್ತಿ, ಪತ್ರಕರ್ತ ಸತೀಶ ಚಪ್ಪರಿಕೆ ಹಾಗೂ ಇತರರು ಗ್ರಂಥಾಲಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

‘ಜನರು ಮತ್ತು ಪೊಲೀಸರ ಮಧ್ಯೆ ಉತ್ತಮ ಬಾಂಧವ್ಯ ವೃದ್ಧಿಸಬೇಕಿದೆ. ಸದ್ಯ ಠಾಣೆಗೆ ಬರುವ ಹಲವು ಜನ, ಅನಗತ್ಯವಾಗಿ ಸಮಯ ಕಳೆಯುತ್ತಾರೆ. ಇಂಥವರಲ್ಲಿ ಓದುವ ಹವ್ಯಾಸ ಹೆಚ್ಚಿಸುವುದಕ್ಕಾಗಿ ಠಾಣೆಗಳಲ್ಲಿ ಗ್ರಂಥಾಲಯ ತೆರೆಯಲಾಗಿದೆ’ ಎಂದು ಆಗ್ನೇಯ ವಿಭಾಗದ ಡಿಸಿಪಿ ಸಿ.ಕೆ. ಬಾಬಾ ಹೇಳಿದರು.

ಕಾಡುಮಲ್ಲಿಕಾರ್ಜುನ ದೇಗುಲದಲ್ಲಿ 4ರಿಂದ ಮಹಾಕುಂಭಾಭಿಷೇಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡು ಮಲ್ಲೇಶ್ವರ ಬಳಗದ ವತಿಯಿಂದ 12 ವರ್ಷಗಳ ನಂತರ ಕಾಡುಮಲ್ಲಿಕಾರ್ಜುನ ದೇವಾಲಯದ ಮಹಾಕುಂಭ ಅಭಿಷೇಕ ಮತ್ತು ಸಹಸ್ರ ಕಳಶ ಅಭಿಷೇಕ ಮಹೋತ್ಸವ ಕಾರ್ಯಕ್ರಮ ನ. 4ರಿಂದ 7ರ ವರೆಗೆ ಮಲ್ಲೇಶ್ವರದಲ್ಲಿ ನಡೆಯಲಿದೆ.

‘ಕಾಡುಮಲ್ಲಿಕಾರ್ಜುನ ಸ್ವಾಮಿಯ ರಾಜಗೋಪುರ, ವಿಮಾನಗೋಪುರ, ದಕ್ಷಿಣಮುಖ ನಂದಿ ತೀರ್ಥ ಕಲ್ಯಾಣಿ ದೇವಾಲಯದ ಮಹಾನಂದಿ ರಾಜಗೋಪುರ ಮತ್ತು ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಸ್ಥಾನದ ವಿಮಾನ ಗೋಪುರಗಳ ಮಹಾಕುಂಭ ಅಭಿಷೇಕಕ್ಕೆ ಭಾನುವಾರ ಚಾಲನೆ ನೀಡಲಾಗುವುದು’ ಎಂದು ಬಳಗದ ಅಧ್ಯಕ್ಷ ಬಿ.ಕೆ. ಶಿವರಾಂ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಗಂಗಾ, ತುಂಗಾ, ಕಾವೇರಿ, ಕುಮಾರಧಾರ, ಘಟಪ್ರಭಾ ಸೇರಿ 30ಕ್ಕೂ ಪವಿತ್ರ ನದಿಗಳ ನೀರನ್ನು ಕಾಡುಮಲ್ಲಿಕಾರ್ಜುನ ಸ್ವಾಮಿಗೆ ಜಲಾಭಿಷೇಕ ಮಾಡಲಾಗುತ್ತದೆ. ಅಂದಾಜು 3 ಲಕ್ಷ ಭಕ್ತರು ಭೇಟಿ ನೀಡುವ ನಿರೀಕ್ಷೆ ಇದೆ. ದರ್ಶನಕ್ಕೆ ಬರುವ ಎಲ್ಲರಿಗೂ ಪ್ರಸಾದ ವಿನಿಯೋಗ ವ್ಯವಸ್ಥೆ ಮಾಡಲಾಗುತ್ತದೆ’ ಎಂದರು.

‘ಕೋಡಿಮಠ ಸಂಸ್ಥಾನದ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ, ಉಡುಪಿ ಪಲಿಮಾರು ಮಠದ ವಿದ್ಯಾಧೀಶ ತೀರ್ಥ ಶ್ರೀಪಾದ ಸ್ವಾಮೀಜಿ, ಡಾ.ಸಿ.ಎನ್ ಅಶ್ವತ್ಥನಾರಾಯಣ ಭಾಗವಹಿಸಲಿದ್ದಾರೆ’ ಎಂದು ತಿಳಿಸಿದರು.

ಟಿಮ್‌ಕೆನ್ ಇಂಡಿಯಾ ನಿಯಮಿತ

TIMKEN

CIN - L29130KA1996PLC048230

ನೋಂದಣಿ ಕಛೇರಿ: 39–42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100
ದೂರವಾಣಿ : 080 41362000 ಫ್ಯಾಕ್ಸ್: 080 41362010 ಇ–ಮೇಲ್ : tilinvestor@timken.com
ವೆಬ್‌ಸೈಟ್ : www.timken.com/en-in

ಸೆಕ್ಯೂರಿಟೀಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ಸೆಪ್ಟೆಂಬರ್ 30, 2022ಕ್ಕೆ ಕೊನೆಗೊಂಡ ಅರ್ಧ ವಾರ್ಷಿಕ ಅವಧಿಯ ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶದ ಪ್ರತ್ಯೇಕವಾದ ಸಾರಾಂಶ

(ರೂ. ದಶಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	30/09/2022 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಲ್ಲದ)	30/09/2021ಕ್ಕೆ ಕೊನೆಗೊಂಡ ಕಳೆದ ವರ್ಷದ ತ್ರೈಮಾಸಿಕಕ್ಕೆ ಅನುಗುಣವಾಗಿ (ಪರಿಶೋಧಿತವಲ್ಲದ)	31/03/2022 ಕ್ಕೆ ಕೊನೆಗೊಂಡ ವಾರ್ಷಿಕ ಅವಧಿ (ಪರಿಶೋಧಿತವಾದ)
1.	ಕಾರ್ಯಾಚರಣೆಯಿಂದ ಒಟ್ಟು ಆದಾಯ (ನಿವ್ವಳ)	7,169	5,617	22,175
2.	ನಿವ್ವಳ ಲಾಭ / (ನಷ್ಟ) ಈ ಅವಧಿಗೆ (ತೆರಿಗೆ, ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ಮುನ್ನ)	1,314	1,067	4,382
3.	ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ಮುನ್ನ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ)	1,314	1,067	4,382
4.	ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ನಂತರ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ)	976	792	3,271
5.	ಈ ಅವಧಿಯ ಒಟ್ಟು ಸಮಗ್ರ ಆದಾಯ {ಲಾಭ/(ನಷ್ಟ) ಒಳಗೊಂಡಂತೆ ಈ ಅವಧಿಗೆ (ತೆರಿಗೆ ನಂತರ) ಹಾಗೂ ಇತರೆ ಸಮಗ್ರ ಆದಾಯ (ತೆರಿಗೆ ನಂತರ)}	974	780	3,247
6.	ಈಕ್ವಿಟಿ ಷೇರು ಬಂಡವಾಳ	752	752	752
7.	ಪ್ರತಿ ಷೇರಿನ ಗಳಿಕೆಗಳು (ಪ್ರತಿ ರೂ.10/– ರಂತೆ) (ನಿರಂತರ ಕಾರ್ಯಾಚರಣೆಗಳಿಗೆ) ಮೂಲತವಾದ ಮತ್ತು ದುರ್ಬಲಗೊಳಿಸಿದ *ವಾರ್ಷಿಕವಲ್ಲದ	12.98*	10.53*	43.49*

ಮೇಲೆ ತಿಳಿಸಿರುವ ಫಲಿತಾಂಶವು ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ತ್ರೈಮಾಸಿಕ ಅವಧಿಯ ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶದ ಸಂಪೂರ್ಣವಾದ ನಮೂನೆಯ ಪ್ರತ್ಯೇಕವಾದ ಸಾರಾಂಶ. ತ್ರೈಮಾಸಿಕದ ಆರ್ಥಿಕ ಫಲಿತಾಂಶದ ಪೂರ್ಣ ನಮೂನೆಯು ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ (BSE: www.bseindia.com & NSE: www.nseindia.com) ಮತ್ತು ಕಂಪನಿ ವೆಬ್‌ಸೈಟ್ www.timken.com/en-in ನಲ್ಲಿ ವೀಕ್ಷಿಸಬಹುದು.


ಮಂಡಳಿಯ ಆದೇಶದಂತೆ
ಸಹಿ/–
ಸಂಜಯ್ ಕೌಲ್
ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು
DIN: 05159352

ಬೆಂಗಳೂರು
1 ನವೆಂಬರ್, 2022

ಕರ್ನಾಟಕ ಬ್ಯಾಂಕ್ ಲಿ.

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 CIN: L85110KA1924PLC001128 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com



ಡಿಜಿಟಲ್ ತಂತ್ರಜ್ಞಾನದ ಬಲದೊಂದಿಗೆ ಶತಮಾನದ ಸಂಭ್ರಮದೆಡೆಗೆ

Celebrating 100 Years of Trust 1924 2024

ಒಟ್ಟು ವ್ಯವಹಾರ ₹ 141506 ಕೋಟಿ | ಠೇವಣಿಗಳು ₹ 81634 ಕೋಟಿ | ಮುಂಗಡಗಳು ₹ 59872 ಕೋಟಿ | ಎನ್‌ಐಎಂ 3.56 % | ನಿವ್ವಳ ಲಾಭ ₹ 526 ಕೋಟಿ | ಕಾಸಾ 32.82 %

ದಿನಾಂಕ 30ನೇ ಸೆಪ್ಟೆಂಬರ್ 2022 ಕ್ಕೆ ಅಂತ್ಯಗೊಂಡ ಸ್ವತಂತ್ರ ಅಪರಿಶೋಧಿತ ತ್ರೈಮಾಸಿಕ / ಅರ್ಧವಾರ್ಷಿಕ ಹಣಕಾಸು ಫಲಿತಾಂಶಗಳು

(₹ ಕೋಟಿಗಳಲ್ಲಿ)

ವಿವರಗಳು	30.09.2022 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಅಪರಿಶೋಧಿತ)	30.09.2021 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಅಪರಿಶೋಧಿತ)	30.09.2022 ಕ್ಕೆ ಅಂತ್ಯಗೊಂಡ ಅರ್ಧವಾರ್ಷಿಕ (ಅಪರಿಶೋಧಿತ)	30.09.2021 ಕ್ಕೆ ಅಂತ್ಯಗೊಂಡ ಅರ್ಧವಾರ್ಷಿಕ (ಅಪರಿಶೋಧಿತ)	31.03.2022 ಕ್ಕೆ ಅಂತ್ಯಗೊಂಡ ವಾರ್ಷಿಕ (ಪರಿಶೋಧಿತ)
ಒಟ್ಟು ನಿರ್ವಹಣಾ ಆದಾಯ (ನಿವ್ವಳ)	2031.09	1829.16	3792.96	3578.31	7175.54
ನಿವ್ವಳ ಲಾಭ / (ನಷ್ಟ) ಪ್ರಸಕ್ತ ಸಾಲಿನಲ್ಲಿ (ತೆರಿಗೆಗೂ ಮುನ್ನ, ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ಮೊದಲು)	591.66	146.39	641.54	192.53	694.56
ನಿವ್ವಳ ಲಾಭ /(ನಷ್ಟ) ತೆರಿಗೆಗೂ ಮುನ್ನ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	591.66	146.39	641.54	192.53	694.56
ನಿವ್ವಳ ಲಾಭ /(ನಷ್ಟ) ಪ್ರಸಕ್ತ ಸಾಲಿನಲ್ಲಿ ತೆರಿಗೆಯ ನಂತರ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	411.63	125.61	525.81	231.69	508.62
ಪಾವತಿಸಲಾದ ಈಕ್ವಿಟಿ ಷೇರು ಬಂಡವಾಳ	311.31	310.88	311.31	310.88	311.17
ಮೀಸಲುಗಳು (ಮರು ಮೌಲ್ಯಾಂಕನ ಮೀಸಲುಗಳನ್ನು ಹೊರತುಪಡಿಸಿ)					6324.61
ಸೆಕ್ಯುರಿಟೀಸ್ ಪ್ರೀಮಿಯಂ ಖಾತೆ	1256.41	1255.01	1256.41	1255.01	1255.97
ನಿವ್ವಳ ಸಂಪತ್ತು	7040.26	6355.15	7040.26	6355.15	6635.78
ಪಾವತಿಯಾದ ಸಾಲ ಬಂಡವಾಳ / ಬಾಕಿ ಇರುವ ಸಾಲ	1270.00	970.00	1270.00	970.00	1270.00
ಕ್ಯಾಪಿಟಲ್ ರಿಡೆಂಪ್ಷನ್ ರಿಸರ್ವ್ / ಡಿಬೆಂಚರ್ ರಿಡೆಂಪ್ಷನ್ ರಿಸರ್ವ್	Nil	Nil	Nil	Nil	Nil
ಬಾಕಿ ಇರುವ ಮರುಗಳಿಕೆಯ ಆದ್ಯತೆಯ ಷೇರುಗಳು	Nil	Nil	Nil	Nil	Nil
ಸಾಲ ಬಂಡವಾಳ ಅನುಪಾತ (ಡೆಬ್ಟ್ ಈಕ್ವಿಟಿ ರೇಷಿಯೋ)	0.16	0.16	0.16	0.16	0.15
ಷೇರಿನ ತಲಾ ಆದಾಯ (ಪ್ರತಿ ರೂ. 10/- ರಂತೆ)					
ಮೂಲಭೂತ (ಬೇಸಿಕ್)	13.22*	4.04*	16.89*	7.45*	16.36
ಡೈಲ್ಯೂಟೆಡ್	13.17*	4.02*	16.83*	7.42*	16.29

*ವಾರ್ಷಿಕವಲ್ಲ.

ಮೇಲಿನ ವಿವರಗಳು SEBI (ಸೆಬಿ) (ಲಿಸ್ಟಿಂಗ್ ಮತ್ತು ಇತರ ಪ್ರಕಟಣೆ ಅಗತ್ಯತೆಗಳು) ನಿಯಮಾವಳಿ 2015 ರ ನಿಯಮ 33 ರ ಪ್ರಕಾರ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಸಲ್ಲಿಸಲಾದ ಸೆಪ್ಟೆಂಬರ್ 30, 2022 ಕ್ಕೆ ಅಂತ್ಯಗೊಂಡ ಫಲಿತಾಂಶಗಳ ವಿವರವಾದ ಸ್ವರೂಪದ ಸಾರವಾಗಿದೆ. ಸೆಪ್ಟೆಂಬರ್ 30, 2022ಕ್ಕೆ ಅಂತ್ಯಗೊಂಡ ಫಲಿತಾಂಶಗಳ ಎಲ್ಲಾ ವಿವರಗಳು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ BSE: http://www.bseindia.com, NSE: http://www.nseindia.com, ಮತ್ತು ಬ್ಯಾಂಕಿನ ವೆಬ್‌ಸೈಟ್ https://www.karnatakaBank.com/index.jsp. ನಲ್ಲಿ ಲಭ್ಯವಿದೆ.

ದಿನಾಂಕ 30ನೇ ಸೆಪ್ಟೆಂಬರ್ 2022 ಕ್ಕೆ ಅಂತ್ಯಗೊಂಡ ಕ್ರೋಢೀಕರಿಸಿದ ಅಪರಿಶೋಧಿತ ತ್ರೈಮಾಸಿಕ / ಅರ್ಧವಾರ್ಷಿಕ ಹಣಕಾಸು ಫಲಿತಾಂಶಗಳು

(₹ ಕೋಟಿಗಳಲ್ಲಿ)

ವಿವರಗಳು	30.09.2022 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಅಪರಿಶೋಧಿತ)	30.09.2021 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಅಪರಿಶೋಧಿತ)	30.09.2022 ಕ್ಕೆ ಅಂತ್ಯಗೊಂಡ ಅರ್ಧವಾರ್ಷಿಕ (ಅಪರಿಶೋಧಿತ)	30.09.2021 ಕ್ಕೆ ಅಂತ್ಯಗೊಂಡ ಅರ್ಧವಾರ್ಷಿಕ (ಅಪರಿಶೋಧಿತ)	31.03.2022 ಕ್ಕೆ ಅಂತ್ಯಗೊಂಡ ವಾರ್ಷಿಕ (ಪರಿಶೋಧಿತ)
ಒಟ್ಟು ನಿರ್ವಹಣಾ ಆದಾಯ (ನಿವ್ವಳ)	2031.09	1829.13	3792.96	3578.25	7175.54
ನಿವ್ವಳ ಲಾಭ / (ನಷ್ಟ) ಪ್ರಸಕ್ತ ಸಾಲಿನಲ್ಲಿ (ತೆರಿಗೆಗೂ ಮುನ್ನ, ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ಮೊದಲು)	591.50	146.24	641.25	192.20	693.93
ನಿವ್ವಳ ಲಾಭ /(ನಷ್ಟ) ತೆರಿಗೆಗೂ ಮುನ್ನ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	591.50	146.24	641.25	192.20	693.93
ನಿವ್ವಳ ಲಾಭ /(ನಷ್ಟ) ಪ್ರಸಕ್ತ ಸಾಲಿನಲ್ಲಿ ತೆರಿಗೆಯ ನಂತರ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	411.47	125.45	525.52	231.36	507.99
ಪಾವತಿಸಲಾದ ಈಕ್ವಿಟಿ ಷೇರು ಬಂಡವಾಳ	311.31	310.88	311.31	310.88	311.17
ಮೀಸಲುಗಳು (ಮರು ಮೌಲ್ಯಾಂಕನ ಮೀಸಲುಗಳನ್ನು ಹೊರತುಪಡಿಸಿ)					6323.87
ಸೆಕ್ಯುರಿಟೀಸ್ ಪ್ರೀಮಿಯಂ ಖಾತೆ	1256.41	1255.01	1256.41	1255.01	1255.97
ನಿವ್ವಳ ಸಂಪತ್ತು	7039.23	6354.71	7039.23	6354.71	6635.04
ಪಾವತಿಯಾದ ಸಾಲ ಬಂಡವಾಳ / ಬಾಕಿ ಇರುವ ಸಾಲ	1270.00	970.00	1270.00	970.00	1270.00
ಕ್ಯಾಪಿಟಲ್ ರಿಡೆಂಪ್ಷನ್ ರಿಸರ್ವ್ / ಡಿಬೆಂಚರ್ ರಿಡೆಂಪ್ಷನ್ ರಿಸರ್ವ್	Nil	Nil	Nil	Nil	Nil
ಬಾಕಿ ಇರುವ ಮರುಗಳಿಕೆಯ ಆದ್ಯತೆಯ ಷೇರುಗಳು	Nil	Nil	Nil	Nil	Nil
ಸಾಲ ಬಂಡವಾಳ ಅನುಪಾತ (ಡೆಬ್ಟ್ ಈಕ್ವಿಟಿ ರೇಷಿಯೋ)	0.16	0.16	0.16	0.16	0.15
ಷೇರಿನ ತಲಾ ಆದಾಯ (ಪ್ರತಿ ರೂ. 10/- ರಂತೆ)					
ಮೂಲಭೂತ (ಬೇಸಿಕ್)	13.22*	4.04*	16.88*	7.44*	16.36
ಡೈಲ್ಯೂಟೆಡ್	13.17*	4.02*	16.82*	7.41*	16.29

*ವಾರ್ಷಿಕವಲ್ಲ.

ಮೇಲಿನ ವಿವರಗಳು SEBI (ಸೆಬಿ) (ಲಿಸ್ಟಿಂಗ್ ಮತ್ತು ಇತರ ಪ್ರಕಟಣೆ ಅಗತ್ಯತೆಗಳು) ನಿಯಮಾವಳಿ 2015 ರ ನಿಯಮ 33 ರ ಪ್ರಕಾರ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಸಲ್ಲಿಸಲಾದ ಸೆಪ್ಟೆಂಬರ್ 30, 2022 ಕ್ಕೆ ಅಂತ್ಯಗೊಂಡ ಫಲಿತಾಂಶಗಳ ವಿವರವಾದ ಸ್ವರೂಪದ ಸಾರವಾಗಿದೆ. ಸೆಪ್ಟೆಂಬರ್ 30, 2022ಕ್ಕೆ ಅಂತ್ಯಗೊಂಡ ಫಲಿತಾಂಶಗಳ ಎಲ್ಲಾ ವಿವರಗಳು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ BSE: http://www.bseindia.com, NSE: http://www.nseindia.com, ಮತ್ತು ಬ್ಯಾಂಕಿನ ವೆಬ್‌ಸೈಟ್ https://www.karnatakaBank.com/index.jsp. ನಲ್ಲಿ ಲಭ್ಯವಿದೆ.

ಸ್ಥಳ : ಮಂಗಳೂರು
ದಿನಾಂಕ : 01.11.2022

ನಿರ್ದೇಶಕ ಮಂಡಳಿಯ ಪರವಾಗಿ
ಸಹಿ/-
ಮಹಾಬಲೇಶ್ವರ ಎಂ.ಎಸ್.
ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿಇಒ

ಚಿತ್ರಾವಳಿ



ಮಲ್ಲೇಶ್ವರ 18ನೇ ತಿರುವಿನ ರಾಜ್‌ಕುಮಾರ್ ಉದ್ಯಾನದಲ್ಲಿ ಬಿಜೆಪಿಯ ಮಾಜಿ ಪಾಲಿಕೆ ಸದಸ್ಯೆ ಸುಮಂಗಳಾ ಕೇಶವ, 60ನೇ ವಾರ್ಡ್ ಸಂಚಾಲಕ ಕೆ.ಶಿವರಾಮ ರಾಜು ಮತ್ತು ಪದಾಧಿಕಾರಿಗಳು ರಾಜ್ಯೋತ್ಸವ ಆಚರಿಸಿದರು



ವಕ್ಫ್ ಮಂಡಳಿಯ ಕಚೇರಿಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಣೆ ಮಾಡಲಾಯಿತು. ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಮ್, ಸದಸ್ಯರಾದ ಆರ್. ಅಬ್ದುಲ್ ರಿಯಾಝ್ ಖಾನ್, ಆಸಿಫ್ ಅಲಿ ಶೇಖ್, ಭೂಸನೂರು ಮಠ, ವಕ್ಫ್ ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಖಾನ್ ಪರ್ವೇಝ್ ಇದ್ದರು



ಕಾಳೇನ ಅಗ್ರಹಾರದ ನೋಬೋನಗರದ ವನಿತಾ ಸಂಘದಿಂದ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಸಂಘದ ಅಧ್ಯಕ್ಷರಾದ ಲಲಿತಾ, ರಂಗಕರ್ಮಿ ಡಿ.ಕೆ. ಮಂಜುನಾಥ್, ಡಾ. ಗಜಾನನ ಶರ್ಮ, ನೋಬೋನಗರ ಅಭಿವೃದ್ಧಿ ಸಂಘದ ಅಧ್ಯಕ್ಷ ರಾಜಪ್ಪ, ವರಸಿದ್ಧಿ ವಿನಾಯಕ ಸಂಘದ ಅಧ್ಯಕ್ಷ ಜಿ. ಡಿ. ಕಾಮತ್ ಇದ್ದರು



ಬಿಟಿಎಂ ವೆಲ್‌ಫೇರ್ ಅಸೋಸಿಯೇಷನ್ ವತಿಯಿಂದ ಮಡಿವಾಳದ ಜವಾಹರಲಾಲ್ ನೆಹರೂ ಮೈದಾನದಲ್ಲಿ 67ನೇ ಕರ್ನಾಟಕ ರಾಜ್ಯೋತ್ಸವವನ್ನು ಆಚರಣೆ ಮಾಡಲಾಯಿತು



ಜೆ.ಪಿ. ನಗರದ ಪತ್ರಿಕಾ ವಿತರಕರು ಸಿಹಿ ಹಂಚುವುದರ ಮೂಲಕ ಕನ್ನಡ ರಾಜ್ಯೋತ್ಸವವನ್ನು ಆಚರಣೆ ಮಾಡಿದರು

ಮೆಟ್ರೊ: ಕ್ಯುಆರ್ ಕೋಡ್ ಬಳಸಿ 1,669 ಟಿಕೆಟ್ ಖರೀದಿ

ಬೆಂಗಳೂರು: ಮೆಟ್ರೊ ರೈಲಿನಲ್ಲಿ ಸಂಚರಿಸಲು ಕ್ಯುಆರ್ ಕೋಡ್ ಬಳಸಿ ಟಿಕೆಟ್ ಖರೀದಿಸುವ ವ್ಯವಸ್ಥೆಗೆ ಅಧಿಕೃತವಾಗಿ ಚಾಲನೆ ಸಿಕ್ಕ ನಂತರ ಮಂಗಳವಾರ ರಾತ್ರಿ 8.45ರ ವರೆಗೆ ಒಟ್ಟು 1,669 ಮಂದಿ ಈ ಸೌಕರ್ಯ ಬಳಸಿ ಪ್ರಯಾಣ ಮಾಡಿದ್ದಾರೆ.

14,400 ಗ್ರಾಹಕರು ವಾಟ್ಸ್ ಆ್ಯಪ್ ಚಾಟ್‌ಬೋಟ್ ಮೂಲಕ ಸಂವಹನ ನಡೆಸಿದ್ದಾರೆ ಎಂದು ಬಿಎಂಆರ್‌ಸಿಎಲ್ ಪ್ರಕಟಣೆ ತಿಳಿಸಿದೆ.

ಭುವನೇಶ್ವರಿ ಭಾವಚಿತ್ರಕ್ಕೆ ಅವಮಾನ: ದೂರು

ಬೆಂಗಳೂರು: 'ಬಾರ್ ಮತ್ತು ವೈನ್ ಮಳಿಗೆಗಳಲ್ಲಿ ಭುವನೇಶ್ವರಿಯ ಭಾವ ಚಿತ್ರಗಳನ್ನು ಅಬಕಾರಿ ಇಲಾಖೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಹೆಸರಿನಲ್ಲಿ ಮಾರಾಟ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಈ ಕೃತ್ಯ ಮಾಡುವವರ ವಿರುದ್ಧ ಕಾನೂನು ಕ್ರಮಕ್ಕೆ ಬೆಂಗಳೂರು ಪೊಲೀಸ್ ಆಯುಕ್ತರಿಗೆ ದೂರು ನೀಡಲಾಗಿದೆ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

'ಚಿತ್ರಕಲಾವಿದ ಬಿ.ಕೆ.ಎಸ್. ಶರ್ಮಾ ಅವರು ಚಿತ್ರಿಸಿದ ತಾಯಿ ಭುವನೇಶ್ವರಿಯ ಭಾವಚಿತ್ರವನ್ನು ಕನ್ನಡಿಗರ ಒತ್ತಾಸೆಯಂತೆ ಮಾರಾಟಕ್ಕೆ ಇರಿಸಲಾಗಿದೆ. ಅಂತರ್ಜಾಲ ತಾಣಗಳಲ್ಲಿ ಎಲ್ಲರ ಕೈಗೆಟಕುವ ರೀತಿಯಲ್ಲಿ ಲಭ್ಯವಿದೆ. ಇದನ್ನು ಕೆಲವರು ಡೌನ್ಲೋಡ್ ಮಾಡಿ, ಹಂಚಿದ್ದಾರೆ. ಕೆಲವು ಸಮಾಜ ಘಾತುಕರು ಕನ್ನಡದ ಹೆಸರಿನಲ್ಲಿ ಭುವನೇಶ್ವರಿಯ ಭಾವಚಿತ್ರಗಳನ್ನು ಬಾರ್‌ಗಳಿಗೆ ಮಾರಾಟ ಮಾಡುತ್ತಿದ್ದಾರೆ' ಎಂದು ಹೇಳಿದ್ದಾರೆ.

'ಈ ಬಗ್ಗೆ ಅಬಕಾರಿ ಆಯುಕ್ತರಿಗೂ ಕಸಾಪ ದೂರು ನೀಡಿದೆ. ಇಂಥ ಅಸಂಬದ್ಧ ವ್ಯಕ್ತಿಗಳು ಯಾರೇ ಆದರೂ ಅವರ ವಿರುದ್ಧ ಕ್ರಮ ನಡೆಯಲೇಬೇಕು' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ವಿವಿಧ ಲೇಖಕರ 10 ಕೃತಿಗಳನ್ನು ಡಾ.ಸಿ.ಎನ್. ಮಂಜುನಾಥ್ ಬಿಡುಗಡೆ ಮಾಡಿದರು. (ಎಡದಿಂದ) ಲೇಖಕರಾದ ರಾಘವ್, ನಾಗವೇಣಿ ಹೆಗಡೆ, ಮಂಜುನಾಥ್ ಚಾಂದ್, ನರೇಂದ್ರ ರೈ ದೇರ್ಲ, ರಂಗಕರ್ಮಿ ಮಂಡ್ಯ ರಮೇಶ್, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ವಿಜಯ ಕರ್ನಾಟಕ ಸಂಪಾದಕ ಸುದರ್ಶನ್ ಚನ್ನಂಗಿಹಳ್ಳಿ, ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್, ಲೇಖಕರಾದ ಸಂತೋಷಕುಮಾರ್ ಮೆಹೆಂದಳೆ, ರಾಜೀವ ನಾರಾಯಣ ನಾಯಕ, ವಾಸುದೇವ ಶೆಟ್ಟಿ, ರಂಗಸ್ವಾಮಿ ಮೂಕನಹಳ್ಳಿ, ಬರಹಗಾರ್ತಿ ಕುಸುಮಾ ಆಯರಹಳ್ಳಿ ಹಾಗೂ ಶುಭಶ್ರೀ ಭಟ್ಟ ಇದ್ದಾರೆ.

ಹೃದಯ ಸಮಸ್ಯೆ ಹೆಚ್ಚಳ: ಡಾ.ಸಿ.ಎನ್. ಮಂಜುನಾಥ್ ಕಳವಳ

'5 ವರ್ಷದಲ್ಲಿ 7 ಸಾವಿರ ಯುವಜನರಿಗೆ ಚಿಕಿತ್ಸೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೃದಯ ಸಮಸ್ಯೆಗೆ ಸಂಬಂಧಿಸಿದಂತೆ 5 ವರ್ಷಗಳಲ್ಲಿ 7 ಸಾವಿರ ಯುವಜನರಿಗೆ ಚಿಕಿತ್ಸೆ ನೀಡಲಾಗಿದೆ. ಯಾವುದೇ ಸಮಸ್ಯೆ ಇಲ್ಲದ ಆರೋಗ್ಯವಂತರಿಗೂ ಹೃದಯಾಘಾತ ಆಗುತ್ತಿದೆ. ಆದ್ದರಿಂದ ಹೊಸ ಕಾರಣ ಪತ್ತೆಗೆ ಅಧ್ಯಯನ ನಡೆಸುತ್ತಿದ್ದೇವೆ' ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

ವೀರಲೋಕ ಪ್ರಕಾಶನವು ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ವಿವಿಧ ಲೇಖಕರ 10 ಪುಸ್ತಕಗಳನ್ನು ಬಿಡುಗಡೆ ಮಾಡಿ, ಮಾತನಾಡಿದರು. 'ಬದಲಾದ ಜೀವನ ಶೈಲಿ, ಧೂಮಪಾನ, ಮದ್ಯಪಾನದಂತಹ ವ್ಯಸನ ಸೇರಿ ವಿವಿಧ ಕಾರಣಗಳಿಂದ 50 ವರ್ಷದೊಳಗಿನವರೂ ಹೆಚ್ಚಿನ ಸಂಖ್ಯೆಯಲ್ಲಿ ಹೃದಯಾಘಾತಕ್ಕೆ ಒಳಗಾಗುತ್ತಿದ್ದಾರೆ. 15 ವರ್ಷದ ಬಾಲಕ, 19 ವರ್ಷದ ಯುವಕನಿಗೂ ಹೃದಯಾಘಾತಕ್ಕೆ ಚಿಕಿತ್ಸೆ ನೀಡಲಾಗಿದೆ. ಇದು ಆತಂಕಕಾರಿ ಸಂಗತಿಯೂ ಆಗಿದೆ. ಹೃದಯವನ್ನು ಔಷಧಗಳಿಂದ ಕಾಪಾಡಿ ಕೊಳ್ಳಲು ಸಾಧ್ಯವಿಲ್ಲ' ಎಂದು ಹೇಳಿದರು.

ಮಹಿಳೆಯರಲ್ಲೂ ಸಮಸ್ಯೆ ಹೆಚ್ಚಳ: 'ಮಹಿಳೆಯರಲ್ಲೂ ಹೃದಯ ಸಮಸ್ಯೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಇದಕ್ಕೆ ಮಾನಸಿಕ ಒತ್ತಡವೇ ಮುಖ್ಯ ಕಾರಣ. ಮಕ್ಕಳ ವಿದ್ಯಾಭ್ಯಾಸ ತಾಯಂದಿರ ಪರೀಕ್ಷೆ ಆಗಿದೆ. ಯುವಕರ ಅತಿಯಾಸೆಯಿಂದ ಒತ್ತಡಕ್ಕೆ ಒಳಗಾಗಿ, ಸಮಸ್ಯೆ ತಂದುಕೊಳ್ಳುತ್ತಿದ್ದಾರೆ' ಎಂದು ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

ಲೇಖಕ ನರೇಂದ್ರ ರೈ ದೇರ್ಲ, 'ಹಣದ ಹಸಿವಿನಿಂದ ಜನರು ನಗರಕ್ಕೆ ವಲಸೆ ಬರುತ್ತಿದ್ದಾರೆ. ಆದರೆ, ನಿಜವಾದ ಹಸಿವು ಕೃಷಿಯಿಂದ ನೀಗಲಿದೆ. ನಾನು ಮೂಲತಃ ಕೃಷಿಕ. ಕೃತಿಯಲ್ಲಿ ಕೃಷಿ ಮಹತ್ವ ಸಾರಲಾಗಿದೆ' ಎಂದರು.

ವೀರಲೋಕ ಬುಕ್ಸ್‌ನ ವಿರಕಪುತ್ರ ಶ್ರೀನಿವಾಸ್, 'ಪುಸ್ತಕ ಪ್ರಕಾಶನದ ನಮ್ಮ ಹೊಸ ಪ್ರಯತ್ನವನ್ನು ಕೆಲವರು ಸ್ವಾಗತಿಸಿದರೆ, ಕೆಲವರಲ್ಲಿ ಅಸಹನೆಯನ್ನೂ ಉಂಟು ಮಾಡಿದೆ. ಸಾಹಿತ್ಯ ಲೋಕ ಅಸಹನೆ ಪ್ರದರ್ಶನಕ್ಕೆ ಇಳಿಯಬಾರದು' ಎಂದರು.

ಪುಸ್ತಕ ಪರಿಚಯ

ಪುಸ್ತಕ	ಲೇಖಕರು	ಪುಟಗಳು	ಬೆಲೆ
ಕೃಷಿ ಯಾಕೆ ಖುಷಿ	ನರೇಂದ್ರ ರೈ ದೇರ್ಲ	120	₹140
ಹೃದಯದ ಮಾತು	ಮಂಜುನಾಥ್ ಚಾಂದ್	144	₹150
ಮೆಮೊರೀಸ್ ಆಫ್ ಬಾರ್ಸ್	ರಂಗಸ್ವಾಮಿ ಮೂಕನಹಳ್ಳಿ	136	₹150
ಕ್ಷಯ	ವಾಸುದೇವ ಶೆಟ್ಟಿ	104	₹120
ಪ್ರೀತ್‌ಸು	ರಾಜೀವ ನಾರಾಯಣ ನಾಯಕ	144	₹160
ಕಥಾ ಸಾಗರಿ	ನಾಗವೇಣಿ ವೆಂ. ಹೆಗಡೆ	96	₹120
ಹಿಂದಿನ ನಿಲ್ದಾಣ	ಶುಭಶ್ರೀ ಭಟ್ಟ	88	₹120
ದ್ವೈತ	ರಾಘವ್	104	₹120
ಅರ್ಧ ಬಿಸಿಲು, ಅರ್ಧ ಮಳೆ	ಸದಾಶಿವ ಸೊರಟೂರು	104	₹120
ಯಾರೂ ಹೇಳದ ಕಥೆಗಳು	ವಿಜಯ ಕರ್ನಾಟಕ ಸ್ಪರ್ಧೆಯ ಕಥಾ ಸಂಕಲನ	128	₹150

ಮನೆಯಲ್ಲಿ ಮಕ್ಕಳೊಂದಿಗೆ ಕನ್ನಡದಲ್ಲಿ ಸಂವಹನ ನಡೆಸಬೇಕು. ಸಹಿಯನ್ನು ಕನ್ನಡದಲ್ಲಿ ಮಾಡಬೇಕು. ನಾನು ಶೇ 80ರಷ್ಟು ಕಡತಗಳಿಗೆ ಕನ್ನಡದಲ್ಲಿ ಸಹಿ ಹಾಕುತ್ತೇನೆ

ಡಾ.ಸಿ.ಎನ್. ಮಂಜುನಾಥ್, ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ

'ಕನ್ನಡಿಗರು ಆಂಜನೇಯನ ವಂಶಸ್ಥರು'

ಬೆಂಗಳೂರು: 'ಕನ್ನಡಿಗರಿಗೆ ತಮ್ಮ ನಿಜವಾದ ಶಕ್ತಿಯ ಅರಿವಿಲ್ಲ. ನಮ್ಮ ಕನ್ನಡ ಶಕ್ತಿಯ ಬಗ್ಗೆ ಎಚ್ಚರಿಸಲು ಮತ್ತೊಬ್ಬರು ಬರಬೇಕಾದ ದುಃಸ್ಥಿತಿಯಲ್ಲಿ ನಾವಿದ್ದೇವೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಬೇಸರಿಸಿದರು.

ಪರಿಷತ್ತು ಮಂಗಳವಾರ ಹಮ್ಮಿಕೊಂಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕನ್ನಡಿಗರು ಆಂಜನೇಯನ ವಂಶಸ್ಥರು. ಆಂಜನೇಯ ನಿಗಿರುವ ಅಗಾಧವಾದ ಶಕ್ತಿಯ ಬಗ್ಗೆ ಅರಿವು ಮೂಡಿಸಲು ಜಾಂಬವಂತ ಬರಬೇಕಾಯಿತು. ಕನ್ನಡಿಗರ ಸ್ಥಿತಿಯೂ ಹಾಗೇ ಆಗಿದೆ' ಎಂದರು.

ಇತಿಹಾಸತಜ್ಞ ಎಚ್.ಎಸ್. ಗೋಪಾಲರಾವ್ ಮಾತನಾಡಿದರು. ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ನೇ.ಭ. ರಾಮಲಿಂಗ ಶೆಟ್ಟಿ, ಕೆ. ಮಹಾಲಿಂಗಯ್ಯ ಹಾಗೂ ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್‌ಪಾಂಡು ಇದ್ದರು.

ಚೆನ್ನೈನಲ್ಲಿ ದಾಖಲೆಯ ಮಳೆ: ಇಬ್ಬರ ಸಾವು

ಚೆನ್ನೈ (ಪಿಟಿಐ): ತಮಿಳುನಾಡಿನ ರಾಜಧಾನಿ ಚೆನ್ನೈ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಂಗಳವಾರ ದಾಖಲೆಯ ಪ್ರಮಾಣದಲ್ಲಿ ಮಳೆಯಾಗಿದ್ದು, ನಗರ ಮತ್ತು ಹೊರ ವಲಯದ ಕೆಲ ಪ್ರದೇಶಗಳಲ್ಲಿ ಪ್ರವಾಹ ಉಂಟಾಗಿದೆ. ಮಳೆ ಸಂಬಂಧಿ ಘಟನೆಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಚೆನ್ನೈನಲ್ಲಿ ವ್ಯಕ್ತಿಯೊಬ್ಬರು ಮಳೆಯಲ್ಲೇ ವಿದ್ಯುತ್ ತಂತಿ ಸ್ಪರ್ಶಿಸಿ ಮೃತಪಟ್ಟಿದ್ದಾರೆ. ನಗರದ ಪುಲಿಯಾಂತೋಪ್‌ನ ವಸತಿ ಕಟ್ಟಡ ಕುಸಿದು ಮಹಿಳೆಯೊಬ್ಬರು ಸಾವಿಗೀಡಾಗಿದ್ದಾರೆ. ಉತ್ತರ ಚೆನ್ನೈನ ಕೆಲವು ಭಾಗಗಳಲ್ಲಿ ತಗ್ಗು ಪ್ರದೇಶಗಳ ಮನೆಗಳಿಗೆ ನೀರು ನುಗ್ಗಿದೆ.

ಚೆನ್ನೈನ ನಂಗಂಬಾಕಂ ಪ್ರದೇಶದಲ್ಲಿ ಮೂರು ದಶಕಗಳ ಬಳಿಕ ಮೊದಲ ಬಾರಿಗೆ ಒಂದೇ ದಿನದಲ್ಲಿ 8 ಸೆಂ.ಮೀ. ಮಳೆಯಾಗಿದೆ. ಕಳೆದ 72 ವರ್ಷಗಳಲ್ಲಿ ಈ ರೀತಿಯಾಗಿ ಮೂರನೇ ಬಾರಿ ದಾಖಲೆಯ ಮಳೆಯಾಗಿದೆ ಎಂದು ಅಲ್ಲಿನ ಹವಾಮಾನ ಇಲಾಖೆಯ ಉಪ ನಿರ್ದೇಶಕ ಎಸ್. ಬಾಲಚಂದ್ರನ್ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

ಭಾರಿ ಮಳೆ ಮುನ್ಸೂಚನೆ: ಮುಂದಿನ 24 ಗಂಟೆಗಳ ಅವಧಿಯಲ್ಲಿ, ಚೆನ್ನೈ, ಕಾಂಚೀಪುರಂ, ತಿರುವಳ್ಳೂರು, ಚೆಂಗಲ್‌ಪಟ್ಟು ಮತ್ತು ವೆಲ್ಲೂರ್ ಸೇರಿದಂತೆ ಉತ್ತರದ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ.

ವಾಹನ ಕಳವು: 'ಆನ್‌ಲೈನ್'ನಲ್ಲಿ ದೂರು, ಅಂಗೈನಲ್ಲಿ ಎಫ್‌ಐಆರ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರ ವಾಹನಗಳು ಕಳವಾದ ಸಂದರ್ಭದಲ್ಲಿ ತುರ್ತಾಗಿ ಆನ್‌ಲೈನ್ ಮೂಲಕ ದೂರು ದಾಖಲಿಸಲು ಅವಕಾಶ ಕಲ್ಪಿಸಿರುವ ಪೊಲೀಸರು, ದೂರುಗಳಿಗೆ ಪ್ರತಿಯಾಗಿ 'ಇ-ಎಫ್‌ಐಆರ್' ಒದಗಿಸಿ ತನಿಖೆ ಚುರುಕುಗೊಳಿಸುವ ವ್ಯವಸ್ಥೆಯನ್ನು ಜಾರಿಗೆ ತಂದಿದ್ದಾರೆ.

ದ್ವಿಚಕ್ರ ವಾಹನ, ಕಾರು, ಆಟೊ, ಸರಕು ಸಾಗಣೆ ವಾಹನಗಳು ಕಳವಾದಾಗ ದೂರು ನೀಡುವ ವ್ಯವಸ್ಥೆ ಇದಾಗಿದೆ. ರಾಜ್ಯೋತ್ಸವ ದಿನವಾದ ಮಂಗಳವಾರ ಈ ವ್ಯವಸ್ಥೆಗೆ ಚಾಲನೆ ನೀಡಲಾಗಿದೆ.

ರಾಜಧಾನಿ ಬೆಂಗಳೂರು ಹಾಗೂ ವಿವಿಧ ಜಿಲ್ಲೆಗಳಲ್ಲಿ ವಾಹನಗಳ ಕಳ್ಳತನ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ವಾಹನಗಳ ಮಾಲೀಕರು ಠಾಣೆಗೆ ಅಲೆದಾಡಿ ದೂರು ದಾಖಲಿಸುತ್ತಿದ್ದಾರೆ.

ಕೆಲವೆಡೆ ಪ್ರಕರಣ ದಾಖಲಿಸುವ ಪ್ರಕ್ರಿಯೆ ವಿಳಂಬವಾಗುತ್ತಿದ್ದು, ಇದರಿಂದಾಗಿ ಪೊಲೀಸ್ ಇಲಾಖೆ ಬಗ್ಗೆ ಜನರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಇದಕ್ಕೆ ಪರಿಹಾರ ಕಂಡುಕೊಳ್ಳುವುದಕ್ಕಾಗಿ ಪೊಲೀಸರು, ಆನ್‌ಲೈನ್ ವ್ಯವಸ್ಥೆ ಮೊರೆಹೋಗಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, 'ಸಾರ್ವಜನಿಕರ ವಾಹನಗಳು ಕಳವಾದರೆ, ಎಫ್‌ಐಆರ್ ದಾಖಲಿಸುವುದು ಇನ್ನು ಮುಂದೆ ಸುಲಭವಾಗಲಿದೆ. ಜನರು ಆನ್‌ಲೈನ್ ಮೂಲಕ ದೂರು ನೀಡಿದರೆ, ಸಂಬಂಧಪಟ್ಟ ಠಾಣೆ ಪೊಲೀಸರು ಕ್ರಮ ಕೈಗೊಳ್ಳಲಿದ್ದಾರೆ' ಎಂದು ಹೇಳಿದರು.

'ಸಾರ್ವಜನಿಕ ಸೇವಾ ಕೇಂದ್ರ ವ್ಯವಸ್ಥೆ ಮೂಲಕ ಆನ್‌ಲೈನ್ ದೂರು ಸ್ವೀಕಾರ ಪ್ರಕ್ರಿಯೆ ನಡೆಯಲಿದೆ. ವಾಹನಗಳ ಮಾಲೀಕರು ಠಾಣೆಗಳಿಗೆ ಅಲೆಯುವುದನ್ನು ತಪ್ಪಿಸುವುದು ಈ ವ್ಯವಸ್ಥೆಯ ಗುರಿಯಾಗಿದೆ' ಎಂದು ತಿಳಿಸಿದರು.



ಆನ್‌ಲೈನ್‌ನಲ್ಲಿ ದೂರು ಸ್ವೀಕರಿಸಲು ರೂಪಿಸಿರುವ ಜಾಲತಾಣದ ನೋಟ

ದೂರು ದಾಖಲಿಸುವುದು ಹೇಗೆ?

ಕರ್ನಾಟಕ ಪೊಲೀಸ್ ಇಲಾಖೆಯ 'https://ksp.karnataka.gov.in/' ಜಾಲತಾಣಕ್ಕೆ ಭೇಟಿ ನೀಡಬೇಕು.

ಜಾಲತಾಣದ ಎಡಬದಿಯ ಆಯ್ಕೆಯಲ್ಲಿರುವ 'ನಾಗರಿಕ ಕೇಂದ್ರಿತ ತಾಣ' ಆಯ್ಕೆಯನ್ನು ಕ್ಲಿಕ್ ಮಾಡಬೇಕು. ನಂತರ, 'ನಾಗರಿಕ ಕೇಂದ್ರಿತ ಪೋರ್ಟಲ್ ಕರ್ನಾಟಕ ರಾಜ್ಯ ಪೊಲೀಸ್' ಪುಟ ತೆರೆದುಕೊಳ್ಳುತ್ತದೆ. ಬಳಿಕ, ಅಲ್ಲಿಯ ಲಾಗಿನ್ ಬಟನ್ ಒತ್ತಬೇಕು.

'ನ್ಯೂ ಟು ಎಸ್‌ಎಸ್‌ಒ' ಕ್ಲಿಕ್ ಮಾಡಿ, ಆಧಾರ್ ಸಂಖ್ಯೆ ಬಳಸಿಕೊಂಡು ಹೊಸ ಯೂಸರ್ ಐಡಿ ಹಾಗೂ ಪಾಸ್‌ವರ್ಡ್ ಸೃಷ್ಟಿಸಬೇಕು. ನಂತರ, ಕಳವಾದ ವಾಹನದ ವಿವರ ದಾಖಲಿಸಿ ದೂರು ಸಲ್ಲಿಸಬೇಕು. ಇದಾದ ಬಳಿಕ, ಸಂಬಂಧಪಟ್ಟ ಠಾಣೆಗೆ ಸಂದೇಶ ರವಾನೆಯಾಗಲಿದೆ. ನಂತರವೇ, ಸಂಬಂಧಪಟ್ಟ ಠಾಣೆಗಳ ತನಿಖಾಧಿಕಾರಿ ಸಹಿ ಸಮೇತ 'ಇ-ಎಫ್‌ಐಆರ್' ಪ್ರತಿ ಲಭ್ಯವಾಗಲಿದೆ.

ಈ ಎಫ್‌ಐಆರ್ ಪ್ರತಿಗೆ ಕಾನೂನುಬದ್ಧ ಮಾನ್ಯತೆ ಇದ್ದು, ಇದರಲ್ಲಿರುವ ಸಾರಾಂಶವನ್ನು ಆಧರಿಸಿ ಪೊಲೀಸರು ತನಿಖೆ ಮುಂದುವರಿಸಲಿದ್ದಾರೆ. ಕಳವಾದ ವಾಹನಗಳು ಪತ್ತೆಯಾದರೆ ಮಾಲೀಕರಿಗೆ ಪೊಲೀಸರೇ ಮಾಹಿತಿ ನೀಡಲಿದ್ದಾರೆ.

ನಗರದ ವಿವಿಧೆಡೆ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೆಲದಿನಗಳಿಂದ ಬಿಡುವು ನೀಡಿದ್ದ ಮಳೆ, ಮಂಗಳವಾರ ಸಂಜೆ ಧಾರಾಕಾರವಾಗಿ ಸುರಿಯಿತು.

ಮಂಗಳವಾರ ಮಧ್ಯಾಹ್ನದಿಂದಲೇ ಮೋಡ ಕವಿದ ವಾತಾವರಣ ಕಾಣಿಸಿಕೊಂಡು, ಸಂಜೆ ವೇಳೆ ಜೋರು ಮಳೆಯಾಯಿತು.

ರಾಜ್ಯೋತ್ಸವ ದಿನವಾಗಿದ್ದರಿಂದ ನಗರದ ಹಲವೆಡೆ ಸಾರ್ವಜನಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಜೋರು ಮಳೆಯಿಂದಾಗಿ ಕಾರ್ಯಕ್ರಮಗಳ ಆರಂಭಕ್ಕೆ ತೊಂದರೆ ಉಂಟಾಯಿತು. ಕೆಲವರು ಸುರಿಯುವ ಮಳೆಯಲ್ಲೇ ಕಾರ್ಯಕ್ರಮ ನಡೆಸಿದರು.

ಮೆಜೆಸ್ಟಿಕ್, ಗಾಂಧಿನಗರ, ಸಂಪಂಗಿ ರಾಮನಗರ, ಶಾಂತಿನಗರ, ವಿಲ್ಸನ್ ಗಾರ್ಡನ್, ಲಾಲ್‌ಬಾಗ್, ರಿಚ್ಮಂಡ್ ಟೌನ್, ಅಶೋಕನಗರ, ಎಂ.ಜಿ.ರಸ್ತೆ, ಶಿವಾಜಿನಗರ, ಹಲಸೂರು, ವಸಂತ ನಗರ, ಆರ್‌.ಟಿ.ನಗರ, ಹೆಬ್ಬಾಳ, ಸಂಜಯನಗರ, ಮತ್ತಿಕೆರೆ, ಮಲ್ಲೇಶ್ವರ, ಯಶವಂತಪುರ, ರಾಜಾಜಿನಗರ, ವಿಜಯನಗರ, ದೀಪಾಂಜಲಿನಗರ ಹಾಗೂ ಸುತ್ತಮುತ್ತ ಜೋರು ಮಳೆ ಸುರಿಯಿತು.

'ರಾಜರಾಜೇಶ್ವರಿನಗರ, ಕೆಂಗೇರಿ, ಗಿರಿನಗರ, ಬನಶಂಕರಿ, ಬಸವನಗುಡಿ, ಯಲಹಂಕ, ವಿದ್ಯಾರಣ್ಯಪುರ, ಹನುಮಂತನಗರ, ಜಯನಗರ, ಜೆ.ಪಿ.ನಗರ, ಪುಟ್ಟೇನಹಳ್ಳಿ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಮಳೆ ಆಯಿತು.

ಮಳೆ ವೇಳೆ ಜೋರು ಗಾಳಿಯೂ ಬೀಸಿತು. ಇದರಿಂದಾಗಿ ಕೆಲವೆಡೆ ಮರದ ಕೊಂಬೆಗಳು ನೆಲಕ್ಕುರುಳಿದ್ದವು. ಸರ್ಕಾರಿ ರಜಾ ದಿನವಾಗಿದ್ದರಿಂದ ಬಹುತೇಕ ರಸ್ತೆಗಳಲ್ಲಿ ವಾಹನಗಳ ಸಂಖ್ಯೆ ಕಡಿಮೆ ಇತ್ತು.

ವಿಧಾನಸೌಧ ಸುತ್ತಮುತ್ತ ದಟ್ಟಣೆ: ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಮಾಡಲು ವಿಧಾನಸೌಧ ಮೆಟ್ಟಿಲು ಬಳಿ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಜನರು ಸಮಾರಂಭಕ್ಕೆ ಬಂದಿದ್ದರಿಂದ, ವಿಧಾನಸೌಧ ಸುತ್ತಮುತ್ತ ದಟ್ಟಣೆ ಕಂಡುಬಂತು.

ಕಾರ್ಯಕ್ರಮ ಮುಗಿದ ನಂತರ, ಜನರೆಲ್ಲರೂ ಸ್ಥಳದಿಂದ ನಿರ್ಗಮಿಸಿದರು. ಈ ವೇಳೆಯೇ ವಾಹನಗಳ ದಟ್ಟಣೆ ಉಂಟಾಯಿತು.

'ನಗರದಲ್ಲಿ ಆಗಾಗ ಮೋಡ ಕವಿದ ವಾತಾವರಣ ಕಾಣಿಸುವುದು ಸಾಮಾನ್ಯವಾಗಿದೆ. ಮಂಗಳವಾರ ಧಾರಾಕಾರ ಮಳೆ ಸುರಿದಿದ್ದು, ರಸ್ತೆಯಲ್ಲಿ ನೀರು ಹರಿಯುತ್ತಿದ್ದ ದೂರುಗಳು ಬಂದಿದ್ದವು. ಸ್ಥಳಕ್ಕೆ ತೆರಳಿದ್ದ ಸಿಬ್ಬಂದಿ, ನೀರು ತೆರವು ಮಾಡಿದ್ದಾರೆ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ನಗರದಲ್ಲಿ ಈ ವರ್ಷ 14 ಪ್ರಕರಣಗಳಲ್ಲಿ ಇಲ್ಲವಾದವು ಸಾವಿರಾರು ಮೀನು

ಕಪ್ಪುನೀರಿನ ವಿಷಪ್ರಾಶನ; ಜಲಚರಗಳ ಆಪೋಷನ

• ಆರ್. ಮಂಜುನಾಥ್

ಬೆಂಗಳೂರು: ಮೀನುಗಳಿಗೆ ತಾಣವಾಗಬೇಕಿದ್ದ ಬಿಬಿಎಂಪಿ ವ್ಯಾಪ್ತಿಯ ಕೆರೆಗಳು ಒಳಚರಂಡಿಯ ಕಲುಷಿತ ಕಪ್ಪು ನೀರು ಜಲಚರಗಳಿಗೆ ವಿಷಪ್ರಾಶನ ಮಾಡುತ್ತಿದೆ. ಇದರಿಂದ ಐದು ವರ್ಷಗಳಲ್ಲಿ 40 ಪ್ರಕರಣಗಳಲ್ಲಿ ಹಲವು ಟನ್‌ಗಟ್ಟಲೆ ಮೀನುಗಳು ಸತ್ತಿವೆ. ಈ ವರ್ಷ 14 ಪ್ರಕರಣಗಳು ಆಗಿವೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ನೂರಾರು ಕೆರೆಗಳನ್ನು ಅಭಿವೃದ್ಧಿ ಮಾಡಲಾಗಿದೆ. ಆದರೆ ಈ ಅಭಿವೃದ್ಧಿ ಪಥದಲ್ಲಿ ಮೂಲ ಆಶಯವಾಗಿರುವ ಒಳಚರಂಡಿ ನೀರು ಹರಿಯುವುದನ್ನು ತಡೆಯುವಲ್ಲಿ ಯಶ ಸಾಧಿಸಿಲ್ಲ. ಬಿಡಬ್ಲ್ಯುಎಸ್‌ಎಸ್‌ಬಿಯವರು ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿರುವುದೇ ಇಷ್ಟೆಲ್ಲ ಕಲ್ಮಶಕ್ಕೆ ಪ್ರಮುಖ ಕಾರಣ. ಇನ್ನು ಮಾಲಿನ್ಯ ನಿಯಂತ್ರಣ ಮಂಡಳಿ ಈ ಕಲ್ಮಶವನ್ನು ಕಂಡೂ ಕಾಣದಂತಿದೆ. ಇಬ್ಲೂರು ಕೆರೆಯಲ್ಲಿ ಅ.31ರಂದು ಮೀನುಗಳು ಸತ್ತಿವೆ.

ನಗರದಲ್ಲಿ 2017ರಿಂದ ಈವರೆಗೆ 31 ಕೆರೆಗಳಲ್ಲಿ 40 ಪ್ರಕರಣಗಳಲ್ಲಿ ಸಾವಿರಾರು ಮೀನುಗಳು ಸತ್ತಿವೆ. ಈ ವರ್ಷ 14 ಸಂದರ್ಭದಲ್ಲಿ ಜಲಚರಗಳು ಮೃತಪಟ್ಟಿವೆ. ಈ ಪ್ರಕರಣಗಳ ಬಗ್ಗೆ ಬಿಬಿಎಂಪಿ, ಬಿಡಬ್ಲ್ಯುಎಸ್‌ಎಸ್‌ಬಿ, ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಾಕಷ್ಟು ಬಾರಿ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಹೀಗಾಗಿ, ಈ ವರ್ಷ ಹರಳೂರು ಕೆರೆಯಲ್ಲಿ ಮೂರು, ಕೊತ್ತನೂರು ಕೆರೆಯಲ್ಲಿ ಎರಡು ಬಾರಿ ಮೀನುಗಳು ಸತ್ತಿವೆ.

ಪ್ರಜಾವಾಣಿ ವಿಶೇಷ

'ಬೆಂಕಿ ಕೆರೆ' ಎಂದೇ ಕರೆಯಲಾಗುವ ಬೆಳ್ಳಂದೂರು ಕೆರೆ, ಮಡಿವಾಳ ಕೆರೆ, ಶೀಲವಂತನಕೆರೆ, ಜಕ್ಕೂರು ಕೆರೆ ಹಾಗೂಕೊಮ್ಮಘಟ್ಟ ಕೆರೆಯಲ್ಲಿ ತಲಾ ಎರಡು ಬಾರಿ ಮೀನು ಸತ್ತ ಪ್ರಕರಣಗಳು ದಾಖಲಾಗಿವೆ. ಇವುಗಳ ಬಗ್ಗೆ ಸಾಕಷ್ಟು ವರದಿಯಾಗಿದ್ದರೂ ಸಂಬಂಧಪಟ್ಟ ಇಲಾಖೆಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿವೆ.

ಕಾಳಜಿ ಇಲ್ಲ: 'ಕಲುಷಿತ ನೀರಿನಿಂದ ಕೆರೆಗಳಲ್ಲಿ ಮೀನುಗಳು ಸತ್ತಿವೆ, ಸಾಯುತ್ತಿವೆ ಎಂಬುದನ್ನು ಚಿತ್ರ-ವಿಡಿಯೊ ದಾಖಲೆ ಸಹಿತ ಮಾಲಿನ್ಯ ನಿಯಂತ್ರಣ ಮಂಡಳಿಗೆ ದೂರು ನೀಡಿದರೂ ಅವರು ಅದನ್ನು ಪರಿಗಣಿಸುತ್ತಿಲ್ಲ. ಏಳು ಕೆರೆಗಳಲ್ಲಿ ಮೀನುಗಳು ಸತ್ತೇ ಇಲ್ಲ ಎಂದು ಮಾಹಿತಿ ಹಕ್ಕು ಕಾಯಿದೆಯಡಿ ಮಾಲಿನ್ಯ ನಿಯಂತ್ರಣ ಮಂಡಳಿ ಮಾಹಿತಿ ನೀಡಿದೆ. ಜೀವವೈವಿಧ್ಯದ ಬಗ್ಗೆ ಮಾಲಿನ್ಯ ನಿಯಂತ್ರಣ ಮಂಡಳಿಗೆ ಕಾಳಜಿಯೇ ಇಲ್ಲ' ಎಂದು ಆಕ್ಷನ್ ಏಡ್‌ನ ಕಾರ್ಯಕ್ರಮ ವ್ಯವಸ್ಥಾಪಕ ರಾಘವೇಂದ್ರ ಬಿ. ಪಚ್ಚಾಪುರ್ ದೂರಿದರು.

'ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇತರ ಇಲಾಖೆಗಳ ಸಹಯೋಗ ದೊಂದಿಗೆ ಕೆರೆಗಳು ಹಾಗೂ ರಾಜ ಕಾಲುವೆಗಳ ಮೇಲೆ ನಿಗಾವಹಿಸಬೇಕು. ಯಾವುದೇ ರೀತಿಯ ಕಲ್ಮಶ ಕೆರೆಗೆ ಹರಿಯದಂತೆ ಕ್ರಮ ಕೈಗೊಳ್ಳಬೇಕು. ಕೆರೆಗಳ ಶುಚಿತ್ವಕ್ಕೆ ಒಂದು ಹಂತದಲ್ಲಿ ಕಾರಣವಾಗುವ ಮೀನುಗಳ ಮಾರಣಹೋಮ ತಪ್ಪಿಸಬೇಕು. ಎಲ್ಲ ಕೆರೆಗಳ ನೀರಿನ ಗುಣಮಟ್ಟದ ಬಗ್ಗೆ ಕಾಲಕಾಲಕ್ಕೆ ಆನ್‌ಲೈನ್‌ನಲ್ಲಿ ಮಾಹಿತಿಯನ್ನು ಪ್ರಕಟಿಸಬೇಕು' ಎಂದು ರಾಘವೇಂದ್ರ ಆಗ್ರಹಿಸಿದರು.


ಕೊತ್ತನೂರು ಕೆರೆಯಲ್ಲಿ ಸತ್ತ ಮೀನುಗಳು


ಹರಳೂರು ಕೆರೆಯಲ್ಲಿ ಮೀನುಗಳು ಸತ್ತಿರುವುದು

'ಮಾಲಿನ್ಯ ನಿಯಂತ್ರಣ ಮಂಡಳಿ ನಿರ್ಲಕ್ಷ್ಯ'

ಕೆರೆಗಳಿಗೆ ಮಾಲಿನ್ಯ ಹರಿಯುವುದನ್ನು ನಿಯಂತ್ರಿಸುವ, ಅದಕ್ಕೆ ಸಂಬಂಧಪಟ್ಟಂತೆ ಕಾನೂನು ಕ್ರಮ ಕೈಗೊಳ್ಳಬೇಕಾದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ. ಕೆರೆ, ಕಾಲುವೆ ಮಲಿನವಾಗುತ್ತಿರುವ ಬಗ್ಗೆ ನಾಗರಿಕರು, ಸಂಘ–ಸಂಸ್ಥೆಗಳು ದೂರು ನೀಡಿದರೂ ಕ್ರಮ ಕೈಗೊಳ್ಳುತ್ತಿಲ್ಲ. 'ಬೇಕಾಬಿಟ್ಟಿ ಪರಿಶೀಲನೆ' ನಡೆಸಿ ಎಲ್ಲವೂ ಸರಿ ಇದೆ ಎಂಬ ಷರಾ ಬರೆದು ಮಂಡಳಿ ಅಧಿಕಾರಿಗಳು ಕೈತೊಳೆದುಕೊಳ್ಳುತ್ತಿದ್ದಾರೆ ಎಂಬ ಆರೋಪವಿದೆ. ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿ ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದಾಗ ಅವರಿಂದ ಪ್ರತಿಕ್ರಿಯೆ ವ್ಯಕ್ತವಾಗಲಿಲ್ಲ. ಇನ್ನು ಮಂಡಳಿಯಲ್ಲಿರುವ ಪರಿಸರ ಎಂಜಿನಿಯರ್‌ಗಳು ಸೇರಿ ಅಧಿಕಾರಿಗಳು 'ನಮಗೆ ಈ ಜವಾಬ್ದಾರಿ ಇಲ್ಲ' ಎಂದು ಉತ್ತರಿಸಿದರು.

ಎಸ್‌ಟಿಪಿ ವೈಫಲ್ಯ!

ಆಕ್ಷನ್ ಏಡ್ ಸಮೀಕ್ಷೆ ಪ್ರಕಾರ, ಹರಳೂರು ಕೆರೆಯಲ್ಲಿ 2019 ಹಾಗೂ 2022ರಲ್ಲಿ ಮೀನಿನ ಸಾವಿಗೆ ಕಾರಣ ಒಳಚರಂಡಿ ನೀರು. 2017ರಲ್ಲಿ ಕೈಗಾರಿಕೆ ತ್ಯಾಜ್ಯ ಇದಕ್ಕೆ ಕಾರಣವಾಗಿತ್ತು. ಇನ್ನು ಮಡಿವಾಳ ಕೆರೆಯಲ್ಲಿ 2018, 2019ರಲ್ಲಿ ಮೀನು ಸಾವಿಗೆ ಕಾರಣ ಒಳಚರಂಡಿ ತ್ಯಾಜ್ಯ. ಕೊಮ್ಮಘಟ್ಟ ಕೆರೆಯಲ್ಲಿ ಮೀನು ಸಾವಿಗೆ ಕಾರಣವಾದ ಅಂಶಗಳೆಂದರೆ ಒಳಚರಂಡಿ ನೀರು, ವಿಷಕಾರಿ ಅಂಶ, ಕೈಗಾರಿಕೆ ತ್ಯಾಜ್ಯ. ಬೆಳ್ಳಂದೂರು ಕೆರೆಯಲ್ಲಿ ವಿಷಕಾರಿ ಅಂಶ, ಕೈಗಾರಿಕೆ ತ್ಯಾಜ್ಯದಿಂದ ಮೀನುಗಳು ಸತ್ತಿವೆ. ಇನ್ನುಳಿದ ಕೆರೆಗಳಲ್ಲಿ ಒಳಚರಂಡಿ ನೀರು ಕಲುಷಿತಕ್ಕೆ ಕಾರಣವಾಗಿದೆ. ಮಡಿವಾಳ, ಹೆನ್ನಾಗರ, ರಾಚೇನಹಳ್ಳಿ, ಹೊರಮಾವು ಅಗರ, ಭಟ್ಟರಹಳ್ಳಿ ಕೆರೆಗಳಲ್ಲಿ ತ್ಯಾಜ್ಯ ಸಂಸ್ಕರಣೆ ಘಟಕಗಳ (ಎಸ್‌ಟಿಪಿ) ವೈಫಲ್ಯವೂ ಕಾರಣ.


ಸುದ್ದಿ 2 ನಿಮಿಷ

ಸಿಸಿಬಿಯಿಂದ ರೌಡಿ ಬಂಧನ: ನಾಡಪಿಸ್ತೂಲ್ ಜಪ್ತಿ

ಬೆಂಗಳೂರು: ಪಿಸ್ತೂಲ್ ತೋರಿಸಿ ಸಾರ್ವಜನಿಕರನ್ನು ಬೆದರಿಸುತ್ತಿದ್ದ ಆರೋಪದಡಿ ರೌಡಿ ಸತ್ಯನಾದನ್ ಅಲಿಯಾಸ್ 'ನಾಯಿ'ಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಬಂಧಿತ ಸತ್ಯನಾದನ್‌ನ ಹೆಸರು, ಮಡಿವಾಳ ಠಾಣೆಯ ರೌಡಿ ಪಟ್ಟಿಯಲ್ಲಿತ್ತು. ಈತ ರೌಡಿಗಳಾದ ಸೈಕಲ್ ರವಿ ಹಾಗೂ ಬೇಕರಿ ರಘು ಸಹಚರ. ಸತ್ಯನಾದನ್ ಕಡೆಯಿಂದ ನಾಡಪಿಸ್ತೂಲ್ ಹಾಗೂ ಐದು ಜೀವಂತ ಗುಂಡುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಕೊಲೆ, ಕೊಲೆ ಯತ್ನ, ಜೀವ ಬೆದರಿಕೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಸತ್ಯನಾದನ್, ಜೈಲಿನಿಂದ ಹೊರಗೆ ಬಂದಿದ್ದ. ಈತನ ವಿರುದ್ಧದ ಪ್ರಕರಣಗಳ ವಿಚಾರಣೆ ನ್ಯಾಯಾಲಯದಲ್ಲಿ ನಡೆಯುತ್ತಿತ್ತು. ಸೈಕಲ್ ರವಿ ಹಾಗೂ ಬೇಕರಿ ರಘು ನೀಡಿದ್ದ ಪಿಸ್ತೂಲ್ ತನ್ನ ಬಳಿ ಇಟ್ಟುಕೊಂಡಿದ್ದ ಸತ್ಯನಾದನ್, ಅದನ್ನು ತೋರಿಸಿ ಜನರನ್ನು ಬೆದರಿಸುತ್ತಿದ್ದ. ಈ ಬಗ್ಗೆ ಮಾಹಿತಿ ಲಭ್ಯವಾಗುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದರು.



ತಲೆ ಮರೆಸಿಕೊಂಡ ಆರೋಪಿಗಳ ಪತ್ತೆಗೆ ಬಹುಮಾನ ಘೋಷಣೆ

ಮಂಗಳೂರು: ಬಿಜೆಪಿಯ ಯುವಮೋರ್ಚಾದ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಪ್ರವೀಣ್ ನೆಟ್ಟಾರು ಹತ್ಯೆಯಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ನಾಲ್ವರು ಆರೋಪಿಗಳ ಮಾಹಿತಿ ನೀಡುವ ಮೂಲಕ ಅವರ ಪತ್ತೆಗೆ ನೆರವಾಗುವವರಿಗೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಹುಮಾನ ಘೋಷಣೆ ಮಾಡಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕು ಬೆಳ್ಳಾರೆ ಗ್ರಾಮದ ಮೊಹಮ್ಮದ್ ಮುಸ್ತಾಫ ಎಸ್. ಅಲಿಯಾಸ್ ಮುಸ್ತಾಫ ಪೈಚಾರು ಹಾಗೂ ಕೊಡಗು ಜಿಲ್ಲೆಯ ಮಡಿಕೇರಿಯ ತುಫೈಲ್ ಎಂ.ಎಚ್ ಅವರ ಪತ್ತೆಗೆ ನೆರವಾದವರಿಗೆ ತಲಾ ₹ 5 ಲಕ್ಷ ಬಹುಮಾನ ನೀಡಲಾಗುತ್ತದೆ. ಸುಳ್ಯದ ಕಲ್ಲುಮುಟ್ಲು ಮನೆ ನಿವಾಸಿ ಉಮ್ಮರ್ ಫಾರೂಕ್ ಎಂ.ಆರ್. ಅಲಿಯಾಸ್ ಉಮ್ಮರ್ ಹಾಗೂ ಬೆಳ್ಳಾರೆ ಗ್ರಾಮದ ಅಬೂಬಕ್ಕರ್ ಸಿದ್ಧಿಕ್ ಅಲಿಯಾಸ್ ಪೇಂಟರ್ ಸಿದ್ಧಿಕ್ ಪತ್ತೆಗೆ ನೆರವಾದವರಿಗೆ ತಲಾ ₹ 2 ಲಕ್ಷ ಬಹುಮಾನ ನೀಡಲಾಗುತ್ತದೆ ಎಂದು ಎನ್‌ಐಎ ಪ್ರಕಟಣೆಯಲ್ಲಿ ತಿಳಿಸಿದೆ.

ಈ ನಾಲ್ವರು ಆರೋಪಿಗಳು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಸದಸ್ಯರು. ಇವರ ಪತ್ತೆಗೆ ನೆರವಾಗುವ ಮಾಹಿತಿದಾರರ ಹೆಸರನ್ನು ಗೋಪ್ಯವಾಗಿಡಲಾಗುವುದು. ಇವರ ಮಾಹಿತಿ ನೀಡಲು ಬಯಸುವವರು ಸಂಸ್ಥೆಯನ್ನು ಸಂಪರ್ಕಿಸಬಹುದು ಎಂದು ಎನ್‌ಐಎ ಹೇಳಿದೆ.

ವಿಳಾಸ: ಪೊಲೀಸ್ ವರಿಷ್ಠಾಧಿಕಾರಿ, ರಾಷ್ಟ್ರೀಯ ತನಿಖಾ ದಳ, 8ನೇ ಮಹಡಿ, ಸರ್.ಎಂ.ವಿಶ್ವೇಶ್ವರಯ್ಯ ಕೇಂದ್ರೀಯ ಸದನ, ದೊಮ್ಮಲೂರು, ಬೆಂಗಳೂರು 560071

ಸಂಪರ್ಕ: 080 29510900 ಅಥವಾ 8904241100

ಇ–ಮೇಲ್:info.blr.nia@gov.in

ನಾಲ್ವರು ಉಗ್ರರ ಹತ್ಯೆ: ಮೂವರ ಬಂಧನ

ಶ್ರೀನಗರ (ಪಿಟಿಐ): 'ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ಎರಡು ಪ್ರತ್ಯೇಕ ಎನ್‌ಕೌಂಟರ್‌ಗಳಲ್ಲಿ ಒಟ್ಟು ನಾಲ್ಕು ಮಂದಿ ಉಗ್ರರನ್ನು ಹತ್ಯೆ ಮಾಡಲಾಗಿದೆ. ಮೂವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

'ಪುಲ್ವಾಮ ಜಿಲ್ಲೆಯ ಖಾಂಡಿಪೊರಾದಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಮೂವರು ಹಾಗೂ ಅನಂತನಾಗ್ ಜಿಲ್ಲೆಯ ಸೆಮತಾನ್‌ನಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಓರ್ವ ಉಗ್ರನನ್ನು ಭದ್ರತಾ ಪಡೆಯವರು ಕೊಂದಿದ್ದಾರೆ. ಶ್ರೀನಗರ ಮತ್ತು ಬಡಗಾಮ್ ಜಿಲ್ಲೆಗಳಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಲಷ್ಕರ್ ಎ ತೈಯಬಾ (ಎಲ್‌ಇಟಿ) ಉಗ್ರ ಸಂಘಟನೆಗೆ ಸೇರಿದ ಮೂವರನ್ನು ಬಂಧಿಸಲಾಗಿದೆ' ಎಂದು ಹೇಳಿದ್ದಾರೆ.

'ಉಗ್ರರಿಂದ ಎರಡು ಎಕೆ ರೈಫಲ್‌ಗಳು ಮತ್ತು ಪಿಸ್ತೂಲ್ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದ್ದಾರೆ.

ಅಕ್ಟೋಬರ್‌ನಲ್ಲಿ ಬೆಳವಣಿಗೆ ಕಂಡ ತಯಾರಿಕಾ ಚಟುವಟಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಅಕ್ಟೋಬರ್‌ನಲ್ಲಿ ದೇಶದ ತಯಾರಿಕಾ ಚಟುವಟಿಕೆಗಳು ಬಲಿಷ್ಠವಾಗಿ ನಡೆದಿವೆ. ಈ ತಿಂಗಳಲ್ಲಿ ಉತ್ಪಾದನೆಯು ಹೆಚ್ಚಳ ಕಂಡಿದೆ.

ತಯಾರಿಕಾ ಚಟುವಟಿಕೆಗಳ ಮಟ್ಟವನ್ನು ಸೂಚಿಸುವ ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಸೆಪ್ಟೆಂಬರ್‌ನಲ್ಲಿ 55.1ರಷ್ಟು ಇದ್ದಿದ್ದು ಅಕ್ಟೋಬರ್‌ನಲ್ಲಿ 55.3ಕ್ಕೆ ಹೆಚ್ಚಳ ಕಂಡಿದೆ.

'ಪುಸ್ತಕ ಜಾತ್ರೆ' ಕಾರ್ಯಕ್ರಮದಲ್ಲಿ ಇನ್ಫೊಸಿಸ್ ಫೌಂಡೇಷನ್ ಅಧ್ಯಕ್ಷೆ ಸುಧಾ ಮೂರ್ತಿ ಹೇಳಿಕೆ

'ಮೈಸೂರು ಸಿಂಹಾಸನ, ಕುಟುಂಬಕ್ಕೆ ನಮಿಸುವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಭಾಷೆಗೆ ಮೈಸೂರು ಮಹಾರಾಜರು ಹಾಕಿದ ಭದ್ರ ಅಡಿಪಾಯದ ಮೇಲೆ ನಾವಿಂದು ಕಟ್ಟಡ ಕಟ್ಟುತ್ತಿದ್ದೇವೆ. ಮೈಸೂರು ಮಹಾರಾಜರು ಇರದಿದ್ದರೆ ಕನ್ನಡ ಭಾಷೆಯೇ ಇರುತ್ತಿರಲಿಲ್ಲ. ಆದ್ದರಿಂದ ಮೈಸೂರು ರತ್ನ ಸಿಂಹಾಸನ ಹಾಗೂ ಮೈಸೂರು ಮಹಾರಾಜರ ಕುಟುಂಬದವರಿಗೆ ನಾನು ನಮಿಸುತ್ತೇನೆ' ಎಂದು ಇನ್ಫೊಸಿಸ್ ಫೌಂಡೇಷನ್ ಅಧ್ಯಕ್ಷೆ ಸುಧಾ ಮೂರ್ತಿ ತಿಳಿಸಿದರು.

ಅವರು ಇತ್ತೀಚೆಗೆ ರಾಜಮಾತೆ ಪ್ರಮೋದಾ ದೇವಿ ಅವರ ಪಾದಕ್ಕೆ ನಮಸ್ಕಾರ ಮಾಡಿದ್ದು ಚರ್ಚೆಗೆ ಗ್ರಾಸವಾಗಿತ್ತು. ಕನ್ನಡ ರಾಜ್ಯೋತ್ಸವ ಪ್ರಯುಕ್ತ ಸಪ್ನಾ ಬುಕ್ ಹೌಸ್ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಪುಸ್ತಕ ಜಾತ್ರೆಗೆ ಚಾಲನೆ ನೀಡಿ, ಘಟನೆ ಬಗ್ಗೆ ಪರೋಕ್ಷವಾಗಿ ಸ್ಪಷ್ಟನೆ ನೀಡಿದರು.

'ಮೈಸೂರು ಮಹಾರಾಜರು ಕಟ್ಟಿದ ಕನ್ನಡ ನಾಡಿನಲ್ಲಿ ಇಂದು ಅನೇಕ ವಿದ್ವಾಂಸರು, ಬರಹಗಾರರು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನಂತಹ ಅನೇಕ ಸಂಸ್ಥೆಗಳು ಬೆಳೆದಿವೆ. ಮಹಾರಾಜರ ಕೊಡುಗೆಯನ್ನು ನಾವು ಮರೆಯಬಾರದು. ನಾವೆಲ್ಲ ಅವರಿಗೆ ಕೃತಜ್ಞತೆ ಹೊಂದಿರಬೇಕು. ಅವರ ಕುಟುಂಬದವರು ಯಾವುದೇ ವಯಸ್ಸಿನವರಿದ್ದರೂ ಸರಿ, ಅವರಿಗೆ ನಮಸ್ಕರಿಸುತ್ತೇನೆ' ಎಂದು ಹೇಳಿದರು.

'ಕನ್ನಡ ಕೇವಲ ಭಾಷೆಯಲ್ಲ, ಸಂಸ್ಕೃತಿಯೂ ಹೌದು. ಎರಡು ಸಾವಿರಕ್ಕೂ ಹೆಚ್ಚು ಇತಿಹಾಸ ಹೊಂದಿರುವ ಕನ್ನಡ ಭಾಷೆ ಬೆಳೆಸುವ ಜವಾಬ್ದಾರಿ ಹೆಣ್ಣುಮಕ್ಕಳ ಮೇಲಿದೆ. ಮನೆಯಲ್ಲಿ ಮಕ್ಕಳೊಂದಿಗೆ, ಸಂಬಂಧಿಕರೊಂದಿಗೆ ಕನ್ನಡ ಭಾಷೆಯಲ್ಲೇ ಮಾತನಾಡಬೇಕು. ಕನ್ನಡ ಪುಸ್ತಕ, ಕನ್ನಡ ಪತ್ರಿಕೆಗಳನ್ನು ಓದಿಸುವ ಹವ್ಯಾಸ ಬೆಳೆಸಬೇಕು' ಎಂದರು.

ಸೀರೆ ಬದಲು ಪುಸ್ತಕ ಖರೀದಿಸಿ: 'ಕೃಷ್ಣನಿಗೆ ಯಶೋದೆ ಹಾಗೂ ದೇವಕಿ ಇಬ್ಬರು ತಾಯಿಯರು ಇದ್ದರು. ಹಾಗೆಯೇ ಭಾಷೆ ಕೂಡ. ಮಾತೃಭಾಷೆಯಾಗಿ ಕನ್ನಡವನ್ನು ಉಳಿಸಿ, ಬೆಳೆಸಬೇಕು. ವ್ಯಾವಹಾರಿಕ ಭಾಷೆಯಾಗಿ ಇಂಗ್ಲಿಷ್ ಕಲಿಯಬೇಕು. ನನಗೆ 62ನೇ ವರ್ಷದವರೆಗೂ ಪ್ರತಿ ಹುಟ್ಟುಹಬ್ಬಕ್ಕೂ ತಾಯಿ ಕನ್ನಡ ಪುಸ್ತಕವನ್ನು ಉಡುಗೊರೆಯಾಗಿ ನೀಡುತ್ತಿದ್ದರು. ಅದೇ ರೀತಿ, ಇಂದಿನ ತಾಯಂದಿರು ವರ್ಷದಲ್ಲಿ ಒಂದು ಸೀರೆ ಕಡಿಮೆ ಕೊಂಡು, ಆ ಹಣದಲ್ಲಿ ಕನ್ನಡ ಪುಸ್ತಕ ಖರೀದಿಸಿ ಮಕ್ಕಳಿಗೆ ಕೊಡಬೇಕು. ಆ ಮೂಲಕ ಓದುವ ಸಂಸ್ಕೃತಿಯನ್ನು ಬೆಳೆಸಬೇಕು' ಎಂದು ಸುಧಾಮೂರ್ತಿ ಕಿವಿಮಾತು ಹೇಳಿದರು.

ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಮ್, 'ನಮ್ಮ ಮಕ್ಕಳು ಮೊಬೈಲ್ ಆಟಗಳು, ಡಿಜಿಟಲ್ ಭಾಷೆಯ ಕಲಿಕೆಯೊಂದಿಗೆ ಅಪರಿಚಿತ ಲೋಕಕ್ಕೆ ಹೋಗುತ್ತಿದ್ದಾರೆ. ಅವರಿಗೆ ಕನ್ನಡ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸುವ ಮೂಲಕ ತಾಯಂದಿರು ಮಕ್ಕಳನ್ನು ಡಿಜಿಟಲ್ ಲೋಕದಿಂದ ಸಹಜ ಲೋಕಕ್ಕೆ ಕರೆತರಬೇಕು' ಎಂದರು.


'ಪುಸ್ತಕ ಜಾತ್ರೆ' ಕಾರ್ಯಕ್ರಮದಲ್ಲಿ ಸುಧಾ ಮೂರ್ತಿ ಅವರು ವಿವಿಧ ಲೇಖಕರ 67 ಪುಸ್ತಕಗಳನ್ನು ಲೋಕಾರ್ಪಣೆ ಮಾಡಿದರು. ಜಿ.ಎನ್. ರಂಗನಾಥರಾವ್, ಜಿ.ಎನ್. ಮೋಹನ್, ಟಿ.ಎನ್. ಸೀತಾರಾಮ್, ವಿಶ್ವೇಶ್ವರ ಭಟ್, ಸಪ್ತಮಿ ಗೌಡ, ಹಂ.ಪ. ನಾಗರಾಜಯ್ಯ, ಕಮಲಾ ಹಂಪನಾ ಮತ್ತು ನಿತಿನ್ ಷಾ ಇದ್ದಾರೆ –ಪ್ರಜಾವಾಣಿ ಚಿತ್ರ

'ಕಾಂತಾರ' ಸಿನಿಮಾ ವಿಶ್ವದಾದ್ಯಂತ ಕನ್ನಡ ಭಾಷೆಯಲ್ಲಿ ಪ್ರದರ್ಶನ ಕಾಣುತ್ತಿರುವುದು ಖುಷಿ ತಂದಿದೆ. ಅಪ್ಪು ಅವರ 'ಗಂಧದಗುಡಿ' ಚಿತ್ರವು ಭಾಷೆ, ಪ್ರಕೃತಿ ಪ್ರೇಮ ಹೆಚ್ಚಿಸಿದೆ.
ಸಪ್ತಮಿ ಗೌಡ, ಚಲನಚಿತ್ರ ನಟಿ

ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು ಭಾಗಿ

ಸಾಹಿತಿಗಳಾದ ಹಂ.ಪ.ನಾಗರಾಜಯ್ಯ, ಕಮಲಾ ಹಂಪನಾ, ಮಲ್ಲೇಪುರಂ ಜಿ. ವೆಂಕಟೇಶ, ಪ್ರೊ.ಎಸ್.ಜಿ. ಸಿದ್ಧರಾಮಯ್ಯ, ದೊಡ್ಡರಂಗೇಗೌಡ, ನಿವೃತ್ತ ಪೊಲೀಸ್ ಅಧಿಕಾರಿ ಡಿ.ವಿ. ಗುರುಪ್ರಸಾದ್, ಲೇಖಕಿ ಡಾ. ವಸುಂಧರಾ ಭೂಪತಿ, 'ವಿಶ್ವವಾಣಿ' ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ, ಪತ್ರಕರ್ತರಾದ ಜಿ.ಎನ್. ರಂಗನಾಥರಾವ್, ಜಿ.ಎನ್. ಮೋಹನ್, ಶಿಕ್ಷಣ ತಜ್ಞ ಗುರುರಾಜ ಕರಜಗಿ ಸೇರಿ ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು ಭಾಗವಹಿಸಿದ್ದರು.

'ಕನ್ನಡ ಪುಸ್ತಕಕ್ಕೆ ವಿಶೇಷ ರಿಯಾಯಿತಿ'

'ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಇಡೀ ತಿಂಗಳು ಕನ್ನಡ ಪುಸ್ತಕಗಳಿಗೆ ಶೇ 10ರಿಂದ ಶೇ 25ರವರೆಗೆ ವಿಶೇಷ ರಿಯಾಯಿತಿ ನೀಡಲಾಗುತ್ತದೆ. ಈ ಅವಧಿಯಲ್ಲಿ ₹ 300 ಮೌಲ್ಯದ ಪುಸ್ತಕಗಳನ್ನು ಕೊಂಡವರಿಗೆ ವಿಶೇಷ ರಿಯಾಯಿತಿ ಕಾರ್ಡ್ ಕೊಡಲಾಗುತ್ತದೆ. ಆ ಕಾರ್ಡ್ ಹೊಂದಿರುವವರು ಇಡೀ ವರ್ಷ ಶೇ 10 ರಿಯಾಯಿತಿಯಲ್ಲಿ ಕನ್ನಡ ಪುಸ್ತಕಗಳನ್ನು ಕೊಳ್ಳಬಹುದು' ಎಂದು ಸಪ್ನ ಬುಕ್ ಹೌಸ್ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ ತಿಳಿಸಿದರು.

ತೂಗು ಸೇತುವೆ ದುರಂತ: ನಾಲ್ವರು ಆರೋಪಿಗಳು ಪೊಲೀಸ್ ಕಸ್ಟಡಿಗೆ

ಮೋರ್ಬಿ (ಪಿಟಿಐ): ತೂಗು ಸೇತುವೆ ಕುಸಿತದ ಪ್ರಕರಣಕ್ಕೆ ಸಂಬಂಧಿಸಿ ಬಂಧಿಸಲಾಗಿರುವ, ಸೇತುವೆಯ ನಿರ್ವಹಣೆಯ ಗುತ್ತಿಗೆ ಪಡೆದಿದ್ದ ಒರೆವಾ ಗ್ರೂಪ್‌ನ ಇಬ್ಬರು ವ್ಯವಸ್ಥಾಪಕರು ಸೇರಿದಂತೆ ನಾಲ್ವರು ಆರೋಪಿಗಳನ್ನು ನಾಲ್ಕು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿ ಸ್ಥಳೀಯ ನ್ಯಾಯಾಲಯ ಮಂಗಳವಾರ ಆದೇಶಿಸಿತು.

ವಿಚಾರಣೆ ನಡೆಸಿದ ನ್ಯಾಯಾಧೀಶ ಎಂ.ಜೆ.ಖಾನ್ ಅವರು, ಇದೇ ಪ್ರಕರಣಕ್ಕೆ ಸಂಬಂಧಿಸಿ ಬಂಧಿಸಲಾಗಿರುವ ಇತರ ಐವರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ನೀಡಿ ಆದೇಶಿಸಿದ್ದಾರೆ ಎಂದು ಸರ್ಕಾರಿ ವಕೀಲ ಎಚ್.ಎಸ್.ಪಾಂಚಾಲ್ ತಿಳಿಸಿದ್ದಾರೆ.

'ಗುತ್ತಿಗೆದಾರರಿಗೆ ಅರ್ಹತೆ ಇರಲಿಲ್ಲ': 'ತೂಗುಸೇತುವೆಯ ದುರಸ್ತಿಯ ಗುತ್ತಿಗೆ ಪಡೆದಿದ್ದ ಗುತ್ತಿಗೆದಾರರು ಇಂಥ ಕಾರ್ಯ ಕೈಗೊಳ್ಳುವ ಅರ್ಹತೆಯನ್ನೇ ಹೊಂದಿರಲಿಲ್ಲ' ಎಂದು ಇಲ್ಲಿನ ನ್ಯಾಯಾಲಯಕ್ಕೆ ಪ್ರಾಸಿಕ್ಯೂಷನ್ ತಿಳಿಸಿದೆ.

'ಸೇತುವೆಯ ನೆಲಹಾಸನ್ನು ಬದಲಿಸಲಾಗಿದೆ. ಕೇಬಲ್‌ಗಳನ್ನು ಬದಲಾಯಿಸಿರಲಿಲ್ಲ ಹಾಗೂ ಇವು ಭಾರವನ್ನು ಸಹಿಸುವ ಸಾಮರ್ಥ್ಯ ಹೊಂದಿರಲಿಲ್ಲ ಎಂಬುದಾಗಿ ವಿಧಿವಿಜ್ಞಾನ ವರದಿಯಲ್ಲಿ ಹೇಳಲಾಗಿದೆ' ಎಂದೂ ನ್ಯಾಯಾಲಯಕ್ಕೆ ತಿಳಿಸಲಾಗಿದೆ.

ಶಾಸಕ ಎಂ.ಪಿ.ರೇಣುಕಾಚಾರ್ಯರ ಸಹೋದರನ ಮಗ ನಾಪತ್ತೆ

ಪ್ರಜಾವಾಣಿ ವಾರ್ತೆ

ಹೊನ್ನಾಳಿ: ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ಸಹೋದರ ಎಂ.ಪಿ. ರಮೇಶ್ ಅವರ ಹಿರಿಯ ಪುತ್ರ ಎಂ.ಆರ್. ಚಂದ್ರಶೇಖರ್ (25) ಕಾಣೆಯಾಗಿದ್ದಾರೆ.

ಭಾನುವಾರ ಸಂಜೆ 7.30ಕ್ಕೆ ಮನೆಯಿಂದ ಕಾರ್‌ನಲ್ಲಿ ತೆರಳಿರುವ ಚಂದ್ರಶೇಖರ್ ಇದುವರೆಗೂ ವಾಪಸ್ ಬಂದಿಲ್ಲ ಎಂದು ಅವರ ತಂದೆ ಹೊನ್ನಾಳಿಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.


ಎಂ.ಆರ್. ಚಂದ್ರಶೇಖರ್

ರೇಣುಕಾಚಾರ್ಯ ಸೇರಿದಂತೆ ಕುಟುಂಬ ಸದಸ್ಯರು ಹುಡುಕಾಟ ನಡೆಸಿದ್ದು, ಎರಡು ದಿನ ಕಳೆದರೂ ಸುಳಿವು ಸಿಕ್ಕಿಲ್ಲ. 'ಎಸ್‌ಪಿ, ಡಿವೈಎಸ್‌ಪಿ ಮಾರ್ಗದರ್ಶನದಲ್ಲಿ 3 ತಂಡಗಳನ್ನು ರಚಿಸಿ ಶೋಧ ಕಾರ್ಯ ಕೈಗೊಂಡಿದ್ದೇವೆ' ಎಂದು ಸಿಪಿಐ ಸಿದ್ದೇಗೌಡ ತಿಳಿಸಿದ್ದಾರೆ.

ಚಿತ್ರಾವಳಿ


ಪರಿಶ್ರಮ ನೀಟ್ ಅಕಾಡೆಮಿಯ ಟಾಪರ್ ಸಾತ್ವಿಕ್ ಎಂ. ಅವರಿಗೆ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ನಲ್ಲಿ (ಎಐಐಎಂಎಸ್) ಸೀಟ್ ಲಭಿಸಿದ್ದಕ್ಕೆ ಸನ್ಮಾನಿಸಲಾಯಿತು. ಶಾಸಕ ಅರವಿಂದ್ ಲಿಂಬಾವಳಿ ಇದ್ದರು.



1785ರಲ್ಲಿ ಕೊಡವರ ಹತ್ಯಾಕಾಂಡ ನಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಫ್ರಾನ್ಸ್ ಸರ್ಕಾರ ಕ್ಷಮೆಯಾಚಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ಕೊಡವ ನೇತೃತ್ವದಲ್ಲಿ ಕೊಡವ ಸಮುದಾಯದವರು ನವದೆಹಲಿಯ ಜಂತರ್ ಮಂತರ್‌ನಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

43 ದ್ವಿಚಕ್ರ ವಾಹನ ಸಮೇತ ಐವರ ಬಂಧನ

ಬೆಂಗಳೂರು: ದ್ವಿಚಕ್ರ ವಾಹನ ಕಳ್ಳತನ ಪ್ರಕರಣ ಭೇದಿಸಲು ಪ್ರತ್ಯೇಕ ಕಾರ್ಯಾಚರಣೆ ನಡೆಸಿರುವ ವಿದ್ಯಾರಣ್ಯಪುರ ಹಾಗೂ ವರ್ತೂರು ಠಾಣೆ ಪೊಲೀಸರು, ಕೃತ್ಯದಲ್ಲಿ ಭಾಗಿಯಾಗಿದ್ದ ಐವರು ಆರೋಪಿಗಳನ್ನು ಬಂಧಿಸಿದ್ದಾರೆ.

'ಶೇಖ್ ನಿಸಾರ್ (20), ಸಾಹಿಲ್ ಪಾಷಾ (27), ಶೇಖ್ ತೌಸೀಫ್ (21), ತಮಿಳುನಾಡಿನ ಬಾಬು (24) ಹಾಗೂ ನಿತಿನ್ (23) ಬಂಧಿತರು. ಇವರಿಂದ ₹ 30 ಲಕ್ಷ ಮೌಲ್ಯದ 43 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ನೋಂದಣಿ ಫಲಕ ಬದಲಿಸಿ ಮಾರಾಟ: 'ಆರೋಪಿಗಳಾದ ನಿಸಾರ್, ಸಾಹಿಲ್ ಹಾಗೂ ತೌಸೀಫ್ ಮೂವರೂ ಅಪರಾಧ ಹಿನ್ನೆಲೆಯುಳ್ಳವರು. ಇವರಿಂದ ₹ 15 ಲಕ್ಷ ಮೌಲ್ಯದ 23 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ವಿದ್ಯಾರಣ್ಯಪುರ ಪೊಲೀಸರು ಹೇಳಿದರು.

'ಕಳ್ಳತನ ಹಾಗೂ ಸುಲಿಗೆ ಮಾಡುವುದನ್ನೇ ಆರೋಪಿಗಳು ವೃತ್ತಿ ಮಾಡಿಕೊಂಡಿದ್ದರು. ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ವಾಹನಗಳನ್ನು ಗುರುತಿಸಿ ಕದ್ದೊಯ್ಯುತ್ತಿದ್ದರು. ನೋಂದಣಿ ಫಲಕ ಬದಲಾಯಿಸಿ, ಕಡಿಮೆ ಬೆಲೆಗೆ ಮಾರುತ್ತಿದ್ದರು. ಬಂದ ಹಣವನ್ನು ಹಂಚಿಕೊಂಡು, ಮೋಜು–ಮಸ್ತಿ ಮಾಡುತ್ತಿದ್ದರು' ಎಂದರು.

'ವಿಜಯಾ ಬ್ಯಾಂಕ್ ಲೇಔಟ್ ನಿವಾಸಿಯೊಬ್ಬರ ಬೈಕ್ ಇತ್ತೀಚೆಗೆ ಕಳ್ಳತನವಾಗಿತ್ತು. ಈ ಬಗ್ಗೆ ದಾಖಲಾದ ಪ್ರಕರಣದ ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು.' 'ಯಲಹಂಕ ನ್ಯೂ ಟೌನ್, ಕೊಡಿಗೇಹಳ್ಳಿ, ಯಶವಂತಪುರ, ಜೆ.ಸಿ. ನಗರ, ಹಣ್ಣೂರು, ಬಾಗಲಗುಂಟೆ, ಶೇಷಾದ್ರಿಪುರ, ವಿಜಯನಗರ, ಬನಶಂಕರಿ, ರಾಜಾಜಿನಗರ ಹಾಗೂ ನೆಲಮಂಗಲ ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ಅಪರಾಧ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ತಮಿಳುನಾಡಿನಿಂದ ಬಂದು ಕಳ್ಳತನ: 'ಆರೋಪಿಗಳಾದ ಬಾಬು ಹಾಗೂ ನಿತಿನ್, ತಮಿಳುನಾಡಿನಿಂದ ಆಗಾಗ ಬೆಂಗಳೂರಿಗೆ ಬಂದು ದ್ವಿಚಕ್ರ ವಾಹನ ಕದಿಯುತ್ತಿದ್ದರು. ಅಂಥ ವಾಹನಗಳನ್ನು ಮಾರಾಟ ಮಾಡಿ, ಬಂದ ಹಣವನ್ನು ಹಂಚಿಕೊಳ್ಳುತ್ತಿದ್ದರು. ಇವರಿಂದ ₹ 15 ಲಕ್ಷ ಮೌಲ್ಯದ 20 ವಾಹನ ಜಪ್ತಿ ಮಾಡಲಾಗಿದೆ' ಎಂದು ವರ್ತೂರು ಪೊಲೀಸರು ತಿಳಿಸಿದರು.

ನಗರದಲ್ಲಿ ಇಂದು

ಇನ್ವೆಸ್ಟ್ ಕರ್ನಾಟಕ–2022: ಜಾಗತಿಕ ಹೂಡಿಕೆದಾರರ ಸಮಾವೇಶ: ಅತಿಥಿಗಳು: ನರೇಂದ್ರ ಮೋದಿ, ಉಪಸ್ಥಿತಿ: ಥಾವರಚಂದ ಗೆಹಲೋತ್, ಬಸವರಾಜ ಬೊಮ್ಮಾಯಿ, ಪ್ರಲ್ಹಾದ್ ಜೋಶಿ, ರಾಜೀವ್ ಚಂದ್ರಶೇಖರ್, ಶೋಭಾ ಕರಂದ್ಲಾಜೆ, ಡಾ.ಸಿ.ಎನ್ ಅಶ್ವತ್ಥನಾರಾಯಣ, ಸ್ಥಳ: ಬೆಂಗಳೂರು, ಅರಮನೆ, ಬೆಳಿಗ್ಗೆ 10

ಭುವನೇಶ್ವರಿ ದೇವಿ ಜ್ಯೋತಿ ಮೆರವಣಿಗೆ ಮತ್ತು ವಕೀಲರಿಂದ ಬೈಕ್ ರ‍್ಯಾಲಿ, ಉದ್ಘಾಟನೆ: ಪ್ರಭುಲಿಂಗ.ಕೆ. ನಾವದಗಿ, ಪುಷ್ಪಾರ್ಚನೆ: ಎಂ.ವಿ. ನರಗುಂದ, ಪ್ರಮಾಣ ಬೋಧನೆ: ರಾಮಚಂದ್ರ. ಡಿ. ಹುದ್ದಾರ, ಅತಿಥಿಗಳು: ವಿವೇಕ್ ಸುಬ್ಬಾರೆಡ್ಡಿ, ರಮೇಶ್ ಬಾಬು, ಕೆ. ಗಂಗಪ್ಪ, ಅಧ್ಯಕ್ಷತೆ: ಜಗದೀಶ್.ಎಲ್., ಆಯೋಜನೆ: ಬೆಂಗಳೂರು ವಕೀಲರ ಸಾಹಿತ್ಯ ಕೂಟ, ಸ್ಥಳ: ಸಿಟಿ ಸಿವಿಲ್ ಕೋರ್ಟ್‌ನಿಂದ ಹೈಕೋರ್ಟ್‌ವರೆಗೆ, ಬೆಳಿಗ್ಗೆ 9

ಇಂಟರ್ ಸ್ಕೂಲ್ ರಸಪ್ರಶ್ನೆ ಕಾರ್ಯಕ್ರಮ: ಆಯೋಜನೆ: ಡೆಕ್ಕನ್ ಹೆರಾಲ್ಡ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಆವರಣ, ಬೆಳಿಗ್ಗೆ 10ರ ನಂತರ

ಮಂಗಳಮುಖಿಯರ ಜಾಗೃತಿ ಸಮಾವೇಶ: ಅತಿಥಿಗಳು: ಸಿದ್ಧಲಿಂಗೇಶ್ವರ ಸ್ವಾಮೀಜಿ, ಆರ್. ಅಶೋಕ್, ವಿ. ಸೋಮಣ್ಣ, ಎಸ್. ಆರ್. ವಿಶ್ವನಾಥ್, ಎಸ್. ಮುನಿರಾಜು, ಆಯೋಜನೆ: ನಮ್ಮನೆ ಸುಮ್ಮನೆ ನಿರಾಶ್ರಿತ ಆಶ್ರಮ, ಸ್ಥಳ: ಗಂಗೊಂಡನಹಳ್ಳಿ, ಚಾಮುಂಡೇಶ್ವರಿ ಬಡಾವಣೆ, ದಾಸನಪುರ, ಹೋಬಳಿ, ಬೆಳಿಗ್ಗೆ 10.15

ಜೇನುನೊಣದ ಪೆಟ್ಟಿಗೆಗಳ ವಿತರಣಾ ಕಾರ್ಯಕ್ರಮ: ಅತಿಥಿಗಳು: ಮನೋಜ್ ಕುಮಾರ್, ಆಯೋಜನೆ: ಖಾದಿ ಇಂಡಿಯಾ, ಸ್ಥಳ: ಎಂಡಿಟಿಸಿ ಆವರಣ, ಕೆವಿಐಸಿ, ವಿಜಿನಾಪುರ, ಬೆಳಿಗ್ಗೆ 11

ಹ್ಯುಮೆನ್‌ಸ್ಟಿಕ್ ಲೀಡರ್ಸ್ ವ್ಯಾಲ್ಯೂ ಎಜುಕೇಷನ್ ಲ್ಯಾಬ್: ಅತಿಥಿಗಳು: ಸುಧಾಮೂರ್ತಿ, ಅಧ್ಯಕ್ಷತೆ: ಡಿ. ಕೆ. ಶಿವಕುಮಾರ್, ಐಶ್ವರ್ಯ ಡಿಕೆಎಸ್ ಹೆಗಡೆ, ಆಯೋಜನೆ: ನ್ಯಾಷನಲ್ ಎಜುಕೇಷನ್ ಫೌಂಡೇಶನ್, ಸ್ಥಳ: ಎನ್‌ಎಚ್‌ವಿಪಿಎಸ್ ಬನಶಂಕರಿ, ಬೆಳಿಗ್ಗೆ 11

ಎಪಿಜೆ ಅಬ್ದುಲ್ ಕಲಾಂ ಕನಸಿನ ಶಾಲೆಯ ಮುಖ್ಯಸ್ಥರಿಗೆ ಅಭಿನಂದನಾ ಸಮಾರಂಭ: ಉದ್ಘಾಟನೆ: ರಾಕೇಶ್ ಸಿಂಗ್, ಅತಿಥಿಗಳು: ತುಷಾರ್ ಗಿರಿನಾಥ್, ರಾಮ್ ಪ್ರಸಾತ್ ಮನೋಹರ್, ವಿ.ಜಿ. ಲೋಕೇಶ್, ಆಯೋಜನೆ: ಬಿಬಿಎಂಪಿ, ಸ್ಥಳ: ಸರ್ ಪುಟ್ಟಣ್ಣಚೆಟ್ಟಿ ಪುರಭವನ, ಮಧ್ಯಾಹ್ನ 3

ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಕನ್ನಡ ಸಾಂಸ್ಕೃತಿಕ ಸಂಭ್ರಮ, ಪುನೀತ್ ರಾಜ್‌ಕುಮಾರ್ ಅವರಿಗೆ ಪುಷ್ಪನಮನ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಚಂದ್ರಶೇಖರ ಕಂಬಾರ, ಉಪಸ್ಥಿತಿ: ಬಿ. ಶ್ರೀರಾಮುಲು, ಪ್ರಶಸ್ತಿ ಪುರಸ್ಕೃತರು: ಟಿ. ಎ. ನಾರಾಯಣಗೌಡ, ನಂದೀಶ್ ರೆಡ್ಡಿ, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ನೌಕರರ ಕನ್ನಡ ಕೃಷಿ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಮಧ್ಯಾಹ್ನ 3.30

ನೆಹರೂ ಯುವ ಕೇಂದ್ರ ಸಂಘಟನೆ ಉದ್ಘಾಟನೆ: ಕೆ. ಸಿ. ನಾರಾಯಣಗೌಡ, ಉಪಸ್ಥಿತಿ: ಶಾಲಿನಿ ರಜನೀಶ್, ನಿತೇಶ್ ಕುಮಾರ್ ಮಿಶ್ರ, ಹರ್ಷ ವರ್ಧನ್ ಉಮ್ರೆ, ಆಯೋಜನೆ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸ್ಥಳ: ಗುರುನಾನಕ್ ಭವನ (ಅನೆಕ್ಸರ್), ವಸಂತನಗರ, ಸಂಜೆ 4

ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡ ಝೇಂಕಾರ: ಉದ್ಘಾಟನೆ: ಎಸ್. ಟಿ. ಸೋಮಶೇಖರ್, ಅತಿಥಿಗಳು: ಎಂ. ಪ್ರಕಾಶಮೂರ್ತಿ, ಸಿ.ಕೆ. ರಾಮೇಗೌಡ, ಅಧ್ಯಕ್ಷತೆ: ಎಚ್.ಎಸ್. ಸುಧೀಂದ್ರ ಕುಮಾರ್, ಆಯೋಜನೆ: ಯಶವಂತಪುರ ವಿಧಾನಸಭಾ ಕ್ಷೇತ್ರ ಕಸಾಪ, ಸ್ಥಳ: ಗಾಯತ್ರಿ ಮಂದಿರ, ಬ್ರಾಹ್ಮಣ ಸಭಾ, ಕೆಂಗೇರಿ ಉಪನಗರ, ಸಂಜೆ 6

ಕೋಶ ಬೇಡ, ನಿಗಮ ಬೇಕು: ಬಿಲ್ಲವರ ಒತ್ತಾಯ

ಮಂಗಳೂರು: ಬ್ರಹ್ಮಶ್ರೀ ನಾರಾಯಣ ಗುರು ಕೋಶವನ್ನು ಸ್ಥಾಪಿಸಿರುವ ಸರ್ಕಾರದ ಕ್ರಮಕ್ಕೆ ದಕ್ಷಿಣ ಕನ್ನಡ–ಉಡುಪಿ ಜಿಲ್ಲೆಗಳ ಬಿಲ್ಲವ ಮುಖಂಡರು ವಿರೋಧ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಬಿಲ್ಲವ ಸಮಾಜದ ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಮಂಗಳವಾರ ಸಭೆ ಸೇರಿ ಚರ್ಚಿಸಿದರು.

'ಬ್ರಹ್ಮಶ್ರೀ ನಾರಾಯಣ ಗುರು ನಿಗಮ ಸ್ಥಾಪಿಸಬೇಕು ಎಂಬುದು ಬಿಲ್ಲವ, ಈಡಿಗ ಹಾಗೂ ನಾಮಧಾರಿ ಸೇರಿದಂತೆ 26 ಪಂಗಡಗಳ ಒಕ್ಕೊರಲ ಬೇಡಿಕೆ. ಹಾಗಾಗಿ ನಾರಾಯಣ ಗುರು ಕೋಶವನ್ನು ಒಪ್ಪಲಾಗದು' ಎಂದು ಸಮಾಜದ ಪ್ರಮುಖರು ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕುದ್ರೋಳಿ ಗೋಕರ್ಣನಾಥ ಕ್ಷೇತ್ರದ ಖಜಾಂಚಿ ಪದ್ಮರಾಜ್ ಆರ್., 'ವಿಧಾನಸಭಾ ಚುನಾವಣೆ ಹತ್ತಿರ ಬರುತ್ತಿರುವ ಸಮಯದಲ್ಲಿ ನಾರಾಯಣ ಗುರು ಕೋಶವನ್ನು ಸ್ಥಾಪಿಸುವ ಮೂಲಕ ಸರ್ಕಾರ ಬಿಲ್ಲವರನ್ನು ತಪ್ಪುದಾರಿಗೆ ಎಳೆಯುವ ಪ್ರಯತ್ನ ನಡೆಸಿದೆ' ಎಂದು ಟೀಕಿಸಿದರು.


ನಾರಾಯಣಗುರು ವಿಚಾರ ವೇದಿಕೆ ಅಧ್ಯಕ್ಷ ಸತ್ಯಜಿತ್ ಸುರತ್ಕಲ್, 'ಬ್ರಹ್ಮಶ್ರೀ ನಾರಾಯಣಗುರು ನಿಗಮ ಸ್ಥಾಪನೆಗಾಗಿ ಸರ್ಕಾರದ ಮೇಲೆ ಒತ್ತಡ ಹೇರಲು 2023ರ ಜ.29ರಂದು ಉಭಯ ಜಿಲ್ಲೆಗಳ ಬಿಲ್ಲವರು ಸೇರಿ ಮಂಗಳೂರಿನಲ್ಲಿ ಭಾರಿ ಸಮಾವೇಶ ನಡೆಸಲಿದ್ದೇವೆ. 1 ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸಲಿದ್ದಾರೆ' ಎಂದರು.

ವಿಗ್ರಹಗಳ ಕಳ್ಳಸಾಗಣೆ: 6 ಮಂದಿಗೆ ಜೈಲು

ಚೆನ್ನೈ(ಪಿಟಿಐ): ಪ್ರಾಚೀನ ವಿಗ್ರಹಗಳ ಅಂತರರಾಷ್ಟ್ರೀಯ ವ್ಯಾಪಾರಿ ಸುಭಾಷ್‌ಚಂದ್ರ ಕಪೂರ್ ಹಾಗೂ ಆತನ ಐವರು ಸಹಾಯಕರಿಗೆ 10 ವರ್ಷ ಜೈಲು ಶಿಕ್ಷೆ ವಿಧಿಸಿ ಕುಂಭಕೋಣಂನ ವಿಚಾರಣಾ ನ್ಯಾಯಾಲಯ ಮಂಗಳವಾರ ಆದೇಶಿಸಿದೆ.

ಉದಯರ್‌ಪಾಳ್ಯಂನಲ್ಲಿ ₹ 94 ಕೋಟಿ ಮೌಲ್ಯದ 19 ಪ್ರಾಚೀನ ವಿಗ್ರಹಗಳನ್ನು ಕಳ್ಳತನ ಮಾಡಿ, ನ್ಯೂಯಾರ್ಕ್‌ನ ಆರ್ಟ್ ಆಫ್ ದಿ ಪಾಸ್ಟ್ ಗ್ಯಾಲರಿಗೆ ರಫ್ತು ಮಾಡಿದ್ದ ಪ್ರಕರಣದಲ್ಲಿ ನ್ಯಾಯಾಲಯ ಈ ಶಿಕ್ಷೆ ವಿಧಿಸಿದೆ ಎಂದು ಸಿಐಡಿ ತಿಳಿಸಿದೆ.

ಇಂಟರ್‌ಪೋಲ್ ನೀಡಿದ್ದ ನೋಟಿಸ್ ಮೇರೆಗೆ, ಕಪೂರ್‌ನನ್ನು 2011ರ ಅಕ್ಟೋಬರ್ 30ರಂದು ಜರ್ಮನಿಯಲ್ಲಿ ಬಂಧಿಸಲಾಗಿತ್ತು.

ವಿಧಾನಸೌಧದ ಮುಂಭಾಗ ಮಂಗಳವಾರ ನಟ ಪುನೀತ್ ರಾಜಕುಮಾರ್ ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ಪ್ರದಾನ ಮಾಡುವ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ (ಎಡಚಿತ್ರ) ಸಮಾರಂಭದಲ್ಲಿ ಅಭಿಮಾನಿಗಳು ನೆರೆದಿದ್ದ ಪರಿ —ಪ್ರಜಾವಾಣಿ ಚಿತ್ರಗಳು/ ಎಂ.ಎಸ್.ಮಂಜುನಾಥ್



ಗುಬ್ಬಲಾಳದ ಪ್ರೆಸ್ಟೀಜ್ ಲೇಕ್ ರಿಡ್ಜ್ ಅಪಾರ್ಟ್‌ಮೆಂಟ್‌ನಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಯಶವಂತ ಸರದೇಶಪಾಂಡೆ ಭಾಗವಹಿಸಿದ್ದರು. ಸ್ಥಳೀಯ ನಿವಾಸಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಬ್ರಿಗೇಡ್ ಗೇಟ್ ವೇ ಅಸೋಸಿಯೇಷನ್ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಕಸಾಪ ಅಧ್ಯಕ್ಷ ಮಹೇಶ ಜೋಶಿ, ನಟ ವಿಜಯ ರಾಘವೇಂದ್ರ ಭಾಗವಹಿಸಿದ್ದರು. ಸ್ಥಳೀಯ ನಿವಾಸಿಗಳು ಪಾಲ್ಗೊಂಡಿದ್ದರು.

ಹೊನಲಾಗಿ ಹರಿದ ಕನ್ನಡ ಪ್ರೇಮ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮಹಾನಗರವನ್ನು ಸಣ್ಣಗೆ ಆವರಿಸಿದ್ದ ಕಾರ್ತೀಕ ಮಾಸದ ಹಿತವಾದ ಚಳಿ, ಶರದೃತುವಿನಲ್ಲೂ ಸುರಿದ ವರ್ಷಧಾರೆ, ಕಣ್ಣು ಹಾಯಿಸಿದ ಕಡೆಯೆಲ್ಲಾ ಕನ್ನಡದ ಬಾವುಟಗಳ ಶೃಂಗಾರ, ಕೆಂಪೇಗೌಡ ರಸ್ತೆ ಸೇರಿ ಅಲ್ಲಲ್ಲಿ ತಾಯಿ ಭುವನೇಶ್ವರಿಯ ಭಾವಚಿತ್ರ ಹೊತ್ತ ಮೆರವಣಿಗೆಗಳು, ಬಾಜಾ ಭಜಂತ್ರಿಯ ಅಬ್ಬರ, ಸಂತೋಷದಲ್ಲಿ ಹೆಣ್ಣು–ಗಂಡುಗಳ ಕುಣಿತ, ಮೆಟ್ರೊ ರೈಲುಗಳಲ್ಲಿ ವಿಧಾನಸೌಧದತ್ತ ಧಾವಿಸುತ್ತಿದ್ದ ಅಭಿಮಾನಿಗಳಿಂದ ನಾಡದೇವಿಗೆ, ನಟ ಪುನೀತ್ ರಾಜ್‌ಕುಮಾರ್‌ಗೆ ಭರಪೂರ ಗೌರವ, ಸಿಂಗಾರಗೊಂಡ ಸಿಟಿ ಬಸ್‌ಗಳು, ಕಾರುಗಳು, ರಿಕ್ಷಾಗಳು, ದ್ವಿಚಕ್ರ ವಾಹನಗಳು; ಹೋಟೆಲು, ಕಚೇರಿಗಳಲ್ಲಿ ಮಾರ್ದನಿಸುತ್ತಿದ್ದ ನೆಲ–ಜಲ ಅಭಿಮಾನ ಪ್ರತೀಕದ ಭಾವಗೀತೆಗಳ ಅನುರಣನ...!

ಮಂಗಳವಾರ 67ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ನಗರದ ಎಲ್ಲೆಡೆ ಕಂಡುಬಂದ ಹಬ್ಬದ ವಾತಾವರಣವಿದು. ಹಳದಿ, ಕೆಂಪು ಬಣ್ಣದ ಅಂಗಿ–ಪ್ಯಾಂಟ್ ತೊಟ್ಟ ಪುರುಷರು, ರವಿಕೆ–ಸೀರೆ ಉಟ್ಟು ಕಂಗೊಳಿಸುತ್ತಿದ್ದ ಮಹಿಳೆಯರು, ಹೊದ್ದ ಶಾಲು, ಹೂವಿನ ಹಾರಗಳಲ್ಲೂ ಇದೇ ವರ್ಣ ಸಂಯೋಜನೆಯ ಝಲಕುಗಳನ್ನು ಪ್ರದರ್ಶಿಸುತ್ತಾ ಕನ್ನಡತನದ ಹೆಮ್ಮೆ ಮೆರೆದ ಸಂಘಟನೆಗಳ ಯುವಪಡೆಯ ಉತ್ಸಾಹಕ್ಕೆ ಎಣೆ ಇರಲಿಲ್ಲ.

ಸಾರ್ವತ್ರಿಕ ರಜೆ ಹಾಗೂ ಇನ್ನೂ ದಸರಾ ದೀಪಾವಳಿಯ ರಿಯಾಯ್ತಿಗಳು ಚಾಲ್ತಿಯಲ್ಲಿದ್ದ ಕಾರಣ ಮೈಸೂರು ಬ್ಯಾಂಕ್, ಅವೆನ್ಯೂ ರಸ್ತೆ, ಕೆ.ಆರ್.ಮಾರುಕಟ್ಟೆ, ಮಲ್ಲೇಶ್ವರ, ಬಸವನಗುಡಿ, ಜಯನಗರದಂತಹ ಸಾಂಪ್ರದಾಯಿಕ ಮಾರುಕಟ್ಟೆ ಪ್ರದೇಶಗಳಲ್ಲಿ ಗ್ರಾಹಕರ ಖರೀದಿ ಭರಾಟೆಯೂ ಹೆಚ್ಚಿತ್ತು.

ಅತ್ತ ಮತ್ತೊಂದು ತುದಿಯಲ್ಲಿ ಕಾರ್ಲ್ ಝೂಯೀಸ್ ಇಂಡಿಯಾ ಪ್ರೈ. ಲಿಮಿಟೆಡ್ ಸಾಫ್ಟ್‌ವೇರ್ ಕಂಪನಿಯ ಸಿಬ್ಬಂದಿ, ನೌಕರರು, ಕನ್ನಡ ರಾಜ್ಯೋತ್ಸವದ ಅಂಗವಾಗಿ ಬೆಳಿಗ್ಗೆ 9 ಗಂಟೆಗೆ ಧ್ವಜಾರೋಹಣ ಮಾಡಿ, ಸಿಹಿ ಅಂಚಿ, ಬೊಮ್ಮಸಂದ್ರ ಜಿಗಣಿ ಲಿಂಕ್ ರಸ್ತೆಯನ್ನು ಸ್ವಚ್ಛಗೊಳಿಸಿದರು. ಕಂಪನಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅರುಣ್ ಶೆಟ್ಟಿ, ಅತಿಥಿಗಳಾದ ಡಾ. ರಾಮಮೂರ್ತಿ ಶುಕ್ಲಾ, ಸುದರ್ಶನ್ ರಾಮಯ್ಯ, ಸತ್ಯಾಧರ ಮಿಶ್ರಾ, ಮನೋಜ್ ಶರ್ಮಾ, ಹರ್ಷಾ, ಮಹೇಶ್, ಮಂಜು, ಸತೀಶ್ ಬಣ ಈ ಅರ್ಥಪೂರ್ಣ ಕಾರ್ಯಕ್ಕೆ ಸಾಕ್ಷಿಯಾಯಿತು.

ಸಾರ್ವಜನಿಕರಿಗೆ ಸಿಹಿ ಹಂಚಿಕೆ, ಲಘು ಫಲಾಹಾರ ವಿತರಣೆಯಂತಹ ಹತ್ತಾರು ಕಾರ್ಯಕ್ರಮಗಳಿಗೆ ಶ್ರೀಗಣೇಶ ರೂಪವಾಗಿ ಖ್ಯಾತ ನಟ ಎಚ್.ಜಿ.ದತ್ತಾತ್ರೇಯ (ದತ್ತಣ್ಣ) ಅವರು ಬಸವನಗುಡಿಯ ಯೂನಿಯನ್ ಅಂಡ್ ಸರ್ವೀಸ್ ಕ್ಲಬ್ ಆವರಣದಲ್ಲಿ ಕನ್ನಡಕ್ಕಾಗಿ ನಡಿಗೆ ಚಾಲನೆ ನೀಡಿದ್ದು ವಿಶೇಷವಾಗಿತ್ತು. ಬೆಳಗಿನ ಚುಮುಚುಮು ಚಳಿಯಲ್ಲಿ ಕನ್ನಡಾಭಿಮಾನಿಗಳು ಎರಡು ಕಿ.ಮೀ ದೂರ ನಡೆದು ಸ್ವಾತಂತ್ರ್ಯ ಪೂರ್ವದಲ್ಲಿ ಹೋರಾಟಗಾರರ ಪ್ರಭಾತ ಫೇರಿ ನೆನಪಿಸಿದರು. ಕೆಲವಡೆ ಧೋ ಎಂದು ಸುರಿದ ಮಳೆ ಸಂಜೆಯ ಆರ್ಕೆಸ್ಟ್ರಾ, ಮನರಂಜನೆ ಕಾರ್ಯಕ್ರಮಗಳಿಗೆ ಕೊಂಚ ಅಡ್ಡಿಯುಂಟು ಮಾಡಿದರೂ ರಾಜ್ಯೋತ್ಸವದ ರಂಗು ವರ್ಣರಂಜಿತ ದೀಪಗಳ ಝಗಮಗದಲ್ಲಿ ನಾವೀನ್ಯಪೂರ್ಣವಾಗಿಯೇ ಕಂಗೊಳಿಸಿತು.



ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಕರ್ನಾಟಕ ರಾಜ್ಯೋತ್ಸವ ಸಮಿತಿ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಾನಪದ ಕಲಾತಂಡಗಳು ನೃತ್ಯ ಪ್ರದರ್ಶನ ಮಾಡಿದವು —ಪ್ರಜಾವಾಣಿ ಚಿತ್ರ

'ಪ್ರಾಚೀನ ಲಿಪಿಗಳಲ್ಲಿ ಕನ್ನಡವೂ ಒಂದು'

ಬೆಂಗಳೂರು: 'ಹಿಂದೆ ಸಂಸ್ಕೃತಕ್ಕೂ ಲಿಪಿ ಇರಲಿಲ್ಲ, ಸಂಸ್ಕೃತ ಶಾಸನಗಳು ಸಹ ಮುಖ್ಯ ಕನ್ನಡದಲ್ಲೇ ಬರೆಯಲ್ಪಟ್ಟಿವೆ. ಕೇಂದ್ರ ಸರ್ಕಾರ ಮಾನ್ಯ ಮಾಡಿರುವ ಶಾಸ್ತ್ರೀಯ ಭಾಷೆಗಳಲ್ಲಿ ಪ್ರಾಚೀನ ಭಾಷೆ ಮತ್ತು ಲಿಪಿಯನ್ನು ಹೊಂದಿರುವ ಭಾಷೆ ಕನ್ನಡ' ಎಂದು ಸಾಹಿತಿ ಪಿ.ವಿ.ನಾರಾಯಣ ಅಭಿಪ್ರಾಯಪಟ್ಟರು.

ನಗರ ಜಿಲ್ಲಾ ಕಸಾಪ ವತಿಯಿಂದ ಲಾಲ್‌ಬಾಗ್ ಪಶ್ಚಿಮ ದ್ವಾರದಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ಮೊದಲ ತೀರ್ಥಂಕರರು ತಮ್ಮ ಪುತ್ರಿ ಬ್ರಾಹ್ಮಿಗೆ ಅಕ್ಷರ ಕಲಿಸಿದರೆಂದು ಪಂಪ ಬರೆದಿದ್ದಾನೆ. ಬ್ರಾಹ್ಮಿ ಬರೆದ ಅಕ್ಷರಗಳೇ ಬ್ರಾಹ್ಮಿ ಲಿಪಿಯಾಗಿದೆ' ಎಂದು ವಿಶ್ಲೇಷಿಸಿದರು.

ಬೆಂಗಳೂರು ನಗರ ಜಿಲ್ಲಾ ಕಸಾಪ ಅಧ್ಯಕ್ಷ ಎಂ.ಪ್ರಕಾಶಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಸದಸ್ಯರಾದ ಎಲ್. ಹರ್ಷ, ಡಾ. ಹಂ.ಗು. ರಾಜೇಶ್, ನಾಗರಾಜಸ್ವಾಮಿ, ಮಾಗಡಿ ಗಿರೀಶ್, ಇಂದಿರಾ ಶರಣ, ವಿಜಯಲಕ್ಷ್ಮಿ ಸತ್ಯಮೂರ್ತಿ, ಎಸ್.ತಿಮ್ಮಯ್ಯ, ಸಿ. ಮುನಿಕೃಷ್ಣ, ಪರಿಸರ ರಾಮಕೃಷ್ಣ ಮತ್ತು ವಿವಿಧ ವಿಧಾನಸಭಾ ಘಟಕಗಳ ಅಧ್ಯಕ್ಷರು ಪದಾಧಿಕಾರಿಗಳು ಪಾಲ್ಗೊಂಡಿದ್ದರು.




ಅಭಿಮಾನಿಗಳ ಭಾವುಕ ಕ್ಷಣ... (ಎಡಚಿತ್ರ) ಮಳೆಯಲ್ಲೂ ಬ್ಯಾರಿಕೇಡ್ ಜಿಗಿದು ವಿಧಾನಸೌಧದತ್ತ ಧಾವಿಸಿದ ಪುನೀತ್ ವೀರಾಭಿಮಾನಿ....
ಪ್ರಜಾವಾಣಿ ಚಿತ್ರಗಳು/ಪುಷ್ಕರ್ ವಿ

ನಾಡು ಕಟ್ಟಲು ಸಾಧಕರ ಅನುಭವದ ನೆರವು: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇದುವರೆಗೆ ರಾಜ್ಯೋತ್ಸವ ಪ್ರಶಸ್ತಿ ಸ್ವೀಕರಿಸಿದವರ ಸಾಧಕರ ಕುರಿತು ಕೃತಿ ರಚಿಸಬೇಕು. ಅವರ ಅನುಭವ ಮತ್ತು ನಾಡು ಕಟ್ಟುವ ಬಗೆ ಕೃತಿಯಲ್ಲಿ ಇರಬೇಕು. ಎಲ್ಲರೂ ಸೇರಿ ನಾಡು ಕಟ್ಟೋಣ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಶಿಸಿದರು.

ರಾಜ್ಯೋತ್ಸವ ಪ್ರಶಸ್ತಿ ಪ್ರದಾನಕ್ಕೆ ಮೊದಲು ಮಾತನಾಡಿದ ಅವರು, 'ವಯಸ್ಸಿಗೂ ಸಾಧನೆಗೂ ಸಂಬಂಧ ಇಲ್ಲ. ಯಾವ ವಯಸ್ಸಿನಲ್ಲಿ ಬೇಕಾದರೂ ಸಾಧನೆ ಸಾಧ್ಯವಿದೆ. ಸಾಧಕರು ಸಣ್ಣ ವಯಸ್ಸಿನಲ್ಲೇ ಬಿಟ್ಟು ಹೋಗುತ್ತಿದ್ದಾರೆ. ದಿವಂಗತ ಪುನೀತ್ ಸಣ್ಣ ವಯಸ್ಸಿನಲ್ಲೇ ಸಾಧನೆ ಮಾಡಿದ್ದವರು. ಅವರ ಮುಗ್ಧತೆ, ಸೇವಾ ಮನೋಭಾವಕ್ಕೆ ಇದೇ ಸಾಕ್ಷಿ' ಎಂದು ನುಡಿದರು.

'ದುಡ್ಡು ಕೊಟ್ಟು ಡಾಕ್ಟರೇಟ್ ಪದವಿ ಪಡೆಯುತ್ತಿದ್ದಾರೆ. ಶಾಲೆಯಷ್ಟೇ ಸ್ಥಳದಲ್ಲಿ ವಿಶ್ವವಿದ್ಯಾಲಯಗಳು ತಲೆಯೆತ್ತಿವೆ' ಎಂದು ಕಳವಳ ವ್ಯಕ್ತಪಡಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನಿಲ್‌ಕುಮಾರ್ ಮಾತನಾಡಿ, 'ಇಸ್ರೋ ಮಾಜಿ ನಿರ್ದೇಶಕ ಕೆ.ಶಿವನ್ ಅವರಿಂದ ಹಿಡಿದು ಪೌರಕಾರ್ಮಿಕ ಮಹಿಳೆಯವರೆಗಿನ ಸಾಧಕರನ್ನು ಗುರುತಿಸಲಾಗಿದೆ. ದೈವ ನರ್ತಕರನ್ನೂ ಗುರುತಿಸಲಾಗಿದೆ. ಸಮಿತಿಯೇ ಸಾಧಕರ ಹುಡುಕಿ ಪ್ರಶಸ್ತಿ ನೀಡಿದೆ. ಇದು ಸಮತೋಲನವಾದ ಪಟ್ಟಿ' ಎಂದು ಹೇಳಿದರು.

ಕುಟುಂಬಸ್ಥರ ಸಂಭ್ರಮ

ರವೀಂದ್ರ ಕಲಾಕ್ಷೇತ್ರದಲ್ಲಿ ಸಂಭ್ರಮ ಮನೆ ಮಾಡಿತ್ತು. ಇಡೀ ಸಭಾಂಗಣ ತುಂಬಿತ್ತು. ಆಸನಗಳ ಕಡಿಮೆಯಿದ್ದ ಕಾರಣಕ್ಕೆ ಹಲವರು ನಿಂತೇ ಇಡೀ ಕಾರ್ಯಕ್ರಮ ಕಣ್ತುಂಬಿಕೊಂಡರು.

ಇಲಾಖೆ ಕಾರ್ಯದರ್ಶಿ ಡಾ.ಎನ್.ಮಂಜುಳಾ ಮಾತನಾಡಿ, '15 ಸಾವಿರ ಕಲಾವಿದರಿಗೆ ಪಿಂಚಣಿ ವಿತರಿಸಲಾಗುತ್ತಿದೆ. ಕಲಾವಿದರ ಪಿಂಚಣಿಯನ್ನು ₹ 1,500ರಿಂದ ₹ 2 ಸಾವಿರಕ್ಕೆ ಹೆಚ್ಚಿಸಲಾಗಿದೆ. 16 ಸಾವಿರ ಕಲಾವಿದರ ದತ್ತಾಂಶ ಸಂಗ್ರಹಿಸುವ ಹಾಗೂ ಗುರುತಿನ ಚೀಟಿ ವಿತರಣೆ ಕಾರ್ಯ ಪ್ರಗತಿಯಲ್ಲಿದೆ' ಎಂದರು.

ಸಚಿವ ಆರ್.ಅಶೋಕ, ಸಂಸದ ತೇಜಸ್ವಿ ಸೂರ್ಯ, ಶಾಸಕ ಉದಯ ಗರುಡಾಚಾರ್, ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ ಹಾಜರಿದ್ದರು.

₹ 5 ಲಕ್ಷ ನಗದು: ಇಸ್ರೊ ಮಾಜಿ ನಿರ್ದೇಶಕ ಕೆ. ಶಿವನ್, ಹೂವಿನಹಡಗಲಿಯ ಪೌರಕಾರ್ಮಿಕ ಮಹಿಳೆ ಮಲ್ಲಮ್ಮ, ಸಾಹಿತಿಗಳಾದ ಪ್ರೊ.ಅ.ರಾ. ಮಿತ್ರ, ಪ್ರೊ.ಕೃಷ್ಣೇಗೌಡ, ಸೋಲಿಗರ ಮಾದಮ್ಮ, ಕಲಾವಿದ ಮಹೇಶ್ವರ ಗೌಡ ಲಿಂಗದಹಳ್ಳಿ ಸೇರಿದಂತೆ 67 ಮಂದಿಗೆ ತಲಾ ₹ 5 ಲಕ್ಷ ನಗದು, 25 ಗ್ರಾಂ ಚಿನ್ನ ಹಾಗೂ ಪ್ರಶಸ್ತಿ ಫಲಕ ನೀಡಿ ಗೌರವಿಸಲಾಯಿತು. ಹಿಂದಿನ ವರ್ಷದವರೆಗೂ ₹ 1 ಲಕ್ಷ ನಗದು ನೀಡಲಾಗುತ್ತಿತ್ತು.

ಭುವನೇಶ್ವರಿ ದೇವಿಯ ರಥ ಎಳೆದ ಚಿಣ್ಣರು

ಬೆಂಗಳೂರು: ಎಲ್ಲಿ ನೋಡಿದರಲ್ಲಿ ರಾರಾಜಿಸಿದ ಕನ್ನಡ ಬಾವುಟಗಳು, ತಾಯಿ ಭುವನೇಶ್ವರಿ ದೇವಿಯ ರಥ ಎಳೆದು ಸಂಭ್ರಮಿಸಿದ ಚಿಣ್ಣರು, ಕನ್ನಡ ತಾಯಿಗೆ ಜಯವಾಗಲಿ ಎಂದು ಮೊಳಗಿದ ಜಯ ಘೋಷಣೆಗಳು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸಮಗ್ರ ಶಿಕ್ಷಣ ಇಲಾಖೆ ಆಯೋಜಿಸಿದ್ದ 67ನೇ ಕರ್ನಾಟಕ ರಾಜ್ಯೋತ್ಸವದಲ್ಲಿ ಶಾಲಾ ಮಕ್ಕಳ ನೃತ್ಯ ವೈಭವದ ದೃಶ್ಯಗಳು ಮನಸೂರೆಗೊಂಡವು. 'ನಾವೆಲ್ಲರೂ ಒಂದಾಗಿ ಮುನ್ನಡೆಯೋಣ' ಎಂಬ ಸಂದೇಶ ಸಾರುತ್ತಾ, ಚಿಣ್ಣರು ಕನ್ನಡದ ತೇರನ್ನು ಎಳೆದರು.

ಉತ್ತರ ವಲಯ–1ರ ಪೀಣ್ಯ ಸರ್ಕಾರಿ ಪ್ರೌಢಶಾಲೆಯ 350 ವಿದ್ಯಾರ್ಥಿಗಳು 'ಎಳೆಯೋಣ ಬಾರಾ ಕನ್ನಡದ ತೇರು' ಗೀತೆಗೆ ಹೆಜ್ಜೆ ಹಾಕಿದರು. ಭುವನೇಶ್ವರಿಯ ತೇರನ್ನು ಎಳೆಯುವ ಮೂಲಕ ಮಕ್ಕಳು ಕನ್ನಡದ ಕಂಪನ್ನು ಪಸರಿಸಿದರು.

ಉತ್ತರ ವಲಯ–4ರ ಯಲಹಂಕದ ಎಂಇಎಸ್ ಪ್ರೌಢಶಾಲೆ 300 ವಿದ್ಯಾರ್ಥಿಗಳು 'ಕರ್ನಾಟಕ ವೈಭವ' ಗೀತೆಗೆ ನೃತ್ಯ ರೂಪಕ ಪ್ರದರ್ಶಿಸಿದರು. ಕೆಂಪೇಗೌಡ, ಕಿತ್ತೂರ ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಒನಕೆ ಓಬವ್ವ, ಕನಕದಾಸರು, ಸರ್ ಎಂ.ವಿಶ್ವೇಶ್ವರಯ್ಯ ಅವರ ವೇಷ ಹಾಕಿಕೊಂಡಿದ್ದ ಮಕ್ಕಳು, ಡಾ.ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್ ಮುಖವಾಡಗಳನ್ನು ಧರಿಸಿದ ಚಿಣ್ಣರು ಎಲ್ಲರ ಕಣ್ಮನ ಸೆಳೆದರು.



'ಕರ್ನಾಟಕ ವೈಭವ' ಗೀತೆಯ ನೃತ್ಯ ರೂಪಕದಲ್ಲಿ ಡಾ.ರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಮುಖವಾಡ ಧರಿಸಿದ್ದ ಚಿಣ್ಣರು —ಪ್ರಜಾವಾಣಿ ಚಿತ್ರ

ಅಂಕಿ-ಅಂಶಗಳು

8,000 ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರೇಕ್ಷಕರು ಮತ್ತು ಮಕ್ಕಳು

650 ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಕ್ಕಳು

76 ಮಕ್ಕಳನ್ನು ಕರೆತಂದ ಶಾಲಾ ಮತ್ತು ಬಿಎಂಟಿಸಿ ಬಸ್‌ಗಳ ಸಂಖ್ಯೆ

ಅವಿಸ್ಮರಣೀಯ ಘಳಿಗೆಯಾದ ಕಾರ್ಯಕ್ರಮ • ಮಳೆ ಲೆಕ್ಕಿಸದ ಅಭಿಮಾನಿಗಳು

ಪ್ರಶಸ್ತಿ ಪ್ರದಾನ ಸಂಭ್ರಮಕ್ಕೆ ವರ್ಷಾಭಿಷೇಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಿನ ಮನೆ, ಮನದ ನಿಜರತ್ನ 'ಅಪ್ಪು'ವಿಗೆ ಅಭೂತಪೂರ್ವ ಅಭಿಮಾನದೊಂದಿಗೆ 'ಕರ್ನಾಟಕ ರತ್ನ' ಪ್ರಶಸ್ತಿಯ ಗೌರವ ನೀಡುವಾಗ ಮಳೆಯೂ ಜತೆಗೂಡಿ ಅಭಿಮಾನದ ಅಭಿಷೇಕ ಮಾಡಿತು. ಭಾವುಕ ಕ್ಷಣದಲ್ಲಿ ಹರಿದ ಕಂಬನಿಯನ್ನೂ ವರ್ಷಧಾರೆ ತೊಳೆದು ಹಾಕಿತು.

ವಿಧಾನಸೌಧದ ಮುಂಭಾಗ ನಡೆದ ಸಮಾರಂಭ ಮಳೆಯ ಕಾರಣದಿಂದ ಕೆಲವೇ ನಿಮಿಷಗಳಲ್ಲಿ ಮುಗಿದು ಹೋಯಿತಾದರೂ ಸಾವಿರಾರು ಅಭಿಮಾನಿಗಳ ಪಾಲಿಗೆ ಅದೊಂದು ಅವಿಸ್ಮರಣೀಯ ಘಳಿಗೆಯಾಗಿ ಉಳಿದುಕೊಂಡಿತು. ಮುಖ್ಯಮಂತ್ರಿ ಸಹಿತ ಹಲವು ಗಣ್ಯರು 30 ವರ್ಷಗಳ ಹಿಂದೆ ಡಾ.ರಾಜ್‌ಕುಮಾರ್ ಅವರಿಗೆ ಇದೇ ಸ್ಥಳದಲ್ಲಿ 'ಕರ್ನಾಟಕ ರತ್ನ' ನೀಡಿದ್ದು, ಅಂದೂ ಸಹ ಮಳೆ ಸುರಿದದ್ದನ್ನು ನೆನಪಿಸಿಕೊಂಡರು.

ಸಂಜೆ 4.45ರವೇಳೆಗೆ ಕಡುಗಪ್ಪು ಮೋಡಗಳು ಬಾನಿನಲ್ಲಿ ಆವರಿಸಿ ಭಾರೀ ಮಳೆಯ ಸೂಚನೆ ನೀಡಿದವು. ಕತ್ತಲಾವರಿಸಿದಂತೆ ಭಾಸವಾದಾಗ ವಿಧಾನಸೌಧದ ಹಾಲು ಬಿಳಿ ಕಟ್ಟಡದ ಕಾರಿಡಾರ್‌ಗಳಲ್ಲಿ ಹಳದಿ ಕೆಂಪು ದೀಪಗಳು ಹದವಾಗಿ ಬೆಳಗಿ ಸಮಾರಂಭಕ್ಕೆ ಕನ್ನಡಮಯ ಕಳೆ ನೀಡಿದವು. ಗಾಯಕರ ಹಾಡುಗಳಿಗೆ ತಕ್ಕಂತೆ ದೀಪಗಳು ಮಿನುಗಿದವು.

ಪ್ರಶಸ್ತಿ ಪ್ರದಾನದ ವೇಳೆ ಧೋ... ಎಂದು ಜೋರಾಗಿ ಸುರಿದ ಮಳೆಯನ್ನು ಅಭಿಮಾನಿಗಳು ಲೆಕ್ಕಿಸಲಿಲ್ಲ. ತಾವಿರುವಲ್ಲಿಯೇ ಕದಲದೆ ನಿಂತಿದ್ದರು. ಮಳೆಯೇ ತನ್ನ ಆರ್ಭಟ ಕಡಿಮೆ ಮಾಡಬೇಕಾಯಿತು.

ಕಾರ್ಯಕ್ರಮ ಮುಗಿದ ಬಳಿಕವೂ ಅಭಿಮಾನದ ಕೂಗು, ಕಲಾ ಮೇಳಗಳ ವಾದ್ಯಗಳ ಸದ್ದು, ಅಪ್ಪುವಿಗೆ ಜಯಘೋಷ ನಿಂತಿರಲಿಲ್ಲ. ದಾರಿಯುದ್ದಕ್ಕೂ ಘೋಷಣೆಗಳು ಮೊಳಗಿದವು. ಬಸ್, ಮೆಟ್ರೊಗಳ ಒಳಗೂ ಘೋಷಣೆಗಳು ಜೋರಾಗಿಯೇ ಕೇಳಿಬಂದವು.

ವಿಧಾನಸೌಧದ ಮುಖ್ಯ ರಸ್ತೆಯಲ್ಲಿ ನಾಡು, ನುಡಿ, ಕಲೆ, ಸಂಸ್ಕೃತಿ ಬಿಂಬಿಸುವ ಯಕ್ಷಗಾನ, ವೀರಗಾಸೆ, ಗೊಂಬೆಯಾಟದ ಪ್ರತಿಕೃತಿಗಳು ಗಮನ ಸೆಳೆದವು. ತಮ್ಮ ನೆಚ್ಚಿನ ತಾರೆಯರನ್ನು ನೇರವಾಗಿ ನೋಡಿದ ಅಭಿಮಾನಿಗಳು ದೂರದಲ್ಲೇ ನಿಂತು ಸೆಲ್ಫಿ ತೆಗೆದುಕೊಂಡರು. ವಿಡಿಯೊಗಳನ್ನು ಚಿತ್ರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಟ್ಟರು.

ರಜನಿಕಾಂತ್, ಜೂನಿಯರ್ ಎನ್‌ಟಿಆರ್ ಅತಿಥಿಗಳಾಗಿ ಬಂದ ಕಾರಣ ಅವರ ಅಭಿಮಾನಿಗಳೂ ಭಾರೀ ಸಂಖ್ಯೆಯಲ್ಲಿ ಸೇರಿ ಅವರ ಹೆಸರನ್ನು ಕೂಗುತ್ತಿದ್ದರು. ರಜನಿಕಾಂತ್ ವೇದಿಕೆಯೇರಿದಾಗಲಂತೂ 'ತಲೈವಾ....' ಕೂಗು ಜೋರಾಗಿಯೇ ಇತ್ತು. ಉಭಯ ನಟರು ಕನ್ನಡದಲ್ಲಿ ಮಾತನಾಡಿದ ಕಾರಣ ಕನ್ನಡ ಪ್ರೇಕ್ಷಕರು ಜೈಕಾರ ಕೂಗಿದರೆ, ನಮ್ಮ ಭಾಷೆಯ ನಟರು ಎಂದು ತಮಿಳು, ತೆಲುಗು ಜನರು ಅಭಿಮಾನ ಮೆರೆದರು. ಹೀಗೆ ಭಾಷಾ ಭಾವೈಕ್ಯಕ್ಕೂ ಸಮಾರಂಭ ವೇದಿಕೆಯಾಯಿತು.

ಅವ್ಯವಸ್ಥೆ, ಗೊಂದಲ: ನಿಗದಿಗಿಂತಲೂ ಹೆಚ್ಚು ಸಂಖ್ಯೆಯ ಪಾಸ್‌ಗಳನ್ನು ನೀಡಲಾಗಿತ್ತು. ಗಣ್ಯರು, ಮಾಧ್ಯಮದವರಿಗೆ ಮೀಸಲಿಟ್ಟಿದ್ದ ಜಾಗದಲ್ಲಿ ಜನ ಗುಂಪು ಸೇರುತ್ತಿದ್ದದ್ದು ನಡೆಯಿತು. ಇವರನ್ನು ನಿಯಂತ್ರಿಸಲು ಪೊಲೀಸರು ಹೆಣಗಾಡಬೇಕಾಯಿತು. ಸಚಿವ ಎಸ್.ಟಿ. ಸೋಮಶೇಖರ್ ಮತ್ತು ಆರ್. ಅಶೋಕ ಅವರು ಪೊಲೀಸರನ್ನು ಧ್ವನಿವರ್ಧಕದಲ್ಲಿಯೇ ತೀವ್ರ ತರಾಟೆಗೆ ತೆಗೆದುಕೊಂಡರು. ಈ ವೇಳೆ ಪೊಲೀಸರು ತಾಳ್ಮೆ ಕಳೆದುಕೊಂಡು ಹಲವರನ್ನು ತಳ್ಳಿ ಆಕ್ರೋಶ ಹೊರಹಾಕಿದ್ದೂ ನಡೆಯಿತು. ಆದರೂ ಸಾಗಿ ಬರುತ್ತಿದ್ದ ಜನರನ್ನು ನಿಯಂತ್ರಿಸಲಾಗಲಿಲ್ಲ.



ಪುನೀತ್ ಪುತ್ರಿ ವಂದಿತಾ ಹಾಗೂ ಪತ್ನಿ ಅಶ್ವಿನಿ ಅವರು 'ಕರ್ನಾಟಕ ರತ್ನ' ಚಿನ್ನದ ಪದಕವನ್ನು ಪುನೀತ್ ಅವರ ಭಾವಚಿತ್ರಕ್ಕೆ ಅರ್ಪಿಸಿದರು

ನೀನೇ ರಾಜಕುಮಾರ... ಹಾಡಿನ ಗುಣಗಾನ

ವಿಜಯ ಪ್ರಕಾಶ್ ಮತ್ತು ತಂಡದವರು ಕನ್ನಡ ನಾಡು, ನುಡಿ ಅಭಿಮಾನ ಸಾರುವ ಚಿತ್ರಗೀತೆಗಳನ್ನು ಹಾಡಿದರು. 'ನೀನೇ ರಾಜಕುಮಾರ'... 'ಕಾಣದಂತೆ ಮಾಯವಾದನು', 'ಬೊಂಬೆ ಹೇಳುತೈತೆ'... ಹಾಡಿಗೆ ಸೇರಿದ್ದ ಅಭಿಮಾನಿಗಳೂ ಮುಂದಿನ ಸಾಲನ್ನು ಹಾಡುವ ಮೂಲಕ ಗೀತ ಗೌರವ ಸಲ್ಲಿಸಿದರು. 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಎಂಬ ಹಾಡಿಗೆ ಪ್ರೇಕ್ಷಕರು ಅರಶಿನ ಕುಂಕುಮ ಬಣ್ಣದ ಶಾಲುಗಳನ್ನು ಬೀಸಿ, ಹೆಜ್ಜೆ ಹಾಕಿದರು.

ಪುನೀತ್ ಭಾವಚಿತ್ರಕ್ಕೆ ಪದಕ ಅರ್ಪಣೆ

ಡಾ. ರಾಜ್ ಕುಟುಂಬದ ಎಲ್ಲ ಸದಸ್ಯರು ವಿಶೇಷ ಬಸ್‌ನಲ್ಲಿ ಸಮಾರಂಭದ ಸ್ಥಳಕ್ಕೆ ಆಗಮಿಸಿದರು. ಕಾರ್ಯಕ್ರಮ ಮುಗಿದ ಬಳಿಕ ಕುಟುಂಬದ ಸದಸ್ಯರು ಮನೆಗೆ ಮರಳುತ್ತಿದ್ದಂತೆಯೇ ಪುನೀತ್ ಮನೆಯ ಮುಂದೆ ಜಮಾಯಿಸಿದ ನೂರಾರು ಅಭಿಮಾನಿಗಳು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಮನೆಯಲ್ಲಿ ತೂಗು ಹಾಕಲಾಗಿದ್ದ ಪುನೀತ್ ಭಾವಚಿತ್ರಕ್ಕೆ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು 'ಕರ್ನಾಟಕ ರತ್ನ' ಪದಕವನ್ನು ಅರ್ಪಿಸಿದರು. ಪುತ್ರಿ ವಂದಿತಾ ಕೂಡ ಇದ್ದರು.


ಸಮಾರಂಭದ ಬಳಿಕ ರಜನಿಕಾಂತ್ ಮತ್ತು ಜೂನಿಯರ್ ಎನ್‌ಟಿಆರ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಿವಾಸಕ್ಕೆ ತೆರಳಿ ಚಹಾ ಸೇವಿಸಿ ವಾಪಸಾದರು.

ಹರಿದ ಜನಸಾಗರ. . .

ವಿಧಾನಸೌಧ ಸಂಪರ್ಕಿಸುವ ಎಲ್ಲ ರಸ್ತೆಗಳೂ ಜನ ದಟ್ಟಣೆಯಿಂದ ಕೂಡಿದ್ದವು. ಕೆ.ಆರ್. ರಸ್ತೆ, ಬಸವೇಶ್ವರ ವೃತ್ತದಿಂದ ವಿಧಾನಸೌಧ ಸಂಪರ್ಕಿಸುವ ರಸ್ತೆ, ಕಸ್ತೂರಬಾ ರಸ್ತೆಗೆ ಸಂಪರ್ಕಿಸುವ ವಿಧಾನಸೌಧದ ಮುಖ್ಯರಸ್ತೆ... ಹೀಗೆ ಎಲ್ಲಿ ನೋಡಿದರೂ ಜನವೋ ಜನ. ಎಲ್ಲರ ಕೈಯಲ್ಲಿ ಅರಸಿನ ಕುಂಕುಮ ಬಣ್ಣದ ಧ್ವಜ, ಅದರಲ್ಲಿ ನಗುಮೊಗದ ಪುನೀತ್ ಭಾವಚಿತ್ರ. ಪುಟ್ಟ ಗಾತ್ರದಿಂದ ಹಿಡಿದು ನಾಲ್ಕಾರು ಅಡಿಗಳವರೆಗಿನ ಧ್ವಜಗಳೂ ರಾರಾಜಿಸಿದವು. ಕೆಲವರು ಪುನೀತ್ ಅವರ ಕಟೌಟ್ ಹಿಡಿದು ಸಂಭ್ರಮಿಸಿದರು.



ಕಾರ್ಯಕ್ರಮದಲ್ಲಿ ನಟ ಶಿವರಾಜಕುಮಾರ್, ನಟ ರಜನಿಕಾಂತ್ ಇದ್ದಾರೆ —ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್





ಆ್ಯಪಲ್ ವಾಚ್ ಸೀರೀಸ್ 8 ಸ್ಕ್ರೀನ್ ಹಾಗೂ ಹಿಂಭಾಗದಲ್ಲಿರುವ ಸೆನ್ಸರ್‌ಗಳು

ಆ್ಯಪಲ್ ವಾಚ್ 8

ಆ್ಯಪಲ್ ವಾಚ್ 8, ಫಿಟ್ನೆಸ್ ಮತ್ತು ಆರೋಗ್ಯದ ಮಾಹಿತಿಗಳನ್ನು ನೀಡಬಲ್ಲ ಅತ್ಯಾಧುನಿಕ ತಾಂತ್ರಿಕತೆಗಳಿರುವ ಸಮಗ್ರ ವಾಚ್. ಋತುಚಕ್ರದ ಮೇಲೆ ಗಮನ ಇರಿಸಲು ಮಹಿಳೆಯರಿಗೆ ಇದು ಅನುಕೂಲಕರವಾಗಿದೆ.

ಅವಿನಾಶ್ ಬಿ.

ಆ್ಯಪಲ್ ಪ್ರತಿ ವರ್ಷದಂತೆ ಹೊಸ ಸುಧಾರಿತ ಆ್ಯಪಲ್ ವಾಚ್ ಅನ್ನು ಮಾರುಕಟ್ಟೆಗೆ ಬಿಟ್ಟಿದೆ. ಈ ಬಾರಿ ಆ್ಯಪಲ್ ವಾಚ್ ಸೀರೀಸ್ 8 ಬಿಡುಗಡೆಯಾಗಿದ್ದು, ಇದರಲ್ಲಿ 41 ಮಿಮೀ ಹಾಗೂ 45 ಮಿಮೀ - ಹೀಗೆ ಎರಡು ಮಾದರಿಗಳಿವೆ. ರಿವ್ಯೂಗೆ ದೊರೆತಿರುವುದು 45ಮಿಮೀ ವಾಚ್ ಕೇಸ್ ಇರುವ ಆ್ಯಪಲ್ ವಾಚ್ 8 ಆವೃತ್ತಿ. ಇದನ್ನು ಮೂರು ವಾರ ಬಳಸಿದಾಗ ಕಂಡ ಅನುಭವದ ಮಾಹಿತಿ ಇಲ್ಲಿದೆ.

ಆರೋಗ್ಯ ಸಂಬಂಧಿತವಾಗಿ ನಡಿಗೆಯ ಹೆಜ್ಜೆಗಳ ಸಂಖ್ಯೆ, ವೇಗ, ಹೃದಯದ ಬಡಿತ, ನಿದ್ರೆಯ ಸ್ಥಿತಿ-ಗತಿ, ವ್ಯಾಯಾಮದ ಅವಧಿ, ಉಸಿರಾಟದ ನಿಯಂತ್ರಣ, ಧ್ಯಾನ - ಏಕಾಗ್ರತೆಗೆ ನೆರವು ನೀಡುವ ವೈಶಿಷ್ಟ್ಯ, ನೀರು ಕುಡಿಯಲು ನೆನಪಿಸುವುದು, ಗಂಟೆಗೊಮ್ಮೆ ಕುಳಿತಲ್ಲಿಂದ ಎದ್ದು ದೈಹಿಕ ಚಟುವಟಿಕೆ ನೆನಪಿಡುವುದು, ರಕ್ತದಲ್ಲಿನ ಆಮ್ಲಜನಕದ ಪ್ರಮಾಣ, ಎಲೆಕ್ಟ್ರೋಕಾರ್ಡಿಯೋಗ್ರಾಂ (ಇಸಿಜಿ) - ಮುಂತಾದ ವೈಶಿಷ್ಟ್ಯಗಳೆಲ್ಲವೂ ಆ್ಯಪಲ್ ವಾಚ್ 8ರಲ್ಲಿವೆ. ಇದರ ಜೊತೆಗೆ, ಕಳೆದ ಬಾರಿಯ ಆ್ಯಪಲ್ ವಾಚ್ 7ನೇ ಸರಣಿಗೆ ಹೊಸ ಸೇರ್ಪಡೆಯೆಂದರೆ ಉಷ್ಣತೆ ಅಳೆಯುವ ಸೆನ್ಸರ್. ಅಂದರೆ ದೇಹದ ತಾಪಮಾನವನ್ನು ಕೂಡ ಅದು ಅಳೆದು ತೋರಿಸುತ್ತದೆ.

ಮುಖ್ಯವಾಗಿ ಸ್ತ್ರೀಯರಲ್ಲಿ ಅಂಡಾಣು ಬಿಡುಗಡೆಯಾಗುವಾಗ ಕೊಂಚ ದೈಹಿಕ ತಾಪಮಾನ ಹೆಚ್ಚಿರುತ್ತದೆ. ಹೀಗಾಗಿ, ಋತುಚಕ್ರದ ಬಗ್ಗೆ ಟ್ರ್ಯಾಕ್ ಇರಿಸಿಕೊಳ್ಳುವುದಕ್ಕೆ ಸಂಬಂಧಿಸಿದ ಆ್ಯಪ್‌ಗೆ ಈ ತಾಪಮಾನದ ಮಾಹಿತಿಯು ಪೂರಕವಾಗುತ್ತದೆ. ಇದಲ್ಲದೆ, ಸರಾಸರಿ ದೇಹದ ತಾಪಮಾನ ಅರಿಯುವುದಕ್ಕೆ ಮತ್ತು ಆರೋಗ್ಯ ಸಂಬಂಧಿತ ಮಾಹಿತಿಯ ವಿಶ್ಲೇಷಣೆಗೆ ಈ ಉಷ್ಣತಾ ಮಾಪನವು ನೆರವಾಗುತ್ತದೆ. ಆದರೆ, ಇದನ್ನು ಸಂತಾನ ನಿಯಂತ್ರಣದ ಲೆಕ್ಕಾಚಾರಕ್ಕೆ ಬಳಸಬಾರದು ಎಂದು ಆ್ಯಪಲ್ ಎಚ್ಚರಿಕೆ ನೀಡಿದೆ. ಒಂದು ಅಂದಾಜು ಮಾಹಿತಿಗಾಗಿ ಮಾತ್ರ. ದೇಹದ ತಾಪಮಾನ ಅಳೆಯಲು ನಿದ್ರೆಯ ಟ್ರ್ಯಾಕಿಂಗ್ (ಸ್ಲೀಪ್ ಟ್ರ್ಯಾಕಿಂಗ್) ಆನ್ ಮಾಡಿಟ್ಟುಕೊಳ್ಳಬೇಕಾಗುತ್ತದೆ.

ಗಾತ್ರ-ವಿನ್ಯಾಸ

45ಮಿಮೀ ಸ್ಕ್ರೀನ್ ಗಾತ್ರದ ಆ್ಯಪಲ್ ವಾಚ್ 8, ಹಗುರವಾಗಿದ್ದು ಉತ್ತಮ ಗುಣಮಟ್ಟದ ವಾಚ್ ಬ್ಯಾಂಡ್ ಇರುವುದರಿಂದ ಕೈಗಳಲ್ಲಿ ಚೆನ್ನಾಗಿ ಕೂರುತ್ತದೆ ಮತ್ತು ಆಕರ್ಷಕವಾಗಿಯೂ ಇದೆ. ಸ್ಕ್ರೀನ್ ಸುತ್ತಲಿನ ಬೆಝೆಲ್ (ಖಾಲಿ ಜಾಗ) ತೀರಾ ಕಡಿಮೆ ಇರುವುದರಿಂದಾಗಿ ಡಿಸ್‌ಪ್ಲೇಯು ಇಡೀ ಸ್ಕ್ರೀನನ್ನು ಬಹುತೇಕ ಆವರಿಸುತ್ತದೆ. ಇದು ಮ್ಯಾಪ್, ಫೋಟೊ ನೋಡಲು, ಸಂದೇಶ ವೀಕ್ಷಿಸಲು ಹೆಚ್ಚಿನ ಸ್ಥಳಾವಕಾಶವನ್ನು ಕೊಡುತ್ತದೆ. ಅದೇ ರೀತಿ, ಕ್ವೆರ್ಟಿ ಕೀಬೋರ್ಡ್ ಕೂಡ ಅನುಕೂಲ ಇರುವುದರಿಂದಾಗಿ, ಅಗತ್ಯಬಿದ್ದಾಗ ಸಂದೇಶಗಳಿಗೆ ಉತ್ತರಿಸಲು ಟೈಪ್ ಮಾಡುವುದು ಸುಲಲಿತ.

ಪ್ರಮುಖ ವೈಶಿಷ್ಟ್ಯಗಳು

- ಸದಾ ಆನ್ ಇರುವ ರೆಟಿನಾ LTPO OLED ಡಿಸ್‌ಪ್ಲೇ
- 41ಮಿಮೀ: 352x430 ಪಿಕ್ಸೆಲ್ಸ್, 45ಮಿಮೀ: 396x484 ಪಿಕ್ಸೆಲ್ಸ್
- ಡ್ಯುಯಲ್ ಕೋರ್ ಪ್ರೊಸೆಸರ್,
- 32GB ಸ್ಟೋರೇಜ್
- 18 ಗಂಟೆಗಳವರೆಗೆ ಬ್ಯಾಟರಿ ಚಾರ್ಜ್
- USB-C ಮ್ಯಾಗ್ನೆಟಿಕ್ ವೇಗದ ಚಾರ್ಜಿಂಗ್ ಕೇಬಲ್
- ಬಿದ್ದರೆ ಪತ್ತೆ ಹಚ್ಚುವ ತಂತ್ರಜ್ಞಾನ
- **ಬೆಲೆ:** ಆ್ಯಪಲ್ ವಾಚ್ ಸೀರೀಸ್ 8 ಬೆಲೆ ₹45,900 (ಜಿಪಿಎಸ್ ಮಾದರಿ) ಹಾಗೂ ₹55,900 (ಸೆಲ್ಯುಲಾರ್) ಇದ್ದು, ಕಡಿಮೆ ಬೆಲೆಯ ಎಸ್‌ಇ ಹಾಗೂ ಹೆಚ್ಚು ಬೆಲೆಯ ಅಲ್ಟ್ರಾ ಮಾದರಿಗಳೂ ಇವೆ.

ಕಾರ್ಯಾಚರಣೆ-ಬ್ಯಾಟರಿ

ಆ್ಯಪಲ್ ವಾಚ್ 8ರಲ್ಲಿ ನ್ಯಾವಿಗೇಶನ್ ವೇಗವೂ ಸುಲಲಿತವಾಗಿಯೂ ಆಗುತ್ತದೆ. ಜೊತೆಗೆ, ವಾಚ್‌ನಿಂದಲೇ ವಾಟ್ಸ್ಆ್ಯಪ್, ಎಸ್‌ಎಂಎಸ್‌ಗೆ ಉತ್ತರಿಸಬಹುದು, ಕರೆಗಳಿಗೆ ಉತ್ತರಿಸಬಹುದಾಗಿದೆ. ಈ ವರ್ಷ ಬಿಡುಗಡೆಯಾದ ಅತ್ಯಾಧುನಿಕ ವಾಚ್ ಒಎಸ್ 9 ಮೂಲಕ ಆ್ಯಪಲ್ ವಾಚ್ 8 ಕಾರ್ಯಾಚರಿಸುತ್ತಿದೆ. ಜೊತೆಗೆ, ಇತ್ತೀಚೆಗಷ್ಟೇ ತಂತ್ರಾಂಶ ಅಪ್‌ಡೇಟ್ ಆಗಿದ್ದು (ವಾಚ್ ಒಎಸ್ 9.1), ಕನಿಷ್ಠ ಎರಡು ದಿನಗಳ ಬ್ಯಾಟರಿ ಚಾರ್ಜ್‌ಗೆ ಯಾವುದೇ ಸಮಸ್ಯೆಯಿಲ್ಲ. ಅನಿವಾರ್ಯ ಸಂದರ್ಭಗಳಲ್ಲಿ ಕನಿಷ್ಠ ವಿದ್ಯುತ್ ಬಳಸುವ 'ಲೋ ಪವರ್ ಮೋಡ್' ಇರುವುದರಿಂದ ಬ್ಯಾಟರಿ ಚಾರ್ಜ್ ಅನ್ನು ಹೆಚ್ಚು ಕಾಲ ಇರುವಂತೆ ನೋಡಿಕೊಳ್ಳಬಹುದು. ಜಲನಿರೋಧಕತೆ ಮತ್ತು ಧೂಳುನಿರೋಧಕತೆಯ ವೈಶಿಷ್ಟ್ಯಗಳೂ ಇವೆ. ಮಲಗಿರುವಾಗ ಕೈಗೆ ಕಟ್ಟಿಕೊಂಡರೆ ಸ್ಲೀಪ್ ಟ್ರ್ಯಾಕಿಂಗ್, ಉಷ್ಣತೆಯ ಮಾಪನ ಸಾಧ್ಯ.

ಆಯತಪ್ಪಿ ಬಿದ್ದರೆ ಅಪಾಯದ ಸಂದೇಶವನ್ನು ಮೊದಲೇ ನಿಗದಿಪಡಿಸಿದ ತುರ್ತು ಕರೆಯ ಸಂಖ್ಯೆಗಳಿಗೆ ಕಳುಹಿಸುವ ವ್ಯವಸ್ಥೆಯಿದೆ. ಅಂದರೆ, ದಿಢೀರ್ ಆಗಿ ಕುಸಿದು ಬಿದ್ದರೆ ಅಥವಾ ಆಯತಪ್ಪಿ ಬಿದ್ದರೆ (ಎತ್ತರದ ಸೆನ್ಸರ್ ಮೂಲಕ) ಬೀಳುವಿಕೆಯನ್ನು ಪತ್ತೆ ಮಾಡಿ ಎಚ್ಚರಿಕೆ ಸಂದೇಶ ಕಳುಹಿಸುತ್ತದೆ. ಇದನ್ನು ಸದಾಕಾಲ ಅಥವಾ ವ್ಯಾಯಾಮ ಮಾಡುವಾಗ ಮಾತ್ರವೇ ಆನ್ ಮಾಡಿಟ್ಟುಕೊಳ್ಳುವ ವ್ಯವಸ್ಥೆಯಿದೆ. ಅದೇ ರೀತಿ, ದೊಡ್ಡದಾದ ಸದ್ದು ಕೇಳಿಬಂದರೆ ಕಿವಿಗಳಿಗೆ ಅಪಾಯವಿದೆ ಎಂಬುದನ್ನೂ ಪತ್ತೆ ಹಚ್ಚಿ ಎಚ್ಚರಿಸುವ ವ್ಯವಸ್ಥೆಯು ಆ್ಯಪಲ್‌ನ ಹೆಲ್ತ್ ಆ್ಯಪ್‌ನಲ್ಲಿದೆ. ಕೋವಿಡ್ ಕಾಲದಲ್ಲಿ ನೆರವಿಗೆ ಬಂದಿರುವ, ಕೈಗಳನ್ನು 20 ಸೆಕೆಂಡ್ ತೊಳೆಯಲು ಪ್ರಚೋದಿಸುವ ವ್ಯವಸ್ಥೆ ಈ ವಾಚ್‌ನಲ್ಲೂ ಮುಂದುವರಿದಿದೆ.



ಬರಲಿದೆ ಗೋಡಂಬಿ ಪಟಾಕಿ!

ಗಾಳಿಯನ್ನು ಅತಿ ಹೆಚ್ಚು ಮಲಿನಗೊಳಿಸುವ, ಪಟಾಕಿಯಲ್ಲಿರುವ ಗಂಧಕದ ಪ್ರಮಾಣವನ್ನು ಕಡಿಮೆ ಮಾಡಲು ಗೋಡಂಬಿಸಿಪ್ಪೆಯನ್ನು ಬಳಸುವುದರ ಬಗ್ಗೆ ಸಂಶೋಧನೆ ನಡೆದಿದೆ...



ಕೊಳ್ಳೇಗಾಲ ಶರ್ಮ

ಗೋಡಂಬಿ ಪಟಾಕಿಯೇ?

ಢಂ ಪಟಾಕಿ! ಲಕ್ಷ್ಮಿ ಪಟಾಕಿ!! ಬೆಳ್ಳುಳ್ಳಿ ಪಟಾಕಿ!! ಚಿನಕುರುಳಿ, ರಾಕೆಟ್ಟು - ಅಂತೆಲ್ಲ ಕೇಳಿದ್ದೀವಿ. ಇದು ಯಾವ ತೆರನ ಪಟಾಕಿ ಎಂಬ ಅನುಮಾನ ಕಾಡಿತೇ? ತಮಿಳುನಾಡಿನ ಶ್ರೀವಿಲ್ಲಿಪುತ್ತೂರಿನಲ್ಲಿರುವ ಕಲಶಲಿಂಗಂ ಶೈಕ್ಷಣಿಕ ಹಾಗೂ ಸಂಶೋಧನಾ ಅಕಾಡೆಮಿಯ ರಸಾಯನ ವಿಜ್ಞಾನಿ ಮಣಿಕಂಠನ್ ರಾಜೇಂದ್ರನ್ ಅವರ ಆಲೋಚನೆ ಫಲ ಕೊಟ್ಟಲ್ಲಿ ಮುಂದೆ ಗೋಡಂಬಿಯ ಸಿಪ್ಪೆಯಿಂದ ಮಾಡಿದ ಪಟಾಕಿಗಳೂ ಸಿಡಿಯಬಹುದು. ಇದು ಅಪ್ಪಟ ಹಸಿರು ಪಟಾಕಿ. ಹಸಿರು ಎನ್ನುವ ಹೆಸರಿಗೆ ಅನ್ವರ್ಥವಾದಂತಹ ಪಟಾಕಿ.

ಹಾಗಿದ್ದರೆ ಈಗಿರುವ ಹಸಿರು ಪಟಾಕಿಗಳು? - ಎಂದಿರಾ. ಅವು ಹೆಸರಿಗೆ ಹಸಿರು. ಆದರೆ ನಾವು ಸಾಮಾನ್ಯವಾಗಿ ಹಸಿರು ಎನ್ನುವ ಪದವನ್ನು ಬಳಸಿ ಸೂಚಿಸುವ ಪರಿಸರವನ್ನಾಗಲಿ, ಸಸ್ಯರಾಶಿಯನ್ನಾಗಲಿ ಸೂಚಿಸುವುದಿಲ್ಲ. ಬದಲಿಗೆ ಅದರಿಂದುಂಟಾಗುವ ಅಪಾಯ ಕಡಿಮೆ ಎನ್ನುವ ಕಾರಣಕ್ಕೆ ಹಸಿರು ಎನ್ನುವ ಹೆಸರು ಪಡೆದುಕೊಂಡಿವೆ ಅಷ್ಟೆ. ಮಣಿಕಂಠನ್ ರಾಜೇಂದ್ರನ್ ತಂಡದ ಕನಸು ನನಸಾದರೆ ಆಗ ಪಟಾಕಿಗಳು ಸಸ್ಯಗಳ ಭಾಗದಿಂದಲೇ ತಯಾರಾದಂತೆ. ಏಕೆಂದರೆ, ರಾಜೇಂದ್ರನ್ ತಂಡ ಗೋಡಂಬಿಯ ಹೊರಗಿರುವ ಮರದಂತಹ ಕಠಿಣವಾದ ಹೊಟ್ಟನ್ನೇ ಪಟಾಕಿಯಲ್ಲಿ ಸುಡುವ ಮದ್ದನ್ನಾಗಿ ಉಪಯೋಗಿಸಬೇಕೆಂದು ಯೋಜಿಸಿದ್ದಾರೆ. ಇದರ ಫಲವಾಗಿ ಅತ್ಯಮೂಲ್ಯವಾದ ರಾಸಾಯನಿಕ ಗಂಧಕದ ಬಳಕೆ ಕಡಿಮೆಯಾಗುವುದಷ್ಟೆ ಅಲ್ಲ, ಗಂಧಕ ಉರಿದ ಫಲವಾಗಿ ಗಾಳಿಗೆ ಸೇರುವ ಗಂಧಕದ ಡಯಾಕ್ಸೈಡ್ ಎನ್ನುವ ಮಲಿನ ಅನಿಲದ ಪ್ರಮಾಣವೂ ಕಡಿಮೆಯಾಗುತ್ತದೆಯಂತೆ.




ಹಸಿರು ಪಟಾಕಿಗಳೆಂದರೆ ಇನ್ನೇನಲ್ಲ. ಪಟಾಕಿಗಳು ಸಿಡಿಯುವಂತೆ ಮಾಡಿ, ಬೆಳಕಿನ ಕಿಡಿಗಳನ್ನು ಚೆಲ್ಲುವ, ಶಬ್ದ ಮಾಡುವ ರಾಸಾಯನಿಕಗಳ ಪೊಟ್ಟಣಗಳು. ಸುಲಭವಾಗಿ ಉರಿಯುವ ವಸ್ತುಗಳು, ಅವು ಉರಿಯಲು ಬೇಕಾದ ಆಕ್ಸಿಜನನ್ನು ಒದಗಿಸುವ ಪೊಟ್ಯಾಸಿಯಂ ನೈಟ್ರೇಟಿನಂತಹ ಆಕ್ಸಿಡೈಸರ್‌ಗಳು ಶೇ 60, ಪ್ರಖರವಾಗಿ ಉರಿದು ವಿವಿಧ ಬಣ್ಣದ ಬೆಳಕು ಚೆಲ್ಲುವ ಕ್ರೋಮಿಯಂ, ಅಲ್ಯುಮಿನಿಯಂನಂತಹ ಲೋಹಗಳು ಶೇಕಡ 20ರಷ್ಟು ಹಾಗೂ ತಟಕ್ಕನೆ ಉರಿದು ಅಪಾರ ಪ್ರಮಾಣದಲ್ಲಿ ಅನಿಲವಾಗುವ ಗಂಧಕದಂತಹ ಇಂಧನಗಳು ಶೇ 20ರಷ್ಟು ಸಿಡಿಯುವ ಪಟಾಕಿಗಳಲ್ಲಿ ಇರುತ್ತದೆ. ಇಂಧನ ತಟಕ್ಕನೆ ಉರಿದು ಅಪಾರ ಅನಿಲ ಸೃಷ್ಟಿಯಾದರಷ್ಟೆ ಪಟಾಕಿ 'ಢಂ' ಎನ್ನುತ್ತದೆ. ಇಲ್ಲದಿದ್ದರೆ ಅದು ಟುಸ್ ಪಟಾಕಿ. ಇಂತಹ ವಸ್ತುಗಳೆಲ್ಲವೂ ಉರಿದಾಗ ಗಾಳಿಯನ್ನು ಮಲಿನಗೊಳಿಸುವ ನೈಟ್ರೊಜನ್ ಡಯಾಕ್ಸೈಡ್, ಕಾರ್ಬನ್ ಮಾನಾಕ್ಸೈಡ್ ಹಾಗೂ ಗಂಧಕದ ಆಕ್ಸೈಡ್‌ಗಳಿರುವ, ಅತಿ ಸೂಕ್ಷ್ಮವಾದ ಇದ್ದಿಲಿನ ಕಣಗಳು ಮತ್ತು ಲೋಹದ ಕಣಗಳಿರುವ ಹೊಗೆಯನ್ನು ಹೊಮ್ಮಿಸುತ್ತವೆ. ಇವೆಲ್ಲವೂ ನಮ್ಮ ಆರೋಗ್ಯಕ್ಕೂ ಪರಿಸರಕ್ಕೂ ಹಾನಿ ತರುವ ವಸ್ತುಗಳು ಹಸಿರು ಪಟಾಕಿಗಳ ಹೊಗೆಯಲ್ಲಿ ಇವುಗಳ ಪ್ರಮಾಣ ಕಡಿಮೆ ಇದೆ ಎನ್ನುವುದಕ್ಕಾಗಿಯೇ ಅದಕ್ಕೆ 'ಹಸಿರು' ಎನ್ನುವ ಬಿರುದು.


ಗಾಳಿಯನ್ನು ಅತಿ ಹೆಚ್ಚು ಮಲಿನಗೊಳಿಸುವ, ಪಟಾಕಿಯಲ್ಲಿರುವ ಗಂಧಕದ ಪ್ರಮಾಣವನ್ನು ಕಡಿಮೆ ಮಾಡಲು ಗೋಡಂಬಿಸಿಪ್ಪೆಯನ್ನು ಬಳಸಬಾರದೇಕೆ ಎನ್ನುವುದೇ ಮಣಿಕಂಠನ್ ರಾಜೇಂದ್ರನ್ ಅವರ ಯೋಚನೆ. ಕಾರಣವಿಷ್ಟೆ. ಗೋಡಂಬಿಯ ಗಟ್ಟಿಯಾದ ಚಿಪ್ಪಿನಲ್ಲಿ ಸಾಕಷ್ಟು ಎಣ್ಣೆ ಇರುತ್ತದೆ. ಈ ಎಣ್ಣೆ ಚರ್ಮವನ್ನೂ ಸುಡಬಲ್ಲುದು. ಎಣ್ಣೆಯನ್ನು ತೆಗೆದ ನಂತರ ಉಳಿಯುವ ಪುಡಿ ಅಪ್ಪಟ ಸೆಲ್ಯುಲೋಸ್ ಪುಡಿ. ಸೆಲ್ಯುಲೋಸ್ ಎನ್ನುವುದು ಹತ್ತಿ ಹಾಗೂ ಹುಲ್ಲಿನಲ್ಲಿರುವ ವಸ್ತು. ಪಟಾಕಿಯಲ್ಲಿರುವ ಕಾಗದವನ್ನೂ ಅದರಿಂದಲೇ ಮಾಡಿರುತ್ತಾರೆ. ಆದರೆ ಗೋಡಂಬಿಚಿಪ್ಪಿನ ಪುಡಿ ಥೇಟ್ ಗಂಧಕದಂತೆಯೇ ಉರಿದು ಹೊಗೆಯನ್ನು ಉಗುಳಬಲ್ಲುದು. ಇಂತಹ ಪುಡಿಯನ್ನು ಪಟಾಕಿಯಲ್ಲಿ ಬೆರೆಸಿದರೆ ಗಂಧಕದ ಬಳಕೆಯನ್ನು ಕಡಿಮೆ ಮಾಡಬಹುದು ಎನ್ನುವ ಉದ್ದೇಶದಿಂದ ರಾಜೇಂದ್ರನ್ ತಂಡ ಪ್ರಯೋಗಗಳನ್ನು ಕೈಗೊಂಡಿತು. ಶೇ 20ರಷ್ಟು ಗಂಧಕದ ಬದಲಿಗೆ ಹದಿನೈದು ಹಾಗೂ ಹತ್ತು ಪಾಲು ಗಂಧಕವನ್ನು, ಐದು ಅಥವಾ ಹತ್ತು ಪಾಲು ಗೋಡಂಬಿ ಚಿಪ್ಪಿನ ಪುಡಿಯೊಟ್ಟಿಗೆ ಬೆರೆಸಿ ಪಟಾಕಿಗಳನ್ನು ತಯಾರಿಸಿದೆ. ಈ ಪಟಾಕಿಗಳನ್ನು ಸುಟ್ಟರೆ ಅಪಾಯವಿಲ್ಲವೇ ಎಂದು ಪರೀಕ್ಷಿಸಿದೆ.

ಜೊತೆಗೇ ಅವು ನಾವು ಪಟಾಕಿಗಳಲ್ಲಿ ನಿರೀಕ್ಷಿಸಿದಂತಹ ಸದ್ದು ಹಾಗೂ ಬೆಳಕನ್ನು ನೀಡಬಲ್ಲುದೇ ಎಂದೂ ಗಮನಿಸಿದೆ. ಪಟಾಕಿಗಳ ಸದ್ದು ಹಾಗೂ ಬೆಳಕು ಕಡಿಮೆಯಾದಲ್ಲಿ ಬಳಕೆದಾರರಿಗೆ ಇಷ್ಟವಾಗಲಿಕ್ಕಿಲ್ಲ. ಅದು ಪಟಾಕಿ ಎನ್ನಿಸಿಕೊಳ್ಳುವುದೂ ಇಲ್ಲ. ಹೀಗಾಗಿ ಪರ್ಯಾಯವಾಗಿ ಕೂಡಿಸಿ ವಸ್ತುಗಳ ಪ್ರಮಾಣವನ್ನು ಎಚ್ಚರಿಕೆಯಿಂದ ತೂಗಬೇಕು. ರಾಜೇಂದ್ರನ್ ತಂಡದ ಪರೀಕ್ಷೆಗಳ ಪ್ರಕಾರ ಶೇ 5ರಷ್ಟು ಗೋಡಂಬಿಚಿಪ್ಪಿನ ಪುಡಿಯನ್ನು ಬೆರೆಸಿ ತಯಾರಿಸಿದ ಪಟಾಕಿ ಸಾಮಾನ್ಯ ಪಟಾಕಿಯಷ್ಟೆ ಬೇಗನೆ ಹೊತ್ತಿಕೊಂಡಿತಲ್ಲದೆ, ಸರಿಸುಮಾರು ಅಷ್ಟೇ ಸದ್ದನ್ನು ಹೊಮ್ಮಿಸಿತಂತೆ. ಹೀಗಾಗಿ ಐದು ಶತಾಂಶ ಕಡಿಮೆ ಗಂಧಕವನ್ನು ಉಪಯೋಗಿಸುವ ಪಟಾಕಿಗಳ ತಯಾರಿಕೆ ಸಾಧ್ಯ - ಎಂದು ಈ ಸಂಶೋಧನೆಯ ವಿವರಗಳನ್ನು ಪ್ರಕಟಿಸಿರುವ 'ಬಯೋಮಾಸ್ ಕನ್ವರ್ಶನ್ ಅ್ಯಂಡ್ ಬಯೋರಿಫೈನರಿ' ಪತ್ರಿಕೆ ವರದಿ ಮಾಡಿದೆ.

ಅಂದ ಹಾಗೆ, ಗೋಡಂಬಿ ಕಾರ್ಖಾನೆಗಳಲ್ಲಿ ತ್ಯಾಜ್ಯವಾಗಿ ಗುಡ್ಡಗಟ್ಟಲೆ ಕೂಡಿಕೊಳ್ಳುವ ಈ ವಸ್ತುವಿನಂತಹುದೇ ಅಕರೋಟಿನ ಚಿಪ್ಪು, ಬಾದಾಮಿಯ ಚಿಪ್ಪು ಮುಂತಾದವು ಕೂಡ ಮುಂದೆ ಹಸಿರು ಪಟಾಕಿಗಳ ಅಂಶಗಳಾಗಬಹುದು. ಆಗ ನಿಜಕ್ಕೂ ಹಸಿರಿನಿಂದ ಹುಟ್ಟಿದ ವಸ್ತುವನ್ನೇ ಬಳಸಿ ತಯಾರಿಸಿದ ಹಸಿರು ಪಟಾಕಿ ಸಿಗಲಿದೆ. ಆ ದಿನಕ್ಕೆ ಕಾಯಬೇಕಷ್ಟೆ!

ಮಂಗಳನ ನೆಲದಿಂದ ಚಿಮ್ಮಿತು ಮಂಜು!





ಉಲ್ಕೆಯೊಂದು ಅಪ್ಪಳಿಸಿದಾಗ ನೆಲದೊಳಗಿಂದ ಹಿಮ ಆಚೆಗೆ ಚಿಮ್ಮಿರುವುದು

ನೇಸರ ಕಾಡನಕುಪ್ಪೆ

ಕೆಲವು ದಿನಗಳ ಹಿಂದೆ ಮಂಗಳಗ್ರಹದ ಅಂಗಳಕ್ಕೆ ಉಲ್ಕೆಯೊಂದು ವೇಗದಿಂದ ಅಪ್ಪಳಿಸಿತು. ಅದು ಅಪ್ಪಳಿಸಿದ ರಭಸಕ್ಕೆ ಮಂಗಳನ ಅಂಗಳದ ಮೇಲೆ ಭೂಕಂಪನದ ಅಲೆಗಳೇ ಎದ್ದವು. ನಾವು ಭೂಗ್ರಹದಲ್ಲಿ ಆಗುವ ಭೂಕಂಪನಗಳಿಗೆ ಇಂಗ್ಲಿಷ್‌ನಲ್ಲಿ 'ಅರ್ಥ್ ಕ್ವೇಕ್' ಎಂದು ಕರೆಯುವಂತೆ ಮಂಗಳನ ಉಂಟಾಗುವ ಕಂಪನಗಳನ್ನು 'ಮಾರ್ಸ್ ಕ್ವೇಕ್' ಎಂದು ಕರೆಯುತ್ತೇವೆ. ಆ ಉಲ್ಕೆಯು ಅಪ್ಪಳಿದಾಗ ಮಂಗಳನ ಅಂಗಳದ ಮೇಲೆ ನಾಲ್ಕರ ತೀವ್ರತೆಯಲ್ಲಿ 'ಮಾರ್ಸ್ ಕ್ವೇಕ್' ಉಂಟಾಯಿತು. ಬರೋಬ್ಬರಿ 490 ಅಡಿ ಅಗಲದ ಕುಳಿ ಉಂಟಾಯಿತು. ಅಚ್ಚರಿ ಎಂಬಂತೆ, ಆ ಉಲ್ಕೆಯು ಅಪ್ಪಳಿಸಿದಾಗ ನೆಲದಿಂದ ಮೇಲೆದ್ದ ಮಣ್ಣಿನ ಜೊತೆಗೆ ಮಂಜಿನ ಕಣಗಳೂ ಹೊರ ಚಿಮ್ಮಿರುವುದು ಸಂಶೋಧಕರಲ್ಲಿ ಹೊಸ ಸಂಚಲನವನ್ನು ಮೂಡಿಸಿದೆ.

ಮಂಗಳಗ್ರಹದ ಅಂಗಳದ ಮೇಲಿನ ಕಂಪನಗಳನ್ನು ಅಧ್ಯಯನ ಮಾಡಲೆಂದೇ 'ನಾಸಾ' ಪ್ರತಿಷ್ಠಾಪಿಸಿರುವ 'ಇನ್‌ಸೈಟ್' ಸಾಧನವು ಈ ಅಲೆಗಳನ್ನು ಗಮನಿಸಿ, ಮಂಗಳನನ್ನು ಪರಿಭ್ರಮಿಸುತ್ತಿರುವ 'ಮಾರ್ಸ್ ರೀಕಾನ್‌ಸಾನ್ಸ್ ಆರ್ಬಿಟರ್' ಉಪಗ್ರಹಕ್ಕೆ ರವಾನಿಸಿತು. ಉಪಗ್ರಹವು ತನಗೆ ಸಿಕ್ಕ ಸೂಚನೆಗಳನ್ನು ಆಧಾರವಾಗಿ ಇರಿಸಿಕೊಂಡು ಕೂಡಲೇ ಉಲ್ಕೆ ಅಪ್ಪಳಿಸುವ ಘಟನೆಯ ಛಾಯಾಚಿತ್ರಗಳನ್ನು ಸೆರೆಹಿಡಿಯಿತು. ಈ ಎಲ್ಲ ಮೇಲಿನ ಪ್ರಕ್ರಿಯೆಗಳೂ ಮಾನವ ಸೂಚನೆಗಳಿಲ್ಲದೆ ತನಗೆ ತಾನೇ ಯಾಂತ್ರಿಕವಾಗಿ ಆದಂಥವು. ಆದರೆ, ಆಗ ಸೆರೆ ಸಿಕ್ಕ ಛಾಯಾಚಿತ್ರಗಳು ಮಂಗಳನ ಮೇಲಿನ ಇದುವರೆಗಿನ ಹಲವು ಅನುಮಾನಗಳನ್ನೂ ಸಿದ್ಧಾಂತಗಳನ್ನೂ ಬಹುತೇಕ ನಿಜಗೊಳಿಸಿದವು.

'ನಾಸಾ' ಬಳಿ ಮಂಗಳನ ಮೇಲಿನ ಅನೇಕ ಉಲ್ಕೆ, ಕ್ಷುದ್ರಗ್ರಹ ಇತ್ಯಾದಿ ಆಕಾಶಕಾಯಗಳಿಂದ ಉಂಟಾದ ಕುಳಿಗಳ ಸಾಕಷ್ಟು ಛಾಯಾಚಿತ್ರಗಳಿವೆ. ಆದರೆ, ಈಗ ಸಿಕ್ಕಿರುವ ಮಾದರಿಯ ಕುಳಿಯ ಚಿತ್ರ ಇದುವರೆಗೂ 'ನಾಸಾ'ಗೆ ಸಿಕ್ಕಿರಲಿಲ್ಲ. ಸಾಮಾನ್ಯವಾಗಿ ಉಲ್ಕೆಯೊ, ಕ್ಷುದ್ರಗ್ರಹವೊ ಮೇಲ್ಮೈಗೆ ಅಪ್ಪಳಿಸಿದಾಗ ಆ ಆಕಾಶಕಾಯವು ಅಪ್ಪಳಿಸುವ ಜಾಗದಿಂದ ಆ ಆಕಾಶಕಾಯದ ಗಾತ್ರಕ್ಕಿಂತ ಕೊಂಚ ಹೆಚ್ಚಿನ ನೆಲದ ಭಾಗ ಹೊರಮುಖವಾಗಿ ಚಿಮ್ಮುತ್ತದೆ. ಅದಕ್ಕೆ ಆಕಾಶಕಾಯದ ರಭಸವೂ ಕಾರಣವಾಗಿರುತ್ತದೆ. ಈ ಉಲ್ಕೆಯು ಮಂಗಳನ ಅಂಗಳದ ಮೇಲೆ ಕೆಲವು ದಿನಗಳ ಹಿಂದೆ ಅಪ್ಪಳಿಸಿದಾಗ ಈ ಭಾಗದಲ್ಲೂ ಮಣ್ಣು, ಕಲ್ಲು ಇತ್ಯಾದಿಗಳು ಹೊರಮುಖವಾಗಿ ಚಿಮ್ಮಲ್ಪಟ್ಟವು. ಆದರೆ, ಈ ಬಾರಿ ಕೇವಲ ಮಣ್ಣು-ಕಲ್ಲುಗಳು ಮಾತ್ರವೇ ಚಿಮ್ಮಲಿಲ್ಲ. ಬದಲಿಗೆ, ಹಿಮವೂ ಚಿಮ್ಮಿತು. ಚಿಮ್ಮಿರುವ ಹಿಮವು ಛಾಯಾಚಿತ್ರಗಳಲ್ಲಿ ದಾಖಲಾಯಿತು.


ಮಂಗಳನ ನೆಲದೊಳಗೆ ನೀರು ಇರಬಹುದು ಎಂಬುದು ಒಂದು ಪ್ರಮುಖವಾದ ಊಹೆ ಅಥವಾ ಸಿದ್ಧಾಂತ. ಅದಕ್ಕೆ ಕಾರಣ ಇಷ್ಟೇ, ಮಂಗಳನ ಮೇಲ್ಮೈ ಬಹುತೇಕ ಕಬ್ಬಿಣದಿಂದ ಕೂಡಿದೆ. ಮಂಗಳನ ವಾತಾವರಣ ಬಹು ತೆಳುವಾಗಿರುವ ಕಾರಣ ಸೂರ್ಯನ ಕಿರಣಗಳು ನೇರವಾಗಿ ನೆಲದ ಮೇಲೆ ಬಿದ್ದು ಉಷ್ಣಾಂಶ ಹೆಚ್ಚುತ್ತದೆ. ಹಾಗಾಗಿ, ಮಂಗಳನ ಮೇಲ್ಮೈ ಮೇಲೆ ನೀರು ಕಾಲಾಂತರದಲ್ಲಿ ಸಂಪೂರ್ಣವಾಗಿ ಆವಿಯಾಗಿ ಹೋಗಿದೆ ಎನ್ನುವುದು ವಾದ. ಆದರೆ, ಸೂರ್ಯನ ಶಾಖ ಮುಟ್ಟದ ನೆಲದಾಳದಲ್ಲಿ ನೀರು ಇನ್ನೂ ಇದೆ ಎಂಬುದು ವಾದ. ಅಲ್ಲದೇ, 'ನಾಸಾ' ಮಂಗಳನ ಅಂಗಳದ ಮೇಲೆ ಇಳಿಸಿರುವ ಅನೇಕ ವಾಹನ, ಸಾಧನಗಳು ನೀರು ನೆಲದಲ್ಲಿ ಇವೆ ಎಂಬ ವಾದವನ್ನು ಪುಷ್ಟೀಕರಿಸಿ ದತ್ತಾಂಶವನ್ನು ನೀಡಿವೆ.

ಆದರೆ, ಮಂಗಳಗ್ರಹದ ಧ್ರುವ ಭಾಗಗಳಲ್ಲಿ ಬೆಳ್ಳನೆ ಹಿಮದಂತೆ ಕಾಣುವ ರಚನೆಗಳಿವೆ. ಅದೇನೆಂದು ಸಂಶೋಧಿಸಿದಾಗ, ಅದು ನೀರಿನಿಂದ ಉಂಟಾದ ಹಿಮವಲ್ಲ, ಬದಲಿಗೆ, ಅದು ಇಂಗಾಲದ ಡೈ ಆಕ್ಸೈಡ್ ಘನೀಭವಗೊಂಡು ಹಿಮವಾಗಿರುವುದು ಎಂಬ ಅಂಶ ಬೆಳಕಿಗೆ ಬಂದಿತು. ಹಾಗಾಗಿ, ಮಂಗಳಗ್ರಹದಲ್ಲಿ 'ಬೆಳ್ಳಗಿರುವುದೆಲ್ಲಾ ಹಿಮವಲ್ಲ' ಎಂಬ ಹೊಸ ನಾಣ್ಣುಡಿ ಸೃಷ್ಟಿಯಾಗಿದೆ. ಹಾಗಾಗಿ, ಈಗ 'ನಾಸಾ' ಸೆರೆಹಿಡಿದಿರುವ ಛಾಯಾಚಿತ್ರದಲ್ಲಿ ಕಾಣುವ ಬೆಳ್ಳಗಿನ ಹಿಮವು ಇಂಗಾಲದ ಡೈ ಆಕ್ಸೈಡ್ ಇರಬಹುದೇ ಅಥವಾ ನೀರೇ ಹಿಮವಾಗಿದೆಯೇ ಎನ್ನುವುದು ಇನ್ನೂ ದೃಢಪಡಬೇಕಿದೆ.

'ನಾಸಾ' ಇದನ್ನು ಈ ರೀತಿ ವ್ಯಾಖ್ಯಾನಿಸಿದೆ. 'ನಾಸಾ' ಮಾದರಿಯ ಸಂಸ್ಥೆಗಳು ಸಿದ್ಧಾಂತಗಳನ್ನು ಕೇವಲ ಊಹೆಯ ಆಧಾರದ ಮೇಲೆ ರೂಪಿಸಿವುದಿಲ್ಲ; ಬದಲಿಗೆ, ದತ್ತಾಂಶಗಳ ಮುಖೇನ ರೂಪಿಸುತ್ತವೆ. ಹಾಗಾಗಿ, 'ನಾಸಾ' ಈ ರೀತಿ ಹೇಳಿಕೆ ನೀಡಿದೆ, 'ಈವರೆಗೆ ನಮಗೆ ಸಿಕ್ಕಿರುವ ಯಾವುದೇ ಛಾಯಾಚಿತ್ರದಲ್ಲೂ ಹಿಮದ ದೃಶ್ಯ ನಮಗೆ ಸಿಕ್ಕಿರಲಿಲ್ಲ. ಉಲ್ಕೆಯೊಂದು ಅಪ್ಪಳಿಸಿದಾಗ ಒಳಗಿನ ಹಿಮ ಆಚೆ ಚಲ್ಲಬಹುದು. ಆದರೆ, ಹಿಮ ಶಾಖಕ್ಕೆ ಬಹುಬೇಗ ಆವಿಯಾಗುವುದು. ಹಾಗಾಗಿ, ದೃಶ್ಯವನ್ನು ಸೆರೆ ಹಿಡಿಯುವ ಸಾಧ್ಯತೆಗಳು ಅತ್ಯಲ್ಪ. ಈ ಚಿತ್ರದಿಂದ ಒಂದು ಅಂಶವಂತೂ ಸಾಬೀತಾಗಿದೆ; ನೆಲದೊಳಗೆ ಹಿಮವಿದೆ. ಅದು ನೀರಿನ ಹಿಮವೇ ಆಗಿರಲಿ ಎಂಬುದು ನಮ್ಮ ಬಯಕೆಯಾಗಿದೆ' ಎಂದು ಹೇಳಿದೆ.

ಮಂಗಳನ ಅಂಗಳದ ಮೇಲೆ ನೀರು ಹರಿದಿರುವ, ನದಿಗಳಿದ್ದ ಕುರುಹುಗಳು ನಮಗೆ ಸಾಕಷ್ಟು ಸಿಕ್ಕಿವೆ. ಅಲ್ಲದೇ, ಮಂಗಳನ ನೆಲದೊಳಗೆ ಅಡಗಿರುವ ವಿಚಾರಗಳ ಜ್ಞಾನ ನಮಗೆ ಇದುವರೆಗೆ ಸಿಕ್ಕಿರುವುದು ಅತ್ಯಲ್ಪ. ಹಾಗಾಗಿ, ಈ ಛಾಯಾಚಿತ್ರವು ಹೊಸ ಜ್ಞಾನವೊಂದರ ಸೇರ್ಪಡೆ ಎನ್ನುವುದು ಅಂತರಿಕ್ಷ ವಿಜ್ಞಾನಿಗಳ ವ್ಯಾಖ್ಯಾನವಾಗಿದೆ.

ಅಲ್ಲದೇ, ಈಗ ಸೃಷ್ಟಿಯಾಗಿರುವ ಕುಳಿ ಸಣ್ಣ ಪುಟ್ಟದೇನೂ ಅಲ್ಲ. ಬರೋಬ್ಬರಿ 490 ಅಡಿ ಆಳವಿದೆ. 'ನಾಸಾ' ಬಳಿ ಇರುವ ಪರ್ಸಿವರೆನ್ಸ್ ವಾಹನವನ್ನೂ 'ನಾಸಾ' ಅಲ್ಲಿಗೆ ಕಳುಹಿಸಿದರೂ ಕಳುಹಿಸಬಹುದು. ಇದರಿಂದ ಅದರಲ್ಲಿರುವ ಸಾಧನಗಳ ಸಹಾಯದಿಂದ ಅಲ್ಲಿರುವುದು ನೀರೋ ಅಲ್ಲವೋ ಎಂಬ ಜ್ಞಾನವೂ ಸಿಗಬಹುದು.



ಬೆಂಗಳೂರಿನಲ್ಲಿ ಮಂಗಳವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ (ಎಡದಿಂದ) ಇಲಾಖೆಯ ಕಾರ್ಯದರ್ಶಿ ಡಾ.ಎನ್.ಮಂಜುಳಾ, ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ, ಸಚಿವರಾದ ಆರ್. ಅಶೋಕ, ವಿ.ಸುನಿಲ್ ಕುಮಾರ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕ ಉದಯ್ ಗರುಡಾಚಾರ್, ಸಂಸದ ತೇಜಸ್ವಿ ಸೂರ್ಯ, ಇಲಾಖೆಯ ನಿರ್ದೇಶಕ ಪ್ರಕಾಶ್ ಪ್ರಶಸ್ತಿ ಪುರಸ್ಕೃತರೊಂದಿಗೆ ಇದ್ದರು —ಪ್ರಜಾವಾಣಿ ಚಿತ್ರ/ ರಂಜು ಪಿ.

ಹೊರ ರಾಜ್ಯದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಕನ್ನಡ ಕಲಿಕೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ರಾಜ್ಯದ ವೈದ್ಯಕೀಯ, ಅರೆ ವೈದ್ಯಕೀಯ, ನರ್ಸಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹೊರ ರಾಜ್ಯಗಳ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸುವ ಕಾರ್ಯಕ್ರಮ ಇದೇ ವರ್ಷ ದಿಂದ ಜಾರಿಯಾಗಲಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಹೇಳಿದ್ದಾರೆ.

ದೇವನಹಳ್ಳಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ 67ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮಾತೃಭಾಷೆಯಲ್ಲಿ ಕಲಿಕೆಗೆ ಆದ್ಯತೆ ನೀಡಲಾಗಿದೆ. ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಕೆಲ ರಾಜ್ಯಗಳಲ್ಲಿ ಈಗಾಗಲೇ ಮಾತೃಭಾಷೆಯಲ್ಲಿ ಕಲಿಯಲು ಅವಕಾಶ ನೀಡಲಾಗಿದೆ. ಇದೇ ನವ ಭಾರತದ ಪರಿಕಲ್ಪನೆ ಎಂದರು.

ಕರಾಳ ದಿನ: ಎಂಇಎಸ್‌ಗೆ ಮುಖಭಂಗ

ಬೆಳಗಾವಿ: ನಗರದಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಮುಖಂಡರು ಮಂಗಳವಾರ ಕರ್ನಾಟಕ ರಾಜ್ಯೋತ್ಸವಕ್ಕೆ ಪರ್ಯಾಯವಾಗಿ ಕರಾಳ ದಿನ ಆಚರಿಸಿದರು. ಆದರೆ, ಮಹಾರಾಷ್ಟ್ರದ ಯಾವೊಬ್ಬ ಸಚಿವರಾಗಲಿ, ನಿರೀಕ್ಷಿತ ಮಟ್ಟದಲ್ಲಿ ಜನರೂ ಸೇರದ್ದರಿಂದ ಎಂಇಎಸ್‌ಗೆ ಮತ್ತೊಮ್ಮೆ ಮುಖಭಂಗವಾಯಿತು.

ಕರಾಳ ದಿನಾಚರಣೆಗೆ ಮಹಾರಾಷ್ಟ್ರದ ಸಚಿವರನ್ನು ಕರೆತರಲು ಎಂಇಎಸ್ ಪ್ರಯತ್ನ ನಡೆಸಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಿಸುವ ಸಲುವಾಗಿ ನಿರಂತರವಾಗಿ ಸಭೆ ನಡೆಸಿತ್ತು.

ಕಪ್ಪು ಬಟ್ಟೆ ಧರಿಸಿ ಮೆರವಣಿಗೆಯಲ್ಲಿ ಪಾಲ್ಗೊಂಡ ಕಾರ್ಯಕರ್ತರು, 'ಬೆಳಗಾವಿ, ಕಾರವಾರ, ನಿಪ್ಪಾಣಿ, ಬೀದರ್, ಭಾಲ್ಕಿ ಸಂಯುಕ್ತ ಮಹಾರಾಷ್ಟ್ರ ಝಾಲಾಚ್ ಪಾಹಿಜೆ (ಬೆಳಗಾವಿ, ಕಾರವಾರ, ನಿಪ್ಪಾಣಿ, ಬೀದರ್, ಭಾಲ್ಕಿ ಮಹಾರಾಷ್ಟ್ರಕ್ಕೆ ಸೇರಲೇಬೇಕು)' ಎಂದು ಘೋಷಣೆ ಕೂಗಿದರು.

ಎಲ್ಲಾ ಕ್ಷೇತ್ರಗಳಿಗೂ ಅನ್ವಯ ● ಇದೇ ವರ್ಷ 1 ಲಕ್ಷ ಹುದ್ದೆಗಳ ಭರ್ತಿ: ಸಿ.ಎಂ

'ಕನ್ನಡ ಕಡ್ಡಾಯಕ್ಕೆ ಕಾನೂನು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಎಲ್ಲ ರಂಗಗಳಲ್ಲಿ ಕನ್ನಡ ಭಾಷೆಯ ಬಳಕೆ ಕಡ್ಡಾಯಗೊಳಿಸಲು ಕಾನೂನು ರೂಪಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ 67ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, 'ಡಿಸೆಂಬರ್‌ನಲ್ಲಿ ನಡೆಯುವ ವಿಧಾನ ಮಂಡಲ ಅಧಿವೇಶನದಲ್ಲಿ ಕನ್ನಡ ಭಾಷೆ ಕಡ್ಡಾಯಗೊಳಿಸಲು ಕಾನೂನು ರೂಪಿಸುವ ಮಸೂದೆ ಮಂಡಿಸಿ, ಅನುಮೋದನೆ ಪಡೆಯಲಾಗುವುದು' ಎಂದರು.

'ಕನ್ನಡ ಭಾಷೆಗೆ ಕಾನೂನಿನ ಕವಚ ನೀಡುತ್ತಿರುವ ಮೊದಲ ಸರ್ಕಾರ ನಮ್ಮದು. ಈ ಕಾನೂನು ರಚನೆಯ ಬಗ್ಗೆ ಮುಕ್ತ ಚರ್ಚೆ, ಸಂವಾದಗಳು ನಡೆಯಲಿವೆ. ಸಲಹೆಗಳನ್ನು ಸರ್ಕಾರ ಮುಕ್ತವಾಗಿ ಸ್ವೀಕರಿಸಲಿದೆ' ಎಂದರು.

'ರಾಜ್ಯದಲ್ಲಿ 2.5 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಇವೆ. ಮುಂದಿನ 2 ವರ್ಷಗಳಲ್ಲಿ ಈ ಹುದ್ದೆಗಳನ್ನು ಸಂಪೂರ್ಣವಾಗಿ ಭರ್ತಿ ಮಾಡಲಾಗುವುದು. ಈ ವರ್ಷ 1 ಲಕ್ಷ ಉದ್ಯೋಗ ನೀಡುವುದರ ಮೂಲಕ ಶೈಕ್ಷಣಿಕ ಹಾಗೂ ಔದ್ಯೋಗಿಕ ಕ್ರಾಂತಿ ಕೈಗೊಳ್ಳಲಾಗುವುದು' ಎಂದು ಹೇಳಿದರು.

'ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ಕಾಲ ಶುರುವಾದ ಮೇಲೆ ಅಂತಃಕರಣ ಮರೆತಿರುವ ಈ ಹೊತ್ತಿನಲ್ಲಿ, ನಾವು ಇದನ್ನು ಉಳಿಸಿಕೊಂಡು ಹೊಸ ಸವಾಲುಗಳನ್ನು ಎದುರಿಸಬೇಕು. ಕನ್ನಡಿಗರದ್ದು ಅಂತಃಕರಣವುಳ್ಳ ಸಂಸ್ಕೃತಿ. ಉತ್ತಮ ಶಿಕ್ಷಣ, ಆರೋಗ್ಯ, ಉದ್ಯೋಗ, ತಂತ್ರಜ್ಞಾನ, ತಂತ್ರಾಂಶ, ವಿಜ್ಞಾನ ಹಾಗೂ ಮೂಲ ಸೌಕರ್ಯ ಇರುವ ಭವಿಷ್ಯ ನಿರ್ಮಿಸುವ ಸಂಕಲ್ಪ ಮಾಡೋಣ' ಎಂದರು.

'ಮನೆ ಕಟ್ಟುವ ಸಂದರ್ಭದಲ್ಲಿ ಕೇಂದ್ರ ₹1 ಲಕ್ಷ ನೀಡಿದರೆ ನಾವು ₹5 ಲಕ್ಷ ಅನುದಾನ ನೀಡಿದ್ದೇವೆ. 8 ಸಾವಿರ ಶಾಲಾ ಕೊಠಡಿಗಳನ್ನು ನಿರ್ಮಿಸಲಾಗುವುದು. ಈ ಯೋಜನೆಗೆ ವಿವೇಕ ಎಂಬ ಹೆಸರಿಡಲಾಗಿದೆ' ಎಂದರು.

ಹಿಂದಿ ಹೇರಿಕೆಗೆ ಶಾಸಕ ರಿಜ್ವಾನ್ ವಿರೋಧ

'ಕೇಂದ್ರ ಸರ್ಕಾರ ದೇಶದಾದ್ಯಂತ ಹಿಂದಿ ಹೇರಿಕೆಗೆ ಮುಂದಾಗಿರುವುದು ಭಾರತದ ಒಕ್ಕೂಟ ವ್ಯವಸ್ಥೆ ಮತ್ತು ವೈವಿಧ್ಯಕ್ಕೆ ಅಪಾಯವನ್ನುಂಟು ಮಾಡಬಹುದು. ಹಿಂದಿ ಮಾತ್ರವೇ ದೊಡ್ಡಣ್ಣನೆಂಬ ಹಟಮಾರಿ ಧೋರಣೆಯನ್ನು ಕೈಬಿಟ್ಟು, ಭಾರತದ ಎಲ್ಲಾ ಭಾಷೆಗಳನ್ನು ಗೌರವಿಸಬೇಕು. ಕನ್ನಡಿಗರ ಮೇಲಿನ ಭಾಷಾ ತಾರತಮ್ಯವನ್ನು ಗಟ್ಟಿ ಧ್ವನಿಯಲ್ಲಿ ವಿರೋಧಿಸಬೇಕಿದೆ' ಎಂದು ಕಾಂಗ್ರೆಸ್ ಶಾಸಕ ರಿಜ್ವಾನ್ ಅರ್ಷದ್ ಹೇಳಿದರು.

ರಾಜ್ಯೋತ್ಸವ ಸಮಾರಂಭದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಎದುರೇ ಈ ವಿಷಯ ಪ್ರಸ್ತಾಪಿಸಿದ ಅವರು, 'ರಾಜ್ಯೋತ್ಸವ ಸಂದರ್ಭದಲ್ಲಿ ಮಾತ್ರ ನಮ್ಮೆಲ್ಲರೊಳಗೆ ಕನ್ನಡತನ ಜಾಗೃತಗೊಳ್ಳುತ್ತದೆ. ಇದೇಕೆ ಹೀಗೆ ಎಂದು ಪ್ರಶ್ನಿಸಿಕೊಳ್ಳಬೇಕು. ಕನ್ನಡದ ಮೇಲೆ ಹಿಂದಿ ಹೇರಿಕೆಯ ಪ್ರಯತ್ನಗಳು ನಡೆಯುತ್ತಿರುವುದು ಖಂಡನೀಯ. ಕೇಂದ್ರ ಸರ್ಕಾರದ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕೇವಲ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ನಡೆಸಲಾಗುತ್ತದೆ. ಇದರಿಂದ ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ವಿಚಾರಣೆಗೆ ನಕಾರ

ನವದೆಹಲಿ (ಪಿಟಿಐ): ಇವಿಎಂಗಳಲ್ಲಿ ಪಕ್ಷದ ಚಿಹ್ನೆಯ ಬದಲಿಗೆ ಅಭ್ಯರ್ಥಿಗಳ ವಯಸ್ಸು, ಶೈಕ್ಷಣಿಕ ಅರ್ಹತೆ ಮತ್ತು ಭಾವಚಿತ್ರವನ್ನು ಮುದ್ರಿಸುವಂತೆ ಆಯೋಗಕ್ಕೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಕೆಯಾಗಿದ್ದ ಪಿಐಎಲ್ ವಿಚಾರಣೆಗೆ ಸುಪ್ರೀಂಕೋರ್ಟ್ ನಿರಾಕರಿಸಿದೆ.

ಪುನೀತ್‌ಗೆ 'ರತ್ನ' ಕಿರೀಟ

ಒಂದನೇ ಪುಟದಿಂದ....

ಪುನೀತ್ 'ಕರ್ನಾಟಕ ರತ್ನ' ಗೌರವಕ್ಕೆ ಪಾತ್ರರಾದ ಹತ್ತನೇ ವ್ಯಕ್ತಿ. 1992ರಲ್ಲಿ ರಾಷ್ಟ್ರಕವಿ ಕುವೆಂಪು ಮತ್ತು ವರನಟ ಡಾ.ರಾಜ್‌ಕುಮಾರ್ ಅವರಿಗೆ ಮೊದಲ ಬಾರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರಿಗೆ 2009ರಲ್ಲಿ ಈ ಗೌರವ ನೀಡಲಾಗಿತ್ತು. 13 ವರ್ಷಗಳ ಬಳಿಕ ಪುನೀತ್ ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿಯ ಗೌರವ ಸಂದಿದೆ.

ಪ್ರಶಸ್ತಿ ಪ್ರದಾನ ಮಾಡುತ್ತಿದ್ದಂತೆಯೇ ವಿಧಾನಸೌಧದ ಮುಂಭಾಗದ ಆವರಣ ಮತ್ತು ರಸ್ತೆಯ ಮೇಲೆ ಸೇರಿದ್ದ ಹತ್ತಾರು ಸಾವಿರ ಮಂದಿ 'ಅಪ್ಪು ಅಪ್ಪು' ಎಂಬ ಘೋಷಣೆ ಕೂಗಿ ಸಂಭ್ರಮಿಸಿದರು. ಸುರಿಯುವ ಮಳೆಯನ್ನೂ ಲೆಕ್ಕಿಸದೆ ಕನ್ನಡ ಬಾವುಟ ಮತ್ತು ಪುನೀತ್ ಭಾವಚಿತ್ರಗಳನ್ನು ಮೇಲಕ್ಕೆತ್ತಿ ಜೈಕಾರ ಹಾಕುತ್ತಾ ಕುಣಿದು ಕುಪ್ಪಳಿಸಿದರು.

ಮಳೆಯಿಂದ ಕಾರ್ಯಕ್ರಮ ಮೊಟಕು: ಸಂಜೆ 4 ಗಂಟೆಗೆ ನಡೆಯಬೇಕಿದ್ದ ಪ್ರಶಸ್ತಿ ಪ್ರದಾನ ಸಮಾರಂಭ 5 ಗಂಟೆಯ ಸುಮಾರಿಗೆ ಆರಂಭವಾಯಿತು. ಅತಿಥಿಗಳು ವೇದಿಕೆ ಏರುತ್ತಿದ್ದಂತೆಯೇ ಮಳೆ ಸುರಿಯಲಾರಂಭಿಸಿತು. ಮಳೆ ಜೋರಾಗುವ ಲಕ್ಷಣ ಅರಿತ ಮುಖ್ಯಮಂತ್ರಿಯವರು, ಸ್ವಾಗತ, ಪ್ರಾಸ್ತಾವಿಕ ನುಡಿ ಸೇರಿದಂತೆ ಎಲ್ಲ ಔಪಚಾರಿಕ ಪ್ರಕ್ರಿಯೆಗಳಿಗೂ ಕಡಿವಾಣ ಹಾಕಿದರು.

ನೇರವಾಗಿ ತಾವೇ ನಿರೂಪಕರ ಹೊಣೆ ವಹಿಸಿಕೊಂಡ ಬೊಮ್ಮಾಯಿ, ರಜನಿಕಾಂತ್ ಅವರನ್ನು ಭಾಷಣಕ್ಕೆ ಆಹ್ವಾನಿಸಿದರು. ನಂತರ ಜೂನಿಯರ್ ಎನ್.ಟಿ.ಆರ್. ಅವರ ಭಾಷಣಕ್ಕೆ ಅವಕಾಶ ಕಲ್ಪಿಸಿದರು. ಅವರ ಮಾತು ಮುಗಿಯುತ್ತಿದ್ದಂತೆ ಚುಟುಕಾಗಿ ತಮ್ಮ ಮಾತುಗಳನ್ನು ಮುಗಿಸಿ, ಪ್ರಶಸ್ತಿ ಪ್ರದಾನ ಮಾಡಿದರು.

ಅಪ್ಪು ದೇವರ ಮಗು: ರಜನಿಕಾಂತ್

ಒಂದನೇ ಪುಟದಿಂದ...

1979ರಲ್ಲಿ ಚಿಕ್ಕಮಗುವಿನ ಧ್ವನಿಯೊಂದು ಇದನ್ನು ಹೇಳಿದ್ದು ಕೇಳಿಸಿತು. ಯಾರೆಂದು ಕುತೂಹಲದಿಂದ ಗಮನಿಸಿದಾಗ, ರಾಜ್ ಮಡಲಿನಲ್ಲಿ ಮಲಗಿದ್ದ ನಾಲ್ಕು ವರ್ಷದ ಬಾಲಕ ಪುನೀತ್ ಅದನ್ನು ಹೇಳಿದ್ದೆಂದು ಗೊತ್ತಾಯಿತು ಎಂದು ರಜನಿಕಾಂತ್ ಅವರು ನೆನಪಿನ ಬುತ್ತಿ ಬಿಚ್ಚಿಟ್ಟರು.

'ಕೆಲವು ವರ್ಷಗಳ ಬಳಿಕ ಪುನೀತ್ ಅವರ 'ಅಪ್ಪು' ಚಿತ್ರ ಬಿಡುಗಡೆಯಾಗಿ ಭರ್ಜರಿ ಪ್ರದರ್ಶನ ಕಾಣುತ್ತಿತ್ತು. ಆಗ ನಾನು ಡಾ.ರಾಜ್‌ಕುಮಾರ್ ಅವರನ್ನು ಭೇಟಿಯಾಗಿದ್ದೆ. ಈ ಚಿತ್ರದ ಬಗ್ಗೆ ಹೇಳಿದರು. ಚಿತ್ರ ನೋಡಿದ ಬಳಿಕ ಶತದಿನೋತ್ಸವ ಆಚರಿಸುತ್ತದೆ ಎಂದಿದ್ದೆ. ಅದು ನಡೆದಾಗ, ನೀವೇ ಬಂದು ಅಪ್ಪುವಿಗೆ ಶೀಲ್ಡ್ ಕೊಡಬೇಕು ಎಂದು ರಾಜ್‌ಕುಮಾರ್ ಹೇಳಿದ್ದರು. ಅಂಬೇಡ್ಕರ್ ಭವನದಲ್ಲಿ ನಡೆದ ಕಾರ್ಯಕ್ರಮಕ್ಕೆ ಬಂದು, ನಾನೇ ಶೀಲ್ಡ್ ಕೊಟ್ಟಿದ್ದೆ' ಎಂದು ನೆನೆದರು.

ಮತ್ತೆ ಹುಟ್ಟಿ ಬನ್ನಿ ಎಂದ ಸಿ.ಎಂ

'ಕರ್ನಾಟಕದ ಒಬ್ಬ ರತ್ನನಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡುವ ಸೌಭಾಗ್ಯ ದೊರಕಿರುವುದು ನನಗೆ ಮತ್ತು ನಮ್ಮ ಸರ್ಕಾರದ ಪುಣ್ಯ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಪುನೀತ್ ಅವರು ಕನ್ನಡ ಮಣ್ಣಿನ ಕಣಕಣದಲ್ಲಿ, ಗ್ರಾಮಗ್ರಾಮಗಳಲ್ಲಿ, ಆಕಾಶದಲ್ಲಿಯೂ ಅಮರರಾಗಿದ್ದಾರೆ. ಕರ್ನಾಟಕ ರತ್ನವಾಗಿ ನಮ್ಮಜತೆಗೆ ಸದಾ ಇರುತ್ತಾರೆ. ಕೆಳಗೆ ಬಂದು ನೋಡಿ ಮಳೆಯ ನಡುವೆಯೂ ನಿಮ್ಮ ಅಭಿಮಾನಿಗಳು ಎಷ್ಟೊಂದು ಗಟ್ಟಿಯಾಗಿ ನಿಂತಿದ್ದಾರೆ. ಮತ್ತೊಮ್ಮೆ ಈ ನಾಡಿನಲ್ಲಿ ಹುಟ್ಟಿ ಬನ್ನಿ' ಎಂದರು.

ಪಾಲನೆಯಾಗದ ಶಿಷ್ಟಾಚಾರ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರವಾಗಿ 'ಕರ್ನಾಟಕ ರತ್ನ' ಪ್ರಶಸ್ತಿ ಪ್ರದಾನ ಮಾಡಿದ ಸಮಾರಂಭಕ್ಕೆ ವಿಧಾನಸಭೆಯ ಅಧ್ಯಕ್ಷರು ಮತ್ತು ವಿಧಾನಮಂಡಲದ ಉಭಯ ಸದನಗಳ ವಿರೋಧ ಪಕ್ಷದ ನಾಯಕರಿಗೆ ಆಹ್ವಾನ ನೀಡುವ ವಿಚಾರದಲ್ಲಿ ಶಿಷ್ಟಾಚಾರ ಪಾಲನೆಯಾಗಿಲ್ಲ ಎಂಬ ಆಕ್ಷೇಪ ವ್ಯಕ್ತವಾಗಿದೆ.

ಕಾರ್ಯಕ್ರಮದ ಆಹ್ವಾನ ಪತ್ರಿಕೆಯಲ್ಲಿ ಗೌರವ ಉಪಸ್ಥಿತಿಯ ಪಟ್ಟಿಯಲ್ಲಿ ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನ ಪರಿಷತ್ ಹಂಗಾಮಿ ಸಭಾಪತಿ ರಘುನಾಥ ರಾವ್ ಮಲ್ಕಾಪೂರೆ, ಮುಖ್ಯ ಅತಿಥಿಗಳ ಪಟ್ಟಿಯಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹೆಸರನ್ನು ಪ್ರಕಟಿಸಲಾಗಿತ್ತು.

ಕಾಗೇರಿ, ಸಿದ್ದರಾಮಯ್ಯ ಮತ್ತು ಹರಿಪ್ರಸಾದ್ ಅವರಿಗೆ ಶಿಷ್ಟಾಚಾರದ ರೀತಿಯಲ್ಲಿ ಖುದ್ದಾಗಿ ಆಹ್ವಾನ ನೀಡಿರಲಿಲ್ಲ. ಅಧಿಕಾರಿಗಳ ಮೂಲಕ ಮೂವರ ಕಚೇರಿಗೆ ಆಹ್ವಾನ ಪತ್ರಿಕೆ ತಲುಪಿಸಲಾಗಿತ್ತು. ದೂರವಾಣಿ ಕರೆಯ ಮೂಲಕವೂ ಆಹ್ವಾನ ನೀಡಿರಲಿಲ್ಲ. ಕಾಗೇರಿ ಅವರಿಗೆ ಸಚಿವರೊಬ್ಬರು ಸೋಮವಾರ ತಡರಾತ್ರಿ ಕರೆಮಾಡಿದ್ದರು ಎಂದು ಮೂಲಗಳು ತಿಳಿಸಿವೆ.

'ಸಮಾರಂಭಕ್ಕೆ ಆಹ್ವಾನ ನೀಡುವ ವಿಚಾರದಲ್ಲಿ ಶಿಷ್ಟಾಚಾರ ಪಾಲನೆಯಾಗಿಲ್ಲ' ಎಂದು ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದರು. ನಾಲ್ವರ ಪೈಕಿ ಮಲ್ಕಾಪೂರೆ ಮಾತ್ರ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಕಾಗೇರಿ, ಸಿದ್ದರಾಮಯ್ಯ ಮತ್ತು ಹರಿಪ್ರಸಾದ್ ಭಾಗವಹಿಸಿರಲಿಲ್ಲ.

ಪೊಲೀಸ್ ನೇಮಕಾತಿ: ವಯೋಮಿತಿ ಸಡಿಲಿಕೆಗೆ ಚಿಂತನೆ– ಆರಗ ಜ್ಞಾನೇಂದ್ರ

ಪ್ರಜಾವಾಣಿ ವಾರ್ತೆ

ತುಮಕೂರು: ಪೊಲೀಸರ ನೇಮಕಾತಿಯಲ್ಲಿ 2 ವರ್ಷ ವಯೋಮಿತಿ ಹೆಚ್ಚಿಸುವ ಕುರಿತು ಚಿಂತನೆ ನಡೆದಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದ್ದಾರೆ.

ನಗರದಲ್ಲಿ ಮಂಗಳವಾರ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. 'ಪೊಲೀಸರ ನೇಮಕಾತಿಯಲ್ಲಿ ವಯೋಮಿತಿ ಹೆಚ್ಚಳ ಮಾಡುವಂತೆ ಸಾಕಷ್ಟು ಒತ್ತಡ ಬಂದಿದೆ. ಪೊಲೀಸ್ ಇಲಾಖೆಯಲ್ಲಿ ಯುವ ಶಕ್ತಿ ಇರಬೇಕು ಎಂಬುದು ನನ್ನ ಆಶಯ. ಆದರೆ ಒತ್ತಡ ಹೆಚ್ಚಾಗುತ್ತಿದೆ' ಎಂದರು.

'ಒತ್ತಡ ಬಂದ ಕಾರಣಕ್ಕೆ ನೇಮಕಾತಿ ಪ್ರಕ್ರಿಯೆಯನ್ನು ಒಂದು ತಿಂಗಳು ಕಾಲ ಮುಂದೂಡಲಾಗಿದೆ. ಎರಡು ವರ್ಷ ಸಡಿಲಿಕೆ ಮಾಡುವ ಆಲೋಚನೆ ಇದೆ. ಶೀಘ್ರ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಅವರು ತಿಳಿಸಿದರು.

ಕಾಲಿಗೆ ಬಿದ್ದು ಕಣ್ಣೀರಿಟ್ಟ ಅಭ್ಯರ್ಥಿಗಳು

ಕಲ್ಯಾಣ ಕರ್ನಾಟಕ ಸೇರಿದಂತೆ ರಾಜ್ಯದ ವಿವಿಧೆಡೆಗಳಿಂದ ಬಂದಿದ್ದ ನೂರಾರು ಅಭ್ಯರ್ಥಿಗಳು ಸಚಿವ ಆರಗ ಜ್ಞಾನೇಂದ್ರ ಅವರ ಕಾಲಿಗೆ ಬಿದ್ದು, ಕಣ್ಣೀರಿಟ್ಟು ವಯೋಮಿತಿ ಸಡಿಲಿಸುವಂತೆ ಕೇಳಿಕೊಂಡರು.

ಕೋವಿಡ್ ಹಾಗೂ ಇತರ ಕಾರಣಗಳಿಂದಾಗಿ ಪೊಲೀಸರ ನೇಮಕಾತಿ ನಡೆದಿಲ್ಲ. ಈಗ ನೇಮಕಾತಿ ಪ್ರಕ್ರಿಯೆ ಆರಂಭವಾಗಿದ್ದು, ವಯೋಮಿತಿ ಸಡಿಲಿಸದಿದ್ದರೆ ಸಾಕಷ್ಟು ಮಂದಿಗೆ ಉದ್ಯೋಗ ಸಿಗುವುದಿಲ್ಲ. ಒಂದು ಬಾರಿಯಾದರೂ ಅವಕಾಶ ಮಾಡಿಕೊಡಬೇಕು ಎಂದು ಯುವಕ, ಯುವತಿಯರು ಪರಿಪರಿಯಾಗಿ ಬೇಡಿಕೊಂಡರು.

ಕನ್ನಡ ರಾಜ್ಯೋತ್ಸವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ವೀಕ್ಷಿಸುತ್ತಿದ್ದ ಸಚಿವರ ಬಳಿಗೆ ಹೋಗಲು ಮನವಿ ಹೊತ್ತು ಬಂದಿದ್ದವರನ್ನು ಪೊಲೀಸರು ತಡೆದರು. ಮುನ್ನುಗ್ಗಲು ಯತ್ನಿಸಿದಾಗ ಲಾಠಿ ಬೀಸಿದರು. ಕೊನೆಗೂ ಅಭ್ಯರ್ಥಿಗಳು ಸಾಹಸ ಮಾಡಿ ಸಚಿವರನ್ನು ಭೇಟಿಮಾಡಿ ಮನವಿ ಸಲ್ಲಿಸಿದರು.



❦ ಸುಭಾಷಿತ ❦

ಶಾಂತಿ ನಮ್ಮೊಳಗಿನಿಂದ ಬರುವಂತಹದ್ದು. ಅದನ್ನು ಹೊರಗಿನಿಂದ ನಿರೀಕ್ಷಿಸಬಾರದು.

–ಗೌತಮ ಬುದ್ಧ

ಮೊರ್ಬಿ ತೂಗುಸೇತುವೆ ದುರಂತ: ಸಮಗ್ರ ತನಿಖೆಯಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ

ಗುಜರಾತ್‌ನ ಮೊರ್ಬಿ ಎಂಬಲ್ಲಿ ತೂಗುಸೇತುವೆ ಕುಸಿದು 136ಕ್ಕೂ ಹೆಚ್ಚು ಮಂದಿ ಬಲಿಯಾಗಿರುವುದು ಇತ್ತೀಚಿನ ದಿನಗಳಲ್ಲಿ ಘಟಿಸಿದ ಅತ್ಯಂತ ದೊಡ್ಡ ದುರಂತ. ಭಾರತದಲ್ಲಿ ಮೂಲಸೌಕರ್ಯಗಳ ಗುಣಮಟ್ಟ ಮತ್ತು ಅವುಗಳ ನಿರ್ವಹಣೆ ಎಷ್ಟು ಕಳಪೆಯಾಗಿದೆ ಎಂಬುದನ್ನು ಈ ದುರಂತವು ಬಯಲಾಗಿಸಿದೆ. ಹಾಗೆಯೇ, ಜನಸಂದಣಿಯನ್ನು ದಕ್ಷವಾಗಿ ನಿಭಾಯಿಸುವ ವ್ಯವಸ್ಥೆ ಇಲ್ಲದಿರುವುದು ಮತ್ತು ಎಲ್ಲ ಹಂತಗಳಲ್ಲಿಯೂ ಸರ್ಕಾರದ ವೈಫಲ್ಯಗಳಿಗೆ ಘಟನೆಯು ಬೆಳಕು ಚೆಲ್ಲಿದೆ. ದೇಶದ ವಿವಿಧ ಭಾಗಗಳಲ್ಲಿ ಹತ್ತಾರು ದುರಂತಗಳಿಗೆ ಇಂತಹ ಲೋಪಗಳೇ ಕಾರಣವೂ ಆಗಿವೆ. ಮೊರ್ಬಿಯಲ್ಲಿ ಮೃತಪಟ್ಟವರಲ್ಲಿ ಮಕ್ಕಳು ಮತ್ತು ಮಹಿಳೆಯರ ಸಂಖ್ಯೆಯು ಗಣನೀಯವೇ ಆಗಿದೆ. ಸೇತುವೆ ಕುಸಿದಿರುವುದು ಆಕಸ್ಮಿಕ ಅಲ್ಲ, ಬದಲಿಗೆ ಇದು ಮನುಷ್ಯನ ತಪ್ಪುಗಳಿಂದ ಆಗಿರುವ ಕೃತ್ಯ. ವಿವಿಧ ಸಂಸ್ಥೆಗಳು ಪರಸ್ಪರ ರತ್ತ ಬೊಟ್ಟು ಮಾಡಿ ದೂಷಣೆಯಲ್ಲಿ ತೊಡಗಿವೆ. ಆದರೆ, ಹೀಗೆ ದೂಷಣೆಯಲ್ಲಿ ತೊಡಗಿರುವ ಎಲ್ಲ ಸಂಸ್ಥೆಗಳು ದುರಂತಕ್ಕೆ ಹೊಣೆಯಾಗಿವೆ ಎಂಬುದನ್ನು ಮರೆಯಬಾರದು. ಮೊರ್ಬಿ ಸೇತುವೆಯಂತಹ ಪ್ರಾಚೀನ ರಚನೆಗಳನ್ನು ಪಾರಂಪರಿಕ ಸೊತ್ತು ಎಂಬಂತೆ ನಿರ್ವಹಣೆ ಮಾಡಬೇಕೇ ವಿನಾ ಪ್ರತಿನಿತ್ಯದ ಬಳಕೆಗೆ ಮುಕ್ತವಾಗಿಸಬಾರದು.




ಮೊರ್ಬಿ ದುರಂತಕ್ಕೆ ಸಂಬಂಧಿಸಿದಂತೆ ಕೈಗೊಳ್ಳುವ ಕ್ರಮವು ದೇಶದ ಇತರೆಡೆಯ ಸಂಸ್ಥೆಗಳಿಗೂ ಪಾಠವಾಗಬೇಕು

ಸುಮಾರು 150 ವರ್ಷಗಳಷ್ಟು ಹಳೆಯದಾದ ಈ ಸೇತುವೆಯನ್ನು ದುರಸ್ತಿಗಾಗಿ ಏಳು ತಿಂಗಳು ಮುಚ್ಚಲಾಗಿತ್ತು. ವಾರದ ಹಿಂದಷ್ಟೇ ಜನರ ಬಳಕೆಗೆ ಮುಕ್ತಗೊಳಿಸಲಾಗಿತ್ತು. ಈ ಸೇತುವೆಯನ್ನು ದುರಸ್ತಿ ಮಾಡಿದ ಖಾಸಗಿ ಸಂಸ್ಥೆಗೆ ಸೇತುವೆ ದುರಸ್ತಿಯ ಪರಿಣತಿಯೇ ಇಲ್ಲ. ಅದಷ್ಟೇ ಅಲ್ಲದೆ, ಟೆಂಡರ್ ಕೂಡ ಕರೆಯದೆ ಈ ಸಂಸ್ಥೆಗೆ ಗುತ್ತಿಗೆ ನೀಡಲಾಗಿತ್ತು. ದುರಸ್ತಿಯಾದ ಬಳಿಕ ಸೇತುವೆಯು ಬಳಕೆಗೆ ಯೋಗ್ಯವಾಗಿದೆ ಎಂಬ ಪ್ರಮಾಣಪತ್ರವನ್ನು ಸ್ಥಳೀಯಾಡಳಿತ ಸಂಸ್ಥೆಯು ನೀಡಿಲ್ಲ, ಸೇತುವೆಯ ಸುರಕ್ಷತೆಯ ಪರಿಶೀಲನೆಯೂ ನಡೆದಿಲ್ಲ. ನೂರು ಜನರನ್ನು ತಾಳಿಕೊಳ್ಳುವ ಶಕ್ತಿಯಷ್ಟೇ ಈ ಸೇತುವೆಗೆ ಇದೆ. ಆದರೆ, ಸೇತುವೆಯ ಮೇಲೆ ಹೋಗುವುದಕ್ಕಾಗಿ ನೂರಾರು ಜನರಿಗೆ ಟಿಕೆಟ್ ನೀಡಲಾಗಿತ್ತು. ಸೇತುವೆಯನ್ನು ಜನರ ಬಳಕೆಗೆ ಮುಕ್ತಗೊಳಿಸಿರುವ ಮಾಹಿತಿಯೇ ತನಗೆ ಇರಲಿಲ್ಲ ಎಂದು ಹೇಳುವ ಮೂಲಕ ಸ್ಥಳೀಯ ನಗರಪಾಲಿಕೆಯು ಜಾರಿಕೊಳ್ಳುವುದು ಸಾಧ್ಯವಿಲ್ಲ. ಸುರಕ್ಷತೆಯ ಪರಿಶೀಲನೆ ನಡೆಸದೆಯೇ, ಜನರ ಬಳಕೆಗೆ ಅವಕಾಶ ನೀಡಬಹುದು ಎಂಬ ಪ್ರಮಾಣಪತ್ರ ಇಲ್ಲದೆಯೇ ಸೇತುವೆಯನ್ನು ತೆರೆದದ್ದು ಏಕೆ? ಸುರಕ್ಷತೆಯ ಪರಿಶೀಲನೆ ನಡೆಸದೆ ಸೇತುವೆಯನ್ನು ಬಳಕೆಗೆ ಮುಕ್ತಗೊಳಿಸಿದ್ದೇ ಈಗ ಆಗಿರುವ ದುರಂತಕ್ಕೆ ಕಾರಣ. ಜನರು ಸೇತುವೆಯ ಸ್ಥಳಕ್ಕೆ ದೊಡ್ಡ ಸಂಖ್ಯೆಯಲ್ಲಿ ಬರುತ್ತಿದ್ದಾರೆ ಎಂಬ ಮಾಹಿತಿ ನಗರಪಾಲಿಕೆಗೆ ಇರಬೇಕಿತ್ತು. ಜನರನ್ನು ನಿಯಂತ್ರಿಸಲು ಪೊಲೀಸರನ್ನು ನಿಯೋಜಿಸಬೇಕಿತ್ತು ಮತ್ತು ಇತರ ವ್ಯವಸ್ಥೆಗಳನ್ನು ಮಾಡಬೇಕಿತ್ತು.

ಜನರ ಗುಂಪು ನಿರ್ವಹಣೆ ಜಗತ್ತಿನ ವಿವಿಧ ಭಾಗಗಳಲ್ಲಿ ಸ್ಥಳೀಯಾಡಳಿತ ಸಂಸ್ಥೆಗಳಿಗೆ ದೊಡ್ಡ ಸವಾಲಾಗುತ್ತಿದೆ. ಸೋಲ್‌ನಲ್ಲಿ ಕಳೆದ ವಾರವಷ್ಟೇ ಕಾಲ್ತುಳಿತವಾಗಿ 150 ಜನರು ಮೃತಪಟ್ಟಿರುವುದು ಇದಕ್ಕೆ ಉದಾಹರಣೆಯಾಗಿದೆ. ಆದರೆ, ಮೊರ್ಬಿಯ ದುರಂತಕ್ಕೆ ಕಾರಣ ಜನರ ಗುಂಪಿನ ನಿರ್ವಹಣೆ ಸರಿಯಾಗಿ ಆಗಿಲ್ಲ ಎಂಬುದಷ್ಟೇ ಅಲ್ಲ. ಸಂಬಂಧಿಸಿದ ಎಲ್ಲ ವಿಷಯಗಳ ನಿರ್ವಹಣೆಯಲ್ಲಿಯೂ ವಿಫಲವಾಗಿರುವುದು ಇದಕ್ಕೆ ಕಾರಣ. ದುರಂತದ ಬಗ್ಗೆ ಸಮಗ್ರವಾದ, ನಿಷ್ಪಕ್ಷಪಾತವಾದ, ದಕ್ಷವಾದ ತನಿಖೆ ನಡೆಯಬೇಕು. ತಮ್ಮ ಕರ್ತವ್ಯದಲ್ಲಿ ಲೋಪ ಎಸಗಿದವರು ಯಾರು ಎಂಬುದನ್ನು ಪತ್ತೆ ಮಾಡಿ, ಅವರ ಮೇಲೆ ಹೊಣೆಗಾರಿಕೆ ಹೊರಿಸಬೇಕು. ಗುಜರಾತ್ ವಿಧಾನಸಭೆಗೆ ಇನ್ನು ಕೆಲವೇ ದಿನಗಳಲ್ಲಿ ಚುನಾವಣೆ ಘೋಷಣೆ ಆಗಲಿದೆ. ಹಾಗಾಗಿ, ಲೋಪಗಳು ಮತ್ತು ವೈಫಲ್ಯಗಳನ್ನು ಮುಚ್ಚಿಡುವ ಪ್ರಯತ್ನ ನಡೆಯಬಹುದು ಎಂಬುದನ್ನು ಅಲ್ಲಗಳೆಯಲಾಗದು. ಆದರೆ, ಹಾಗೆ ಮಾಡುವುದು ಪ್ರಮಾದವಾಗಲಿದೆ. ಲೋಪ ಮತ್ತು ವೈಫಲ್ಯಗಳನ್ನು ಮುಚ್ಚಿಟ್ಟರೆ ತಪ್ಪಿತಸ್ಥರು ತಪ್ಪಿಸಿಕೊಳ್ಳುತ್ತಾರೆ. ಈಗಾಗಲೇ ಆಗಿರುವ ನೋವು ಸಾಲದು ಎಂಬಂತೆ, ಪ್ರಧಾನಿ ನರೇಂದ್ರ ಮೋದಿ ಅವರು ಭೇಟಿ ನೀಡುತ್ತಿದ್ದಾರೆ ಎಂಬ ಕಾರಣಕ್ಕೆ ಆಸ್ಪತ್ರೆಯನ್ನು ಸ್ವಚ್ಛಗೊಳಿಸಿ, ಬಣ್ಣ ಬಳಿದದ್ದು ಸಂತ್ರಸ್ತರಿಗೆ ಮತ್ತು ಅವರ ಕುಟುಂಬದವರಿಗೆ ಮಾಡಿದ ಅವಮಾನ. ಈ ದುರಂತಕ್ಕೆ ಸಂಬಂಧಿಸಿ ಕೈಗೊಳ್ಳುವ ಕ್ರಮವು ಗುಜರಾತ್‌ನ ಸಂಸ್ಥೆಗಳಿಗೆ ಮಾತ್ರವಲ್ಲದೆ ದೇಶದ ಇತರೆಡೆಯ ಸಂಸ್ಥೆಗಳಿಗೂ ಪಾಠವಾಗಬೇಕು. ಈ ಮೂಲಕ ಸೇತುವೆಗಳು, ಅಣೆಕಟ್ಟೆಗಳು ಮತ್ತು ಇತರ ಸಾರ್ವಜನಿಕ ಕಟ್ಟಡಗಳ ನಿರ್ವಹಣೆಯು ಸಮರ್ಪಕವಾಗುವಂತೆ ಖಾತರಿಪಡಿಸಿಕೊಳ್ಳಬೇಕು. ದೇಶದಲ್ಲಿರುವ ಇಂತಹ ಹಲವಾರು ರಚನೆಗಳು ದುರಂತಕ್ಕೆ ಆಹ್ವಾನ ನೀಡುವ ರೀತಿಯಲ್ಲಿ ಇವೆ ಎಂಬುದು ಕಳವಳದ ವಿಚಾರವಾಗಿದೆ.

ಎಲ್ಲಾ ನಮ್ಮವರಿಂದ, ನಮ್ಮವರಿಗಾಗಿ, ನಮ್ಮವರಿಗೋಸ್ಕರ!

ಪ್ರಜಾಪ್ರಭುತ್ವ: ಅಸ್ಮಿತೆಯ ಮಿತಿ



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ರಿಷಿ ಸುನಕ್ ಅವರು ಬ್ರಿಟನ್ನಿನ ಪ್ರಧಾನಿಯಾಗಿ ಆ ದೇಶದ ಉನ್ನತ ಹುದ್ದೆಗೇರಿದಾಗ ಹಲವು ಬಗೆಯ ಪ್ರತಿಕ್ರಿಯೆಗಳು ಬಂದವು. ರಿಷಿ ಸುನಕ್ ಅವರ ಪೂರ್ವಜರು ಭಾರತ ಮೂಲದವರು ಎಂಬ ಕಾರಣದಿಂದ ಒಂದು ಬಗೆಯ ಸಂಭ್ರಮ ವ್ಯಕ್ತವಾಯಿತು. ಚರ್ಚಿಲ್ ಅವರು ಭಾರತೀಯರ ಕುರಿತಾಗಿ ಹೇಳಿದ್ದ ಮಾತನ್ನು ನೆನಪಿಸಿ, ಇದೀಗ ಚರ್ಚಿಲ್ ಅವರ ಕನ್ಸರ್ವೇಟಿವ್ ಪಕ್ಷಕ್ಕೆ ನಾಯಕತ್ವ ವಹಿಸಲು ಭಾರತ ಮೂಲದ ವ್ಯಕ್ತಿಯೇ ಬೇಕಾಯಿತು ಎಂಬ ಮೂದಲಿಕೆಯೂ ಕೇಳಿಬಂತು.

ಕಾಂಗ್ರೆಸ್ ಮುಖಂಡ ಪಿ.ಚಿದಂಬರಂ 'ಅಮೆರಿಕ ಮತ್ತು ಇಂಗ್ಲೆಂಡಿನ ಜನ ಬಹುಸಂಖ್ಯಾತರಲ್ಲದ ನಾಗರಿಕರನ್ನು ಸರ್ಕಾರದ ಉನ್ನತ ಹುದ್ದೆಗೆ ಆಯ್ಕೆ ಮಾಡಿದ್ದಾರೆ. ಭಾರತದಲ್ಲಿ ಬಹುಸಂಖ್ಯಾತವಾದವನ್ನು ಅನುಸರಿಸುವ ಪಕ್ಷಗಳು ಇದರಿಂದ ಪಾಠ ಕಲಿಯಬೇಕು' ಎಂದರು. ಶಶಿ ತರೂರ್ ಅವರು 'ಬ್ರಿಟನ್ ಜನ ಅಲ್ಪಸಂಖ್ಯಾತ ಸಮುದಾಯದ ಸದಸ್ಯನನ್ನು ಅತ್ಯಂತ ಶಕ್ತಿಶಾಲಿ ಕಚೇರಿಯಲ್ಲಿ ಇರಿಸಿದ್ದಾರೆ. ಭಾರತದಲ್ಲಿ ಇದು ಸಂಭವಿಸಲು ಸಾಧ್ಯವೇ ಎಂದು ಪ್ರಾಮಾಣಿಕವಾಗಿ ಪ್ರಶ್ನಿಸಿಕೊಳ್ಳಬೇಕಿದೆ' ಎಂದು ಟ್ವೀಟ್ ಮಾಡಿದರು. ಚಿದಂಬರಂ ಮತ್ತು ತರೂರ್ ಅವರ ಮಾತು ಚರ್ಚೆಗೆ ಗ್ರಾಸ ಒದಗಿಸಿತು. ಸೋನಿಯಾ ಗಾಂಧಿ, ಮನಮೋಹನ್ ಸಿಂಗ್, ನರೇಂದ್ರ ಮೋದಿ ಅವರ ಹೆಸರು ಪ್ರಶ್ನೆ, ಪ್ರತಿಪ್ರಶ್ನೆ, ಸಮರ್ಥನೆಗಳಲ್ಲಿ ಬಳಕೆಯಾಯಿತು.

ಹಾಗಾದರೆ ನಿಜಕ್ಕೂ ಅಮೆರಿಕ ಮತ್ತು ಇಂಗ್ಲೆಂಡಿನ ಪ್ರಜಾಪ್ರಭುತ್ವ ವ್ಯವಸ್ಥೆ ಪ್ರಬುದ್ಧ ಸ್ಥಿತಿಗೆ ತಲುಪಿದೆಯೇ? ಯಾವುದೇ ವ್ಯಕ್ತಿ ರಾಜಕೀಯವಾಗಿ ಉನ್ನತ ಸ್ಥಾನಕ್ಕೇರಲು ಅಡ್ಡಿಯಾಗಬಲ್ಲ ವ್ಯಕ್ತ ಅಥವಾ ಅವ್ಯಕ್ತ ಚಾವಣಿಗಳು ಅಲ್ಲಿ ಇಲ್ಲವೇ? ಬಹುಸಂಖ್ಯಾತವಾದ ಭಾರತಕ್ಕೆ ಸೀಮಿತವೇ?

ರಿಷಿ ಅವರು ಇಂಗ್ಲೆಂಡಿನ ಪ್ರಧಾನಿಯಾಗಿರುವ ಈ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ನಾವು ನೆನಪು ಮಾಡಿಕೊಳ್ಳಬೇಕು. ಮೊದಲನೆಯದು, ಸಾರ್ವತ್ರಿಕ ಚುನಾವಣೆಯ ಮೂಲಕ ರಿಷಿ ಪ್ರಧಾನಿ ಆಗಿ ಆಯ್ಕೆಯಾಗಿದ್ದಲ್ಲ ಎನ್ನುವುದು. ಎರಡನೆಯದು, ಏಳು ವಾರಗಳ ಹಿಂದೆ ಪಕ್ಷದ ನಾಯಕತ್ವಕ್ಕೆ ನಡೆದ ಚುನಾವಣೆಯಲ್ಲಿ ಅವರು ಸೋತಿದ್ದರು ಎನ್ನುವುದು. ಮೂರನೆಯದು, ಈ ಬಾರಿಯ ಚುನಾವಣೆಯಲ್ಲಿ ಪ್ರತಿಸ್ಪರ್ಧಿಯೇ ಇಲ್ಲದ್ದರಿಂದ ಚುನಾವಣಾ ಪ್ರಕ್ರಿಯೆಯು ಪಕ್ಷದ ಸಾಮಾನ್ಯ ಸದಸ್ಯರು ಮತ ಚಲಾಯಿಸುವ ಹಂತಕ್ಕೆ ಹೋಗಲಿಲ್ಲ ಎನ್ನುವುದು.

ಕನ್ಸರ್ವೇಟಿವ್ ಪಕ್ಷ ತನ್ನ ನಾಯಕನನ್ನು ಆರಿಸುವ ಪ್ರಕ್ರಿಯೆ ಮೂರ್ನಾಲ್ಕು ಹಂತಗಳನ್ನು ಒಳಗೊಂಡಿರುತ್ತದೆ. ಮೊದಲು ಆಕಾಂಕ್ಷಿಗಳು ಕನಿಷ್ಠ 100 ಸಂಸದರ ಬೆಂಬಲ ಗಳಿಸಿಕೊಂಡು ಸ್ಪರ್ಧೆಗೆ ಇಳಿಯಬೇಕಾಗುತ್ತದೆ. ಹಾಗೆ ಕಣದಲ್ಲಿರುವ ವ್ಯಕ್ತಿಗಳನ್ನು ಮತ್ತೊಮ್ಮೆ ತುಲನೆ ಮಾಡಿ ಸಂಸದರು ಬೆಂಬಲ ಸೂಚಿಸುತ್ತಾರೆ. ಕನಿಷ್ಠ ಮತ ಪಡೆದ ಅಭ್ಯರ್ಥಿ ಸ್ಪರ್ಧೆಯಿಂದ ಹೊರಬೀಳುತ್ತಾರೆ. ಈ ಪ್ರಕ್ರಿಯೆ, ಇಬ್ಬರು ಅಭ್ಯರ್ಥಿಗಳು ಕಣದಲ್ಲಿ ಉಳಿಯುವವರೆಗೂ ನಡೆಯುತ್ತದೆ. ಕೊನೆಯದಾಗಿ ಪಕ್ಷದ ಸಾಮಾನ್ಯ ಸದಸ್ಯರು ಮತ ಚಲಾಯಿಸುತ್ತಾರೆ. ಹೆಚ್ಚು ಮತ ಪಡೆದವರು ನಾಯಕರಾಗಿ ಹೊರಹೊಮ್ಮುತ್ತಾರೆ.

ಬೋರಿಸ್ ಜಾನ್ಸನ್ ಅವರು ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ಇತ್ತಾಗ ಈ ಪ್ರಕ್ರಿಯೆ ಪೂರ್ಣವಾಗಿ ನಡೆದಿತ್ತು. ಆಗ ರಿಷಿ ಸುನಕ್ ಅವರು ಲಿಜ್ ಟ್ರಸ್ ಎದುರು ಸೋತಿದ್ದರು. ಕನ್ಸರ್ವೇಟಿವ್ ಪಕ್ಷದ ಸದಸ್ಯರ ಪೈಕಿ ಸಂಪ್ರದಾಯವಾದಿ ಬಿಳಿಯರು ಹೆಚ್ಚಿರುವುದರಿಂದ ರಿಷಿ ಅವರು ಹೆಚ್ಚಿನ ಮತ ಪಡೆಯಲು ಸಾಧ್ಯವಾಗಲಿಲ್ಲ ಎಂಬ ವಿಶ್ಲೇಷಣೆ ಬಂದಿತ್ತು. ಟ್ರಸ್ ತಮ್ಮ ಅಲ್ಪ ಅವಧಿಯಲ್ಲಿ ಅರ್ಥವ್ಯವಸ್ಥೆಯನ್ನು ಮತ್ತಷ್ಟು ಹದಗೆಡಿಸಿದ್ದರಿಂದ, ತಳ ಒಡೆದ ದೋಣಿಗೆ ಅಂಬಿಗನಾಗಲು ಯಾರೂ ಸಿದ್ಧರಿರಲಿಲ್ಲವಾದ ಕಾರಣ ಈ ಬಾರಿ ನಾಯಕನ ಆಯ್ಕೆ ಮೊದಲ ಹಂತಕ್ಕಷ್ಟೇ ಸೀಮಿತವಾಯಿತು. ರಿಷಿ ಅವಿರೋಧವಾಗಿ ಆಯ್ಕೆಯಾದರು. ಈ ವಿಷಮ ಸಂದರ್ಭದಲ್ಲಿ ಸಾರ್ವತ್ರಿಕ ಚುನಾವಣೆಗೆ ಹೋಗಲು ಕನ್ಸರ್ವೇಟಿವ್ ಪಕ್ಷ ಸಿದ್ಧವಿರಲಿಲ್ಲ ಎಂಬುದು ರಿಷಿ ಆಯ್ಕೆಗೆ ಮತ್ತೊಂದು ಕಾರಣ.

ಹಾಗಾದರೆ ರಿಷಿ ಅವರು ಬ್ರಿಟನ್ ಪ್ರಧಾನಿಯಾದದ್ದನ್ನು ಸಂಭ್ರಮಿಸಲು ಕಾರಣಗಳಿಲ್ಲವೇ? ರಿಷಿ ಇಂಗ್ಲೆಂಡಿನಲ್ಲಿ ಹುಟ್ಟಿ ಬೆಳೆದವರು. ಅವರ ಅಜ್ಜ ಅವಿಭಜಿತ ಭಾರತ ಮೂಲದವರು ಎಂದು ನಾವು ಖುಷಿಪಡುವುದಕ್ಕಿಂತ ಅವರು ಎನ್.ಆರ್.ನಾರಾಯಣಮೂರ್ತಿ ಅವರ ಅಳಿಯ ಎಂದು ಸಂತಸಪಡುವುದರಲ್ಲಿ ಹೆಚ್ಚು ಅರ್ಥವಿದೆ. ಜೊತೆಗೆ ಬಿಳಿಯರು ಮತ್ತು ಚರ್ಚ್ ಹೆಚ್ಚಿನ ಹಿಡಿತ ಹೊಂದಿರುವ ರಾಜಕೀಯ ವ್ಯವಸ್ಥೆಯಲ್ಲಿ, ಬಿಳಿಯರು ಇತರ ಜನಾಂಗಗಳಿಗಿಂತ ಶ್ರೇಷ್ಠರು ಎಂಬ ಭಾವನೆ ಬೇರೂರಿದ್ದ ದೇಶದಲ್ಲಿ ಬಿಳಿಯ ಜನಾಂಗಕ್ಕೆ ಸೇರದ, ಹಿಂದೂ ಆಚರಣೆಗಳೊಂದಿಗೆ ಗುರುತಿಸಿಕೊಂಡ ರಿಷಿ ಪ್ರಧಾನಿಯಾಗಿದ್ದಾರೆ ಎನ್ನುವುದನ್ನು ಪ್ರಶಂಸಿಸಲೇಬೇಕು.

ಒಂದೊಮ್ಮೆ ಆರ್ಥಿಕವಾಗಿ ಕುಗ್ಗಿರುವ ಬ್ರಿಟನ್ ಅನ್ನು ರಿಷಿ ಅವರು ಹಿಡಿದು ನಿಲ್ಲಿಸಲು ಸಾಧ್ಯವಾದರೆ, ಆ ಮೂಲಕ ಜನಮನ್ನಣೆಯನ್ನು ಗಳಿಸಿಕೊಂಡು, ಪಕ್ಷದೊಳಗೆ ಒಗ್ಗಟ್ಟನ್ನು ಕಾಯ್ದುಕೊಂಡು ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಕನ್ಸರ್ವೇಟಿವ್ ಪಕ್ಷದ ನಾಯಕನಾಗಿ ಹೊರಹೊಮ್ಮಿ ಚುನಾವಣೆ ಗೆದ್ದು ಪ್ರಧಾನಿಯಾದರೆ, ಆಗ ಬ್ರಿಟನ್ ಪ್ರಜಾಪ್ರಭುತ್ವ ಪ್ರಬುದ್ಧತೆಯನ್ನು ಸಾಧಿಸಿದೆ ಎನ್ನಬಹುದು.

ಅಮೆರಿಕದ ವಿಷಯ ನೋಡುವುದಾದರೆ, ಅಲ್ಲೂ ಅಭ್ಯರ್ಥಿಯ ವರ್ಣ, ಲಿಂಗ ಮತ್ತು ಧಾರ್ಮಿಕ ಶ್ರದ್ಧೆಯು ಚುನಾವಣೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಜನ್ಮತಃ ಅಮೆರಿಕದ ಪ್ರಜೆಯಾದವರು ಮಾತ್ರ ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸಬಹುದು ಎಂಬ ನಿಬಂಧನೆ ಆ ಹುದ್ದೆಗಿದೆ. ಪ್ರಾಟೆಸ್ಟಂಟ್ ಕ್ರಿಶ್ಚಿಯನ್ನರು ಹೆಚ್ಚಿರುವ ಅಮೆರಿಕದಲ್ಲಿ 46 ಅಧ್ಯಕ್ಷರ ಪೈಕಿ ಇಬ್ಬರು ಮಾತ್ರ ಕ್ಯಾಥೊಲಿಕ್ ಕ್ರಿಶ್ಚಿಯನ್ ಪಂಗಡಕ್ಕೆ ಸೇರಿದವರು. ಕ್ರಿಶ್ಚಿಯನ್ ಅಲ್ಲದವರು ಕನಸಿನಲ್ಲಷ್ಟೇ ಅಧ್ಯಕ್ಷರಾಗಬಹುದು ಎಂಬ ಪರಿಸ್ಥಿತಿಯಿದೆ. 1961ರ ಅಧ್ಯಕ್ಷೀಯ ಚುನಾವಣೆಯಲ್ಲಿ ಜಾನ್ ಎಫ್ ಕೆನಡಿ ಗೆದ್ದಾಗ, ಪ್ರಥಮ ಕ್ಯಾಥೊಲಿಕ್ ಅಧ್ಯಕ್ಷ ಎನಿಸಿಕೊಂಡರು. 2008ರ ಅಧ್ಯಕ್ಷೀಯ ಚುನಾವಣೆಯಲ್ಲಿ ಆಫ್ರಿಕನ್ ಅಮೆರಿಕನ್ ಸಮುದಾಯದ ಬರಾಕ್ ಒಬಾಮ ಗೆದ್ದಾಗ ಅದು ಮತ್ತೊಂದು ಮೊದಲಾಯಿತು. 2016ರ ಚುನಾವಣೆಯಲ್ಲಿ ಹಿಲರಿ ಕ್ಲಿಂಟನ್ ಅವರು ಗೆದ್ದಿದ್ದರೆ, ಮಹಿಳೆಯೊಬ್ಬರು ಅಧ್ಯಕ್ಷರಾಗುವ ಮೂಲಕ ಮತ್ತೊಮ್ಮೆ ಅಗೋಚರ ಚಾವಣಿ (ಗ್ಲಾಸ್ ಸೀಲಿಂಗ್) ಪುಡಿಯಾಗುತ್ತಿತ್ತು. ಆದರೆ ಹಾಗಾಗಲಿಲ್ಲ.



ಈಗ ಕಮಲಾ ಹ್ಯಾರಿಸ್ ಉಪಾಧ್ಯಕ್ಷರಾಗಿದ್ದಾರೆ ನಿಜ. ಅದು ಸಾಧ್ಯವಾಗಿದ್ದು ಬೈಡನ್ ಅವರು ತಮ್ಮ ಸಹಸ್ಪರ್ಧಿಯಾಗಿ ಕಮಲಾ ಅವರನ್ನು ಆಯ್ಕೆ ಮಾಡಿಕೊಂಡಿದ್ದರಿಂದ. ಮುಂದಿನ ಚುನಾವಣೆಯಲ್ಲಿ ಕಮಲಾ ಅವರೇ ಅಧ್ಯಕ್ಷೀಯ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಗೆದ್ದು ಶ್ವೇತಭವನ ಹೊಕ್ಕರೆ ಅಮೆರಿಕದ ಪ್ರಜಾಪ್ರಭುತ್ವದ ಪಕ್ವತೆಗೆ ಶಹಬಾಸ್ ಎನ್ನಬಹುದು.

ಭಾರತದ ವಿಷಯ ನೋಡುವುದಾದರೆ, ಭಾರತದ ಸಾಮಾಜಿಕ ಸಂರಚನೆಯು ಬ್ರಿಟನ್ ಮತ್ತು ಅಮೆರಿಕಕ್ಕಿಂತ ಭಿನ್ನವಾಗಿದೆ. ಹಲವು ಮತ, ಭಾಷೆ, ಸಂಸ್ಕೃತಿ, ಜಾತಿ, ಉಪಜಾತಿಗಳು ಭಾರತದ ಒಡಲು ತುಂಬಿವೆ. ಈ ವೈವಿಧ್ಯವು ನಮಗೆ ಭಿನ್ನ ಗುರುತುಗಳನ್ನು ನೀಡಿದೆ. ಮನುಷ್ಯ ಸ್ವಭಾವತಃ ತನ್ನ ಗುರುತಿನೊಂದಿಗೆ ಬೆಸೆದುಕೊಳ್ಳುತ್ತಾನೆ, ಆಕರ್ಷಿತನಾಗುತ್ತಾನೆ. ಹಾಗಾಗಿ ಈ ಗುರುತುಗಳು ಚುನಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಎಲ್ಲ ರಾಜಕೀಯ ಪಕ್ಷಗಳೂ ಈ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡೇ ಗೆಲುವಿಗೆ ತಂತ್ರ ರೂಪಿಸುತ್ತವೆ. ಆ ಮೂಲಕ ಬಹುಸಂಖ್ಯಾತವಾದವನ್ನು ಪೋಷಿಸುತ್ತವೆ. ಹಾಗಾಗಿಯೇ ಸಿಖ್ ಸಮುದಾಯದ ಮನಮೋಹನ್ ಸಿಂಗ್ ಅವರು ರಾಜ್ಯಸಭೆಯ ಮೂಲಕ ಒಳಬಂದು ಪ್ರಧಾನಿಯಾಗಬೇಕಾಯಿತು. ಯಾವ ಪಕ್ಷಕ್ಕೂ ಬಹುಮತವಿಲ್ಲದ ಅತಂತ್ರ ಸ್ಥಿತಿ ನಿರ್ಮಾಣವಾಗಿದ್ದರಿಂದಷ್ಟೇ ಕನ್ನಡಿಗ ದೇವೇಗೌಡರು ಅಂದು ಪ್ರಧಾನಿಯಾಗಲು ಸಾಧ್ಯವಾಯಿತು. ಹಿಂದಿ ಭಾಷಿಕ ಪ್ರಾಂತ್ಯಗಳು ದಕ್ಷಿಣದ ಹಿಂದಿಯೇತರ ಮುಂದಾಳುವನ್ನು ನಾಯಕನನ್ನಾಗಿ ಒಪ್ಪುವ ಸ್ಥಿತಿ ಇಂದಿಗೂ ಇಲ್ಲ. ದೆಹಲಿಯ ವಿಷಯ ಬಿಡಿ, ಒಂದು ಜಾತಿಯ ಉಪ ಪಂಗಡದವರು ಹೆಚ್ಚಿರುವ ಗ್ರಾಮದಲ್ಲಿ ಅದೇ ಜಾತಿಯ ಮತ್ತೊಂದು ಪಂಗಡದ ವ್ಯಕ್ತಿ ಚುನಾಯಿತನಾಗುವುದು ನಮ್ಮಲ್ಲಿ ಸುಲಭವಿಲ್ಲ.

ಲಿಂಕನ್ ಅವರು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜನರಿಂದ, ಜನರಿಗಾಗಿ, ಜನರಿಗೋಸ್ಕರ ಎಂದು ವ್ಯಾಖ್ಯಾನಿಸಿದ್ದರು. ಯಾರು ಬೇಕಾದರೂ ಯಾವುದೇ ಉನ್ನತ ಹುದ್ದೆಯನ್ನು ಅಲಂಕರಿಸಬಹುದಾದ ಮುಕ್ತ ವ್ಯವಸ್ಥೆ ಎಂದು ಕರೆದಿದ್ದರು. ಆದರೆ ಅದು ನಮ್ಮವರಿಂದ, ನಮ್ಮವರಿಗಾಗಿ, ನಮ್ಮವರಿಗೋಸ್ಕರ ಎನ್ನುವಷ್ಟು ಬದಲಾಗಿದೆ. ಅಸ್ಮಿತೆಯ ಸುಳಿಯೊಳಗೆ ಬಂದಿಯಾಗಿರುವ ನಾವು ಪ್ರಜಾಪ್ರಭುತ್ವದ ಆಶಯ ಮತ್ತು ಆದರ್ಶಗಳಿಂದ ಬಹಳ ದೂರ ಇದ್ದೇವೆ. ಅಮೆರಿಕ ಮತ್ತು ಬ್ರಿಟನ್ನಿನ ಜನ ನಮಗಿಂತ ಒಂದೆರಡು ಹೆಜ್ಜೆ ಮುಂದಿರಬಹುದು ಅಷ್ಟೇ.

ಚುರುಮುರಿ



ಸೂಕ್ತ ಸೂಕ್ತಿ

• ನಾರಾಯಣ ರಾಯಚೂರ್

'ಹೆಣ್ಣು ಕೊಟ್ಟ ಮಾವ, ಕಣ್ಣು ಕೊಟ್ಟ ದೇವ'–ರೀ, ದಿನದ ಸೂಕ್ತಿ ನೋಡಿದಿರಾ?... ಮಾಲಿನಿ ಅಲ್ಲಿಂದ್ಲೇ ಕೇಳಿದಳು.

'ತುಂಬಾ ಸೂಕ್ತವಾದ ಸೂಕ್ತಿಯೇ... ನಮ್ಮ ಬ್ರಿಟನ್ ಪ್ರಧಾನಿನೂ ಹೇಳೀದಾರಲ್ಲ? ನನಗೆ ನನ್ನ ಮಾವನೇ ಸ್ಫೂರ್ತಿ, ಈ ಜವಾಬ್ದಾರಿ ಒಪ್ಪಿಕೊಳ್ಳೋಕೆ ಅವರ ಪ್ರೇರಣೆ ನನಗೆ ಬಹಳಷ್ಟು ಸಹಕಾರಿಯಾಗಿದೆ ಅಂತ, ನೀನು ನೋಡಲಿಲ್ಲವಾ?'

'ಮಾವನ ಬೆಲೆ ಏನು ಅಂತ ಅವರಂಥವರೇ ಅರ್ಥಮಾಡಿಕೊಳ್ಳೋದು, ನಿಮ್ಮಂಥವರಿಗೇನು ಗೊತ್ತು?'

'ಬರೀ ಉಪದೇಶ ಕೊಡೋ ಮಾವಂದಿರು ಬೇಕಾದಷ್ಟು; ಉಪದೇಶವನ್ನು ಧಾರಾಳವಾಗಿ ಕೊಟ್ಟಷ್ಟು ಬೇರೇನನ್ನೂ ಕೊಡಲಾಗದು! ಉಪದೇಶದ ಜೊತೆಗೆ ಕೋಟಿ ಕೋಟಿ ಷೇರು, ಹೈಟೆಕ್ ಕಾರು ಕೊಡೋ ಮಾವಂದಿರಿಗೆ ಇರೋ ಬೆಲೆಯೇ ಬೇರೆ'.

'ಸಾಧಿಸೋ ಛಲ, ಮಹತ್ವಾಕಾಂಕ್ಷೆ ಇದ್ದರೆ ತಾನೇ?! ನಿಮ್ಮಂಥ ಸೋಮಾರಿ...'

'ಸೋಮಾರಿ ಅಲ್ಲ ಕಣೇ, ಸ್ವಾಭಿಮಾನಿ. ಅಲ್ಲದೆ ನಮ್ಮ ಪಾಲಿಟಿಕ್ಸ್‌ಗೂ ಬ್ರಿಟನ್ ಪಾಲಿಟಿಕ್ಸ್‌ಗೂ ಟನ್‌ಗಟ್ಟಲೇ ವ್ಯತ್ಯಾಸ. ಕೈಲಾಗಲಿಲ್ಲ ಅಂತ 45 ದಿವಸದಲ್ಲೇ ರಾಜೀನಾಮೆ ಕೊಟ್ಟು, ಬೇರೆಯವರಿಗೆ ಪಿ.ಎಂ ಸೀಟು ಬಿಟ್ಟು ಕೊಡ್ತಾರಲ್ಲಿ. ನಮ್ಮಲ್ಲಿ? ಪಂಚಾಯಿತಿ ಮೆಂಬರ್‌ಶಿಪ್ ಬಿಡೋಕೂ ಬೊಬ್ಬೆ ಹೊಡೀಬೇಕು, ಹೊಡೆದ್ರೂ ಕೇಳೊಲ್ಲ'.

'ಅದಕ್ಕೂ ಒಂದು ಕಾರಣ ಇದೇ ಕಣ್ರೇ... ಅದು ಪುಟ್ಟ ದೇಶ, ಕಡಿಮೆ ಜನ. ನಮ್ಮದೋ? ದೊಡ್ಡ ದೇಶ, ನೂರ ನಲವತ್ತು ಕೋಟಿ ಜನ. ಸಹಜವಾಗಿ ನಮ್ಮಲ್ಲಿ ಆಕಾಂಕ್ಷಿಗಳು ಜಾಸ್ತಿ. ಡೆಲ್ಲಿ ಪಿ.ಎಂ. (ಪ್ರೈಮ್ ಮಿನಿಸ್ಟರ್) ಏನು? ಹಳ್ಳಿ ಪಿ.ಎಂ (ಪಂಚಾಯಿತಿ ಮೆಂಬರ್) ಆಗೋಕೂ ಸಾವಿರಾರು ಜನ ತುದಿಗಾಲ ಮೇಲಿರ್ತಾರೆ!' ಮಾಲಿನಿ ತರ್ಕಬದ್ಧ ರಾಜಕೀಯ ವಿಶ್ಲೇಷಣೆ ಮಾಡಿದಳು.

'ಒಪ್ಪಿದೆ ಕಣೆ, ಒಪ್ಪಿದೆ. ಹೆಣ್ಣು ಕೊಟ್ಟ ಮಾವ ಕಣ್ ತೆರೆಸದಿದ್ದರೂ ಅವರ ಪ್ರಿಯ ಪುತ್ರಿಯಾದ ನೀನು ನಿಜಕ್ಕೂ ನನ್ನ ಕಣ್ ತೆರೆಸಿದೆ. ನೀನು ಮಾಲಿನಿ ಅಲ್ಲಾ ಕಣೇ, ವಿಶಾ...ಲಾಕ್ಷಿ...'

'ಹ್ಞಾಂ! ಯಾರ್ರೀ...ಅದೂ...?!'

ದಿನದ ಟ್ವೀಟ್

ನುಡಿಯಿಂದ ಏಳಿಗೆ



ಜಾತಿ, ಧರ್ಮ, ಪಂಗಡ, ಪ್ರಾಂತ್ಯ, ನುಡಿ ಹೀಗೆ ಹಲ ಗುರುತುಗಳಿವೆ. ಇವುಗಳಲ್ಲಿ ಯಾವುದನ್ನು ಬಳಸಿ, 21ನೇ ಶತಮಾನದಲ್ಲಿ ಅತೀ ಹೆಚ್ಚು ಕನ್ನಡಿಗರಿಗೆ ಒಳ್ಳೆಯ ಬದುಕು, ಏಳಿಗೆ ತರಲು ಸಾಧ್ಯ ಅಂತ ಯೋಚಿಸಿದಾಗ ನುಡಿ ಅನ್ನುವ ಉತ್ತರವೇ ನನಗೆ ಕಾಣಿಸುತ್ತೆ. ಕಲಿಕೆ, ದುಡಿಮೆ, ಛಲ ಮತ್ತು ಒಗ್ಗಟ್ಟು ನುಡಿಯ ಸುತ್ತ ಕಟ್ಟುವುದು ಹೆಚ್ಚು ಸಹಜ ಸಾಧ್ಯ ಕೂಡ.

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ



'ಎಲ್ಲ ರಸ್ತೆಗುಂಡಿಗಳನ್ನು ತಕ್ಷಣವೇ ಮುಚ್ಚಿ, ಇಲ್ಲದಿದ್ದರೆ...' ಎನ್ನುವ ಹೈಕೋರ್ಟ್‌ನ ತಪರಾಕಿಯು ಬಿಬಿಎಂಪಿಗೆ ತುಂಬಾ ಇಷ್ಟ. ಏಕೆಂದರೆ, ಇದರಿಂದಾಗಿ ಗುತ್ತಿಗೆದಾರರೊಂದಿಗೆ ಮತ್ತೊಮ್ಮೆ ಒಪ್ಪಂದ ಮಾಡಿಕೊಳ್ಳಲು ಹಾಗೂ ಮತ್ತೊಂದು ಸುತ್ತಿನ ಮಳೆ ಬಿದ್ದು ರಸ್ತೆಗಳು ಹಾಳಾಗುವುದಕ್ಕೆ ಕಾಯಲು ಅದಕ್ಕೆ ಇನ್ನೊಂದು ಅವಕಾಶ ಸಿಕ್ಕಂತಾಗುತ್ತದೆ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

25 ವರ್ಷಗಳ ಹಿಂದೆ

ಭಾನುವಾರ, 2-11-1997

• **'ಇಂಗ್ಲಿಷ್ ಮೋಹ ಕನ್ನಡಕ್ಕೆ ಕಂಟಕ'**

ಬೆಂಗಳೂರು, ನ. 1– 'ಇಂಗ್ಲಿಷ್ ಭಾಷೆಯ ವ್ಯಾಮೋಹವೆಂಬ ವಿಷಜಂತು ಕನ್ನಡದ ಹೆಮ್ಮರವನ್ನು ತಿಂದು ಹಾಕುತ್ತಿದೆ' ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಇಂದು ಇಲ್ಲಿ ವಿಷಾದ ವ್ಯಕ್ತಪಡಿಸಿದರು.

ನಗರದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಏರ್ಪಡಿಸಿದ್ದ 42ನೇ ಕನ್ನಡ ರಾಜ್ಯೋತ್ಸವ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಅವರು, 'ಅದನ್ನು ವಿಷಜಂತು ಎಂದು ಹೇಳಿದ ಮಾತ್ರಕ್ಕೆ ನಾನು ಇಂಗ್ಲಿಷ್ ದ್ವೇಷಿ ಅಥವಾ ವಿರೋಧಿಯಲ್ಲ. ಇಂಗ್ಲಿಷ್ ಭಾಷೆಯ ಶ್ರೀಮಂತಿಕೆ ಬಗ್ಗೆ ಮೆಚ್ಚುಗೆ ಇಟ್ಟುಕೊಂಡೇ ಇದನ್ನು ಹೇಳುತ್ತಿದ್ದೇನೆ' ಎಂದರು.

ಪರಸ್ಪರ ಸೋದರ ಭಾಷೆಗಳ ಬಗ್ಗೆ ಕೆಲವರಲ್ಲಿರುವ ದ್ವೇಷವನ್ನು ಅವರು ಖಂಡಿಸಿದರು.'ಕನ್ನಡದ ಬದ್ಧತೆ ಹಾಗೂ ಕಳಕಳಿ ಹೆಚ್ಚಬೇಕು. ಹಲವರು ಅನ್ಯ ಭಾಷೆ ಕಲಿಯಲು ಹೋಗಿ ಕನ್ನಡವನ್ನು ವಿರೂಪಗೊಳಿಸುತ್ತಾರೆ. ಹೀಗಾಗಿ ಇಂಗ್ಲಿಷ್ ವ್ಯಾಮೋಹ ಹೆಚ್ಚಾಗುತ್ತಿರುವ ಈ ಸಂದರ್ಭದಲ್ಲಿ ಕನ್ನಡತನವನ್ನು ಮೆರೆಸುವ ಸಂಕಲ್ಪವನ್ನು ಕನ್ನಡಿಗರು ತೊಡಬೇಕು' ಎಂದು ಅವರು ಮನವಿ ಮಾಡಿದರು.

• **ಕುಕಿ ಉಗ್ರಗಾಮಿಗಳಿಂದ 10 ಯೋಧರ ಹತ್ಯೆ**

ಇಂಫಾಲ, ನ. 1 (ಪಿಟಿಐ)– ಮಣಿಪುರದ-ಸೇನಾಪತಿ ಜಿಲ್ಲೆಯ ಇಕುವು ಪ್ರದೇಶದಲ್ಲಿ ಇಂದು ಬೆಳಿಗ್ಗೆ ಶಂಕಿತ ಕುಕಿ ಉಗ್ರಗಾಮಿಗಳು ಕೇಂದ್ರ ಮೀಸಲು ಪಡೆಯ ಹತ್ತು ಮಂದಿ ಯೋಧರನ್ನು ಗುಂಡಿಟ್ಟು ಕೊಂದಿದ್ದಾರೆ.

ಬೆಳಿಗ್ಗೆ 11 ಗಂಟೆಯ ಸುಮಾರಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ಉಗ್ರಗಾಮಿಗಳ ಗುಂಪು ಇಕುವು ಮಾರುಕಟ್ಟೆಯಲ್ಲಿ ರಸ್ತೆಯ ಬದಿ ನಿಂತಿದ್ದ ಸಿಆರ್‌ಪಿಎಫ್ ಯೋಧರನ್ನು ಎರಡೂ ಕಡೆಗಳಿಂದ ಸುತ್ತುವರಿದು ದಾಳಿ ಮಾಡಿತು ಎಂದು ಅಧಿಕೃತ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಗುರುವಾರ, 2-11-1972

• **ರಾಜ್ಯದಲ್ಲಿ ಸಡಗರದ ಪ್ರಥಮ ಜನತಾ ರಾಜ್ಯೋತ್ಸವ**

ಬೆಂಗಳೂರು, ನ. 1– ಸುಂದರ ವಿಧಾನಸೌಧದ ಮಹಾದ್ವಾರದ ಮುಂದಿನ ಭಾರಿ ಸೋಪಾನ. ರಾಜ್ಯಕ್ಕೆ 'ಕರ್ನಾಟಕ' ಎಂದು ಹೆಸರಿಡಲು ಕಾರಣರಾದ ಮುಖ್ಯಮಂತ್ರಿ ಶ್ರೀ ಅರಸು ಹಾಗೂ ಮತ್ತಿತರರಿಗೆ ಮೈಸೂರು ಪೇಟ ಹಾಕಿ ಗೌರವಾರ್ಪಣೆ.

ಕರ್ನಾಟಕ ಉದಯವಾದ ನಂತರ ಸಾವಿರಾರು ಮಂದಿ ಹಾಜರಿದ್ದು ನಡೆದ ರಾಜ್ಯೋತ್ಸವದ ಪ್ರಥಮ ಜನತಾ ಸಮಾರಂಭ!

ಕರ್ನಾಟಕಕ್ಕೆ ದುಡಿದವರನ್ನು ಕೃತಜ್ಞತೆಯಿಂದ ಸ್ಮರಿಸಿ, ಹೆಸರಿನ ಬದಲಾವಣೆ 'ನಿಮಿತ್ತ ಮಾತ್ರವಾದ' ಮುಖ್ಯಮಂತ್ರಿಗಳು ನಮ್ರತೆಯಿಂದ ಗೌರವ ಸ್ವೀಕರಿಸಿದರು. ಕನ್ನಡ ಚಳವಳಿಗಾರರು ತಮ್ಮ ರಾಜ್ಯದ ಹೆಸರಿನ ಬದಲಾವಣೆಯಾಗಬೇಕೆಂಬ ಬೇಡಿಕೆ ಈಡೇರಿದ ಸಂತೋಷದಿಂದ ಆಚರಿಸಿದ ರಾಜ್ಯೋತ್ಸವ ವಿದು. ಇದು ನಗರದಲ್ಲಿ ನಡೆದ ಪ್ರಮುಖ ಹಾಗೂ ಆಕರ್ಷಣೀಯ ಕಾರ್ಯಕ್ರಮ.

ಸಂಗತ

ಕನ್ನಡದ ಉಳಿವಿಗಾಗಿ 'ಸ್ಕೂಲ್ ಕಾರಿಡಾರ್'

ಕನ್ನಡದ ಪುನರುತ್ಥಾನಕ್ಕೆ ಹೊಸತೊಂದು ತ್ರಿವಿಕ್ರಮ ಹೆಜ್ಜೆ ಇಡಬೇಕಾಗಿದೆ

• ಚಂದ್ರಶೇಖರ ದಾಮ್ಲೆ

'ನಿಮ್ಮ ಮಗುವನ್ನು ಯಾವ ಶಾಲೆಗೆ ಕಳಿಸುತ್ತಿದ್ದೀರಿ?' ಹೀಗೆಂದು ಯಾರಾದರೂ ಕೇಳಿದಾಗ 'ಇಂಗ್ಲಿಷ್ ಮೀಡಿಯಂಗೆ' ಎಂದು ಹೇಳಬಲ್ಲ ಪೋಷಕರ ಮುಖದಲ್ಲಿ ಗೆಲುವಿನ ನಗೆ ಇರುತ್ತದೆ. ಪ್ರಶ್ನೆ ಕೇಳಿದವರಲ್ಲಿ ಮರುಪ್ರಶ್ನೆಗಳಿರುವುದಿಲ್ಲ. ಇನ್ನು, 'ಮಕ್ಕಳನ್ನು ಕನ್ನಡ ಮೀಡಿಯಂಗೆ ಕಳಿಸುತ್ತೇವೆ' ಎಂದು ಹೇಳಿದವರು ಬಡವರಾಗಿದ್ದರೆ, ಅವರಲ್ಲಿ ಕೇಳಬಹುದಾದ ಮರುಪ್ರಶ್ನೆಗಳಿರುವುದಿಲ್ಲ. ಆದರೆ ಅವರು ವಿದ್ಯಾವಂತರೂ ಶ್ರೀಮಂತರೂ ಆಗಿದ್ದರೆ ತಕ್ಷಣ ಮರುಪ್ರಶ್ನೆ ಬರುತ್ತದೆ: 'ಯಾಕೆ ಮಗುವಿನ ಭವಿಷ್ಯವನ್ನು ಹಾಳು ಮಾಡುತ್ತಿದ್ದೀರಿ?'

ಇಂತಹ ಪ್ರಶ್ನೆಗಳು ಮಧ್ಯಮ ವರ್ಗದ ಪೋಷಕರಲ್ಲಿ ಆತಂಕವನ್ನು ಹುಟ್ಟಿಸುತ್ತವೆ, ಸಾಮಾಜಿಕ ಘನತೆ ಕುಗ್ಗಿಸಿದಂತಹ ಭಾವನೆ ಮೂಡಿಸುತ್ತವೆ. ಆಗ ಅವರು ಮಕ್ಕಳನ್ನು ಕನ್ನಡ ಶಾಲೆಯಿಂದ ಇಂಗ್ಲಿಷ್ ಮೀಡಿಯಂ ಶಾಲೆಗೆ ವರ್ಗಾಯಿಸುತ್ತಾರೆ. ಇದು, ಕಳೆದ ಮೂರು ದಶಕಗಳಲ್ಲಿ ಅಂದರೆ ಸುಮಾರು ಒಂದು ತಲೆಮಾರಿನಲ್ಲಿ ನಡೆದ ವಿದ್ಯಮಾನ.

ದೇಶವು ಸ್ವತಂತ್ರಗೊಂಡಾಗಿನಿಂದಲೂ ಕೇಂದ್ರ ಸರ್ಕಾರವಾಗಲೀ ರಾಜ್ಯ ಸರ್ಕಾರಗಳಾಗಲೀ ಶಿಕ್ಷಣವನ್ನು ಪರಿವರ್ತನೆಯ ಪ್ರಮುಖ ಕಾರಕವಾಗಿ ಪರಿಗಣಿಸಲೇ ಇಲ್ಲ. 'ಆದ ಹಾಗೆ ಆಗಲಿ, ಹೋದ ಹಾಗೆ ಹೋಗಲಿ' ಎಂಬುದೇ ಅವುಗಳ ಧೋರಣೆಯಾಗಿತ್ತು. ಆದ್ದರಿಂದಲೇ ಕೊಠಾರಿ ಆಯೋಗವನ್ನು ರಚಿಸಲು 1964ರ ತನಕ ತಡಮಾಡಿದರು. ಕೊಠಾರಿಯವರ ವರದಿ ಅತ್ಯುತ್ತಮ ಎಂದು ಈಗಲೂ ಗೌರವಿಸಲ್ಪಡುತ್ತದಾದರೂ, ಅದನ್ನು ಸಮರ್ಪಕವಾಗಿ ಅಳವಡಿಸದಿದ್ದುದು ಸರ್ಕಾರಗಳ ಇಚ್ಛಾರಹಿತ ವರ್ತನೆಗೆ ಸಾಕ್ಷಿ.

ಕರ್ನಾಟಕದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಕಾನೂನು ಒಂದಿದೆ. ಸರ್ವರಿಗೂ ಸಮಾನ ಶಿಕ್ಷಣದ ಉದ್ದೇಶವನ್ನು ಅದರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಆದರೂ ವಿವಿಧ ಜಿಲ್ಲೆಗಳ ಶೈಕ್ಷಣಿಕ ಗುಣಮಟ್ಟದಲ್ಲಿ ಅಸಮಾನತೆ ಕಂಡುಬರಲು ಕಾರಣವೇನು? 'ಹೋದಂತೆ ಹೋಗಲಿ' ಎಂಬ ಧೋರಣೆಯೇ ಕಾರಣ. ಉದಾಹರಣೆಗೆ, ನಗರಗಳಲ್ಲಿ ಡೊನೇಷನ್ ಆಧಾರಿತ ಶಿಕ್ಷಣದ ವಾಣಿಜ್ಯೀಕರಣ ನಡೆದಷ್ಟು ವೇಗದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಮತ್ತು ಉತ್ತರ ಕರ್ನಾಟಕದಲ್ಲಿ ನಡೆದಿಲ್ಲ. ಗುಣಮಟ್ಟದಲ್ಲಿ ಢಾಳಾಗಿ ಕಂಡುಬರುವ ಅಸಮಾನತೆಯನ್ನು ಹೋಗಲಾಡಿಸುವ ಚಿಂತನೆಯನ್ನೇ ಸರ್ಕಾರ ಮಾಡಿಲ್ಲ.

ಶಿಕ್ಷಣ ಇಲಾಖೆಯ ಅಧಿಕಾರಿಗಳಲ್ಲಿ ಕನ್ನಡ ಭಾಷಾ ಬದ್ಧತೆ ಇಲ್ಲ. ಅವರಿಗೆ ಶಿಕ್ಷಣದ ಮೂಲ ತತ್ವಗಳ ಬಗೆಗೆ ತಿಳಿವಳಿಕೆಯೂ ಇಲ್ಲ. ಖಾಸಗಿ ಶಾಲೆಗಳು ಗುಪ್ತವಾಗಿ ಇಂಗ್ಲಿಷ್ ಮೀಡಿಯಂನಲ್ಲಿ ತರಗತಿಗಳನ್ನು ನಡೆಸಲು ಶಿಕ್ಷಣಾಧಿಕಾರಿಗಳು ಅವಕಾಶ ನೀಡಿದರು. ಶಿಕ್ಷಣ ಮಾಧ್ಯಮದ ಆಯ್ಕೆಯು ಪೋಷಕರ ಹಕ್ಕೆಂಬ ತೀರ್ಪನ್ನು ಸುಪ್ರೀಂ ಕೋರ್ಟ್ ನೀಡಿದ ಬಳಿಕ, ಖಾಸಗಿ ಶಾಲೆಗಳು ಗುಪ್ತವಾಗಿ ನಡೆಸುತ್ತಿದ್ದ ಇಂಗ್ಲಿಷ್ ಮಾಧ್ಯಮವನ್ನು ಶಾಸನದ ಭಯವಿಲ್ಲದೆ ಮುಕ್ತವಾಗಿ ನಡೆಸಿದಾಗ ಕಣ್ಮುಚ್ಚಿ ಕುಳಿತರು. ಸರ್ಕಾರಿ ಅಧಿಕಾರಿಗಳು ಮತ್ತು ಶಿಕ್ಷಕರು ತಮ್ಮ ಮಕ್ಕಳನ್ನು ಖಾಸಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಸೇರಿಸಿ ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳು ಅನುಪಯುಕ್ತ ಎಂಬುದಕ್ಕೆ ತಾವೇ ಉದಾಹರಣೆಯಾದರು.

ಖಾಸಗಿ ಶಾಲೆಗಳನ್ನು ಸ್ಥಾಪಿಸುವ ಮೂಲಕ ಆದಾಯ ಮತ್ತು ಪ್ರಸಿದ್ಧಿಯ ಲಾಭಗಳನ್ನು ಕಂಡ ರಾಜಕಾರಣಿಗಳು ಶಾಲೆಗಳ ಮಾಲೀಕರಾಗಿ ಇರುವಾಗ ಸರ್ಕಾರದಲ್ಲಿ ಇಚ್ಛಾಶಕ್ತಿಯನ್ನು ನಿರೀಕ್ಷಿಸಲು ಸಾಧ್ಯವೇ?

ಕನ್ನಡದ ಪುನರುತ್ಥಾನಕ್ಕೆ ಹೊಸತೊಂದು ತ್ರಿವಿಕ್ರಮ ಹೆಜ್ಜೆ ಇಡಬೇಕಾಗಿದೆ. ಅದಕ್ಕಾಗಿ ರಾಜ್ಯ ಸರ್ಕಾರವು ಸರ್ಕಾರಿ ಶಾಲಾ ಕಾರಿಡಾರ್ ಯೋಜನೆಯನ್ನು ರೂಪಿಸಬೇಕು. ಕಾಶಿ, ಅಯೋಧ್ಯೆ ಮತ್ತು ಉಜ್ಜಯಿನಿಯಲ್ಲಿ ಕ್ಷೇತ್ರಾಭಿವೃದ್ಧಿಗಾಗಿ ಪ್ರಧಾನಿ ನರೇಂದ್ರ ಮೋದಿಯವರು ಮಾಡಿರುವ 'ಟೆಂಪಲ್ ಕಾರಿಡಾರ್'ಗಳಂತೆ ರಾಜ್ಯ ಸರ್ಕಾರಗಳು ಶಾಲಾಭಿವೃದ್ಧಿಗಾಗಿ 'ಸ್ಕೂಲ್ ಕಾರಿಡಾರ್'ಗಳನ್ನು ರೂಪಿಸಬೇಕು. ಅಂದರೆ ಪ್ರತಿಯೊಂದು ಕ್ಲಸ್ಟರ್‌ನ ಶಾಲೆಗಳನ್ನೆಲ್ಲ ಸಂಯೋಜಿಸಿ ಅವುಗಳ ಕೇಂದ್ರದಲ್ಲಿ ಒಂದು ಸಮಗ್ರ ಶಾಲೆ ಮಾಡಬೇಕು. ಕಲಿಸುವ ಸಂಪನ್ಮೂಲವನ್ನು ಅಲ್ಲಿ ಬಲಗೊಳಿಸಬೇಕು. ಮಕ್ಕಳನ್ನು ವಾಹನಗಳಲ್ಲಿ ಕರೆತರುವ ವ್ಯವಸ್ಥೆ ಆಗಬೇಕು.



ಕೇಂದ್ರ ಶಾಲೆಗಳಲ್ಲಿ ಸುಸಜ್ಜಿತ ತರಗತಿ ಕೊಠಡಿಗಳಿದ್ದು ಅತ್ಯುನ್ನತ ಗುಣಮಟ್ಟದಲ್ಲಿ ಶಿಕ್ಷಣ ನೀಡುವ ಪ್ರಕ್ರಿಯೆಯಲ್ಲಿ ತೊಡಗಬೇಕು. ಅಲ್ಲಿ ವಿದ್ಯಾರ್ಥಿಗಳಿಗೆ ಸಂಪೂರ್ಣ ವ್ಯಕ್ತಿತ್ವ ವಿಕಸನದ ಶಿಕ್ಷಣ ದೊರೆಯುವಂತಾಗಬೇಕು. ಮಕ್ಕಳಲ್ಲಿರುವ ಕ್ರೀಡಾಸಕ್ತಿಯನ್ನು ಪ್ರೋತ್ಸಾಹಿಸಲು ವಿಸ್ತಾರವಾದ ಕ್ರೀಡಾಂಗಣ ಇರಬೇಕು. ಸಭೆಗಳನ್ನು ನಡೆಸಲು ಪ್ರಾಥಮಿಕ ಹಂತದಿಂದಲೇ ಆಲಿಸು, ಮಾತಾಡು, ಓದು ಮತ್ತು ಬರೆ ಎಂಬ ವಿಧಾನದಲ್ಲಿ ಮಕ್ಕಳ ಅರಿವಿನ ವಿಸ್ತಾರಕ್ಕೆ ಗಟ್ಟಿ ತಳಹದಿ ನೀಡಬೇಕು. ಹೀಗೆ ಸುಂದರ ಮತ್ತು ಸುಭದ್ರ ಪರಿಸರದಲ್ಲಿ ಕಲಿಕಾ ಪ್ರಕ್ರಿಯೆ ನಡೆಯಬೇಕು. ಅದು ಎಂತಹ ಪರಿಣಾಮ ಉಂಟು ಮಾಡಬೇಕೆಂದರೆ 'ಕನ್ನಡವಿಲ್ಲದೆ ಹೊಟ್ಟೆಗಿಲ್ಲ' ಎಂಬ ಸ್ಥಿತಿ ಉಂಟಾಗಬೇಕು. 'ಕನ್ನಡದಲ್ಲಿ ಕಲಿತಿದ್ದರೆ ಚೆನ್ನಾಗಿತ್ತು' ಎಂಬ ಮಾತು ಯುವಜನರಿಂದ ಕೇಳಿಬರುವಂತಹ ವಾತಾವರಣ ನಿರ್ಮಾಣ ಆಗಬೇಕು. ಕಾಲಕ್ರಮೇಣ ಖಾಸಗಿ ಇಂಗ್ಲಿಷ್ ಮೀಡಿಯಂ ಶಾಲೆಗಳು ತಾವಾಗಿ ಬಾಗಿಲು ಹಾಕುವಂತಾಗಬೇಕು.

ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಇಂತಹ ಒಂದು ಶೈಕ್ಷಣಿಕ ವ್ಯವಸ್ಥೆಯನ್ನು ರೂಪಿಸದ ವಿನಾ ದೇಶೀಯ ಭಾಷೆಗಳಲ್ಲಿ ಶಿಕ್ಷಣ ಮಾಧ್ಯಮ ನೆಲೆಯೂರದು. ಇಂತಹದ್ದೊಂದು ಯೋಜನೆ ಜಾರಿಗೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಅವಕಾಶವಿದೆ.

ಲೇಖಕ: ಶಿಕ್ಷಣ ತಜ್ಞ

ವಾಚಕರ ವಾಣಿ

ವಿದ್ಯಾರ್ಥಿಯ ಸಾವು: ತನಿಖೆ ಅಗತ್ಯ

ಭಗತ್ ಸಿಂಗ್ ನೇಣುಗಂಬಕ್ಕೆ ಏರುವ ಪಾತ್ರದ ಅಭ್ಯಾಸ ಮಾಡುತ್ತಿದ್ದ ವೇಳೆ ಆಕಸ್ಮಿಕವಾಗಿ ಹಗ್ಗವು ಕೊರಳಿಗೆ ಉರುಳಾಗಿ ಚಿತ್ರದುರ್ಗದ 12 ವರ್ಷದ ವಿದ್ಯಾರ್ಥಿ ಸಂಜಯ್ ಗೌಡ ಸಾವಿಗೀಡಾಗಿರುವುದು ಹೃದಯವಿದ್ರಾವಕವಾಗಿದೆ. ಮೇಲ್ನೋಟಕ್ಕೆ ಇದು ನಿಜವೇ ಎಂಬ ಪ್ರಶ್ನೆ ಮೂಡುತ್ತದೆ. ಹನ್ನೆರಡು ವರ್ಷ ವಯಸ್ಸಿನ ವಿದ್ಯಾರ್ಥಿಗೆ ಅವರ ಶಿಕ್ಷಕರು ಭಗತ್ ಸಿಂಗ್ ಪಾತ್ರದ ಯಾವ ಸನ್ನಿವೇಶವನ್ನು ನಿರ್ವಹಿಸಲು ಹೇಳಿದ್ದರು? ನಾಟಕದ ಯಾವ ದೃಶ್ಯವನ್ನು ಹೇಗೆ ರಂಗದ ಮೇಲೆ ತರಬೇಕು ಎಂಬುದಕ್ಕೆ ನಿಯಮಗಳಿವೆ. ಪುಟ್ಟ ವಿದ್ಯಾರ್ಥಿಗೆ ನೇಣಿಗೇರುವ ಸನ್ನಿವೇಶವನ್ನು ಅಭಿನಯಿಸಲು ಸೂಚಿಸಿದ್ದು ಸರಿಯೇ? ಭಗತ್ ಸಿಂಗ್ ಅವರನ್ನು ಬ್ರಿಟಿಷ್ ಸರ್ಕಾರವು ನೇಣಿಗೇರಿಸುತ್ತದೆ. ಆದರೆ ವಿದ್ಯಾರ್ಥಿ ಸ್ವತಃ ನೇಣು ಹಾಕಿಕೊಳ್ಳುವಂತಹ ತಾಲೀಮು ನಡೆಸಿದ್ದಕ್ಕೆ ಕಾರಣ ಏನು?

ಇದೊಂದು ಅತ್ಯಂತ ನೋವಿನ ಪ್ರಸಂಗ. ಈ ಬಗ್ಗೆ ಸೂಕ್ತವಾದ ತನಿಖೆ ನಡೆಸಿ ಕಾರಣವನ್ನು ಕಂಡುಹಿಡಿಯಬೇಕು. ಇಂಥ ಘಟನೆ ಪುನರಾವರ್ತನೆ ಆಗದಂತೆ ಶಿಕ್ಷಕರಿಗೆ, ಶಿಕ್ಷಣ ಸಂಸ್ಥೆಗಳಿಗೆ ಸೂಕ್ತವಾದ ನಿರ್ದೇಶನ ನೀಡುವ ಅಗತ್ಯವಿದೆ.

ಈ.ಬಸವರಾಜು, ಬೆಂಗಳೂರು

'ಕರ್ನಾಟಕ ರಾಜ್ಯೋತ್ಸವ' ಸರಿಯಲ್ಲವೇ?

ರಾಜ್ಯ ಸರ್ಕಾರವು ರಾಜ್ಯೋತ್ಸವದ ಸಂದರ್ಭದಲ್ಲಿ ನೀಡಿರುವ ಜಾಹೀರಾತಿನಲ್ಲಿ 'ಕನ್ನಡ ರಾಜ್ಯೋತ್ಸವ' ಎಂದು ಬಳಸಿರುವುದು ಭಾಷೆಯನ್ನಷ್ಟೇ ಒಳಗೊಂಡ ಸೀಮಿತ ಅರ್ಥ ಹೊಮ್ಮಿಸುತ್ತದೆ. ಇದಕ್ಕೆ ಬದಲಾಗಿ ನೆಲ, ಜಲ, ಜನ ಹಾಗೂ ಕನ್ನಡ ಭಾಷೆಯ ಜೊತೆಗೆ ತುಳು, ಕೊಡವ, ಬ್ಯಾರಿ, ಕೊಂಕಣಿ, ಉರ್ದು, ನವಾಯತಿ, ಅರೆಭಾಷೆ, ಹವ್ಯಕ, ಎರವ, ಕೊರಗ ಮೊದಲಾದ ಉಪ- ಸಹಭಾಷೆಗಳನ್ನೂ ಸಮಗ್ರವಾಗಿ ಪ್ರತಿನಿಧಿಸುವಂತೆ, ಧ್ವನಿಸುವಂತೆ 'ಕರ್ನಾಟಕ ರಾಜ್ಯೋತ್ಸವ' ಎಂದು ಬಳಸುವುದು ಸೂಕ್ತವಲ್ಲವೇ? ಈ ಬಗ್ಗೆ ಸರ್ಕಾರದಲ್ಲಿ ನಿರ್ಧಾರ ತೆಗೆದುಕೊಳ್ಳುವವರು, ಸಲಹೆಗಾರರು ಮುಕ್ತ ಮನಸ್ಸಿನಿಂದ ಗಮನಹರಿಸಿ ತಿದ್ದಿಕೊಳ್ಳಬೇಕಿದೆ.

ಚಂದ್ರಕಾಂತ ವಡ್ಡು, ಬೆಂಗಳೂರು

ನಂದಿನಿ ತುಪ್ಪ: ಬೆಲೆ ನಿಯಂತ್ರಣ ಯಾಕಿಲ್ಲ?

ನಂದಿನಿ ತುಪ್ಪ ಗ್ರಾಹಕರ ಗಂಟಲನ್ನೇ ಸುಡುತ್ತಿದೆ! ಹೌದು, ನಂದಿನಿ ಹಾಲು ಹೊರತುಪಡಿಸಿ ಇನ್ನಾವುದೇ ನಂದಿನಿ ಉತ್ಪನ್ನಗಳ ಮೇಲೆ ಸರ್ಕಾರದ ನಿಯಂತ್ರಣ ಇಲ್ಲವೇ ಎನ್ನುವ ಪ್ರಶ್ನೆ ಗ್ರಾಹಕರನ್ನು ಕಾಡುತ್ತಿದೆ. ಏಕೆಂದರೆ ಆಗಸ್ಟ್ ತಿಂಗಳಲ್ಲಿ ₹ 117 ಇದ್ದ 200 ಎಂ.ಎಲ್ ನಂದಿನಿ ತುಪ್ಪದ ಬೆಲೆ ಅಕ್ಟೋಬರ್ ತಿಂಗಳಲ್ಲಿ ₹ 135 ಆಗಿದೆ. ಅಂದರೆ ಕೇವಲ ಎರಡು ತಿಂಗಳಲ್ಲಿ ₹ 18 ಜಿಗಿದಿದೆ. ಕೆ.ಜಿ.ಗೆ ₹ 72 ಹೆಚ್ಚಾಗಿದೆ.

ಅಂದಹಾಗೆ ಈ ರೀತಿ ಬೆಲೆ ಹೆಚ್ಚಳ ಇದೇ ಮೊದಲಲ್ಲ ಕೊನೆಯೂ ಅಲ್ಲ. ಮನ ಬಂದ ಹಾಗೆ ಏರಿಸುತ್ತಿದ್ದಾರೆ. ಹೀಗೆ ನಂದಿನಿ ಉತ್ಪನ್ನಗಳ ಅನಿಯಮಿತ ಬೆಲೆ ಏರಿಕೆಗೆ ಕಾರಣವೇನು? ಈ ಬಗ್ಗೆ ಕೆಎಂಎಫ್ ಸ್ಪಷ್ಟನೆ ಕೊಡಲಿ.

ಮುಳ್ಳೂರು ಪ್ರಕಾಶ್, ಮೈಸೂರು

ಕರ್ನಾಟಕವೆಂದರೆ ಬರೀ ಕನ್ನಡವಲ್ಲ...

'ಕನ್ನಡ ಭಾಷೆಯ ಸಮಗ್ರ ಅಭಿವೃದ್ಧಿ ಮಸೂದೆ– 2022' ಅನ್ನು ರಾಜ್ಯ ಸರ್ಕಾರ ಈಚೆಗೆ ಜರುಗಿದ ವಿಧಾನಮಂಡಲ ಅಧಿವೇಶನದಲ್ಲಿ ಮಂಡಿಸಿದೆ. ಆ ಮಸೂದೆಯು ಕನ್ನಡ ಭಾಷೆಯನ್ನು ಅಭಿವೃದ್ಧಿಪಡಿಸುವುದರ ಕಡೆಗೆ ಮಾತ್ರ ಲಕ್ಷ್ಯ ಕೊಟ್ಟಿದ್ದು, ಅದರಲ್ಲಿ ತುಳು, ಕೊಡವ, ಕನ್ನಡ-ಕೊಂಕಣಿ ಹಾಗೂ ಬ್ಯಾರಿ ನುಡಿಗಳ ಭವಿಷ್ಯವನ್ನು ಕಾಯುವ ಮಾತೇ ಇಲ್ಲವಾಗಿದೆ. ಈ ವಿಷಯದಲ್ಲಿ ಆ ನಮ್ಮ ನಾಡುನುಡಿಗಳ ಹಿತವನ್ನು ಕಾಯುವ ಸಂಘಟನೆಗಳು ಎತ್ತಿರುವ ಆಕ್ಷೇಪ ನ್ಯಾಯಯುತವಾದದ್ದು.

ನಮ್ಮ ರಾಜ್ಯವು ಕನ್ನಡ ನುಡಿಯನ್ನು ಮಾತ್ರ ಆಡುವವರಿಗೆ ಸೇರಿದ್ದಲ್ಲ. ನಿಜಕ್ಕೂ, ಕರ್ನಾಟಕದ ಮುಖ್ಯ ನುಡಿಗಳೆಂದರೆ ಕನ್ನಡದ ಜೊತೆಗೆ ಈ ನುಡಿಗಳೂ ಹೌದಲ್ಲವೆ? ಕರ್ನಾಟಕದವರು ಎಂದರೆ ಈಗ ಹೆಸರಿಸಿದ ಆ ನುಡಿಗಳನ್ನು (ಮತ್ತು ಇನ್ನೆಷ್ಟೋ ದೇಸಿ ನುಡಿಗಳನ್ನು) ಆಡುವವರು ಕೂಡ ಹೌದಲ್ಲವೆ? ಅದು ಹಾಗಿರುವುದು ನಮ್ಮ ಭಾಗ್ಯವಲ್ಲವೆ? ಆದ್ದರಿಂದ ಕರ್ನಾಟಕ ಸರ್ಕಾರವು ಕನ್ನಡದ ಜೊತೆಗೆ ತುಳು, ಕೊಡವ, ಕನ್ನಡ-ಕೊಂಕಣಿ ಮತ್ತು ಬ್ಯಾರಿ ನುಡಿಗಳ ಸಮಗ್ರ ಅಭಿವೃದ್ಧಿಯೂ ನಡೆಯುವಂತೆ ಆ ಮಸೂದೆಗೆ ತಿದ್ದುಪಡಿ ತಂದು ಮಂಡಿಸಬೇಕಿದೆ.

ರಘುನಂದನ, ಬೆಂಗಳೂರು

ವೈದ್ಯ ಸಾಹಿತ್ಯ: ಸ್ಮರಿಸಬೇಕಾದ ಮತ್ತೊಬ್ಬರು

'ಕನ್ನಡದಲ್ಲಿ ವೈದ್ಯ ಶಿಕ್ಷಣದ ಸವಾಲು' ಎಂಬ ಶೀರ್ಷಿಕೆಯ ಟಿ.ಆರ್.ಅನಂತರಾಮು ಅವರ ಲೇಖನದಲ್ಲಿ (ಪ್ರ.ವಾ., ನ. 1) ಡಾ.ಪಿ.ಎಸ್.ಶಂಕರ್, ಡಾ.ಡಿ.ಶಿವಪ್ಪ ಅವರನ್ನು ನೆನೆದಿರುವುದು ಸರಿಯಾಗಿದೆ. ವೈದ್ಯ ಸಾಹಿತ್ಯಕ್ಕೆ ಡಾ.ಸ.ಜ.ನಾಗಲೋಟಿಮಠ ಅವರ ಕೊಡುಗೆಯೂ ಗಮನಾರ್ಹವಾದುದು. ಅವರು ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ 40ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. ಈ ವಿಷಯದಲ್ಲಿ ಬರೆಯುವಂತೆ ಹಲವರನ್ನು ಪ್ರೇರೇಪಿಸಿದ್ದಾರೆ. ವೈದ್ಯಕೀಯ ವಿಷಯದ ಮೇಲಿನ ಅವರ ಭಾಷಣಗಳು ಪರಿಣಾಮಕಾರಿ ಆಗಿರುತ್ತಿದ್ದವು.

ಜಯವಂತ ಕಾಡದೇವರ, ಬನಹಟ್ಟಿ

ನಾಳೆಗಳ ಕುರಿತು ಚಿಂತಿಸಲು ಸುಸಂದರ್ಭ

ರಾಜ್ಯೋತ್ಸವದ ಈ ಸವಿ ಸಂದರ್ಭದಲ್ಲಿ ನಾಡಿನ ಪ್ರತಿಯೊಬ್ಬರೂ ನಾಳೆಗಳ ಕುರಿತು ಚಿಂತಿಸಬೇಕು. ಸದ್ಯದ ಪರಿಸ್ಥಿತಿಯು 'ನುಡಿಯ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಿ' ಎಂದು ಹೇಳಿ ಮುಗಿಸುವಷ್ಟು ಸರಳವಾಗಿಲ್ಲ. ನಾಡನ್ನು ಬಾಧಿಸುತ್ತಿರುವ ಸಮಸ್ಯೆಗಳು ಹಲವು. ಹಿಂದಿ ಹೇರಿಕೆಯ ಹುನ್ನಾರಗಳು ಬಿರುಸು ಪಡೆದಿವೆ. ರಾಷ್ಟ್ರಮಟ್ಟದ ನೇಮಕಾತಿಗೆ ಸಂಬಂಧಿಸಿದ ಹಲವು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆಯಲು ಅವಕಾಶ ಇಲ್ಲದ ಕಾರಣಕ್ಕೆ ನಮ್ಮ ಹುಡುಗರು ಉದ್ಯೋಗಗಳಿಂದ ವಂಚಿತರಾಗುತ್ತಿದ್ದಾರೆ. ಈ ಬಗ್ಗೆ ಗಟ್ಟಿಯಾಗಿ ಧ್ವನಿ ಎತ್ತಬೇಕಾಗಿದ್ದ ಸರ್ಕಾರವು ಮೌನ ವಹಿಸಿದೆ. ಜನ ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ಪೀಳಿಗೆಯ ಭವಿಷ್ಯ ಮಸುಕಾಗುತ್ತದೆ.

ನಾಗರಾಜ್ ಮಾದೇಗೌಡ, ಕನಕಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮೊರ್ಬಿ ತೂಗುಸೇತುವೆ ದುರಂತದ ಸುತ್ತ



ಅವಘಡದ ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಮೊರ್ಬಿ ತೂಗು ಸೇತುವೆಯು ಇಂಥದ್ದೇ ಕಾರಣಕ್ಕೇ ಕಳಚಿಬಿದ್ದಿದೆ ಎಂದು ವಿವರಿಸುವ ಹಲವು ಪ್ರತಿಪಾದನೆಗಳು ವರದಿಯಾಗುತ್ತಿವೆ. ಹೆಚ್ಚು ಜನ ಸೇರಿದ್ದಕ್ಕಾಗಿ ಎಂದೂ ಜನರು ಸೇತುವೆಯು ಹೆಚ್ಚು ತೂಗಾಡುವಂತೆ ಮಾಡಿದ್ದರಿಂದ ಎಂದೂ ನವೀಕರಣ ಕಾಮಗಾರಿ ಸರಿಯಾಗಿ ಆಗಿಲ್ಲ ಎಂದೂ ಹಲವರು ಹೇಳುತ್ತಿದ್ದಾರೆ. ಪ್ರಕರಣದ ಸಂಬಂಧ ಪೊಲೀಸರು ದಾಖಲಿಸಿರುವ ಎಫ್‌ಐಆರ್‌ನಲ್ಲಿಯೂ ಈ ಎಲ್ಲಾ ಕಾರಣಗಳನ್ನು ಉಲ್ಲೇಖಿಸಲಾಗಿದೆ. ಆದರೆ ಸೇತುವೆ ಕುಸಿದು ಬಿದ್ದದ್ದು ಏಕೆ ಎಂಬುದನ್ನು ವಿವರಿಸಲು ತಜ್ಞರು ಪ್ರಯತ್ನಿಸಿದ್ದಾರೆ.

ಸೇತುವೆಯ ಸಾಮರ್ಥ್ಯಕ್ಕಿಂತ ಹೆಚ್ಚು ಜನರು ಹೋಗಿದ್ದರಿಂದ ಸೇತುವೆ ಕಳಚಿ ಬಿದ್ದಿದೆ ಎಂದು ಆರೋಪಿಸಲಾಗಿದೆ. ಪೊಲೀಸ್ ಎಫ್‌ಐಆರ್‌ನಲ್ಲಿ, 'ಹೆಚ್ಚು ಜನರು ಸೇರುವುದನ್ನು ತಡೆಯದೆ ಸಿಬ್ಬಂದಿ ನಿರ್ಲಕ್ಷ್ಯ ವಹಿಸಿದ್ದಾರೆ' ಎಂದು ಆರೋಪಿಸಲಾಗಿದೆ. ತೂಗು ಸೇತುವೆಗಳನ್ನು ನಿರ್ಮಿಸುವಾಗ, ಸಾಮಾನ್ಯವಾಗಿ ಅವು ಹೊರಬೇಕಾದ ಭಾರಕ್ಕಿಂತ ಎರಡೂವರೆ ಪಟ್ಟು ಹೆಚ್ಚು ಭಾರವನ್ನು ಕೆಲಕಾಲದವರೆಗೆ ತಡೆದುಕೊಳ್ಳುವಂತೆ ವಿನ್ಯಾಸ ಮಾಡಬೇಕು ಎಂಬುದು ರಾಷ್ಟ್ರೀಯ ಕಟ್ಟಡ ಸಂಹಿತೆಯ ಷರತ್ತು. ಇದು 1877ರಲ್ಲಿ ನಿರ್ಮಿಸಿದ ಸೇತುವೆಯಾದ ಕಾರಣ, ನಿರ್ಮಾಣದ ವೇಳೆ ಈ ಷರತ್ತೇ ಇರಲಿಲ್ಲ. ಆದರೆ, ನವೀಕರಣದ ವೇಳೆ ಈ ಷರತ್ತಿಗೆ ಅನುಗುಣವಾಗಿ ಕಾಮಗಾರಿ ನಡೆಸಬೇಕು. ಈ ಸೇತುವೆ ಈಗಾಗಲೇ ಹಲವು ಬಾರಿ ನವೀಕರಣಕ್ಕೆ ಒಳಗಾಗಿದೆ. ಈಚೆಗೆ ಸಹ ನವೀಕರಣ ಮಾಡಿ, ದುರಂತಕ್ಕೂ ನಾಲ್ಕು ದಿನ ಮೊದಲಷ್ಟೇ ಪ್ರವಾಸಿಗರ ಬಳಕೆಗೆ ಮುಕ್ತ ಮಾಡಲಾಗಿತ್ತು.


ಸೇತುವೆಯು 133 ಮಂದಿಯನ್ನು ಹೊರುವ ಸಾಮರ್ಥ್ಯ ಹೊಂದಿತ್ತು ಎಂದು ಮೊರ್ಬಿ ನಗರ ಪಾಲಿಕೆಯ ಅಧಿಕಾರಿಗಳು ಹೇಳಿದ್ದಾರೆ. ಆದರೆ, ಘಟನೆ ನಡೆದಾಗ ಸೇತುವೆಯ ಮೇಲೆ ಎಷ್ಟು ಜನರಿದ್ದರು ಎಂಬುದು ನಿಖರವಾಗಿ ಗೊತ್ತಿಲ್ಲ. 400 ಜನರಿದ್ದರು ಎಂದು ಕೆಲವು ವರದಿಗಳು ಹೇಳುತ್ತವೆ, 500 ಜನರಿದ್ದರು ಇಂದು ಇನ್ನೂ ಕೆಲವು ವರದಿಗಳು ಹೇಳುತ್ತವೆ. ಅವಘಡ ಸಂಭವಿಸಿದ ಸಂಜೆ ಎಷ್ಟು ಜನರಿಗೆ ಟಿಕೆಟ್ ನೀಡಲಾಗಿತ್ತು ಎಂಬುದರ ಮಾಹಿತಿ ಇನ್ನೂ ಬಹಿರಂಗವಾಗಿಲ್ಲ. ಕೆಲವು ವಿಡಿಯೊಗಳಲ್ಲಿ ಸೇತುವೆಯ ಮೇಲೆ ಜನರು ಕಿಕ್ಕಿರಿದು ನಿಂತಿರುವ ದೃಶ್ಯಗಳಿವೆ. ಸೇತುವೆ ಕಳಚಿ ಬೀಳುವ ವಿಡಿಯೊದಲ್ಲಿ, ಕೆಲವೇ ಮಂದಿ ಅದರ ಮೇಲಿರುವ ದೃಶ್ಯವಿದೆ. ಹೀಗಾಗಿ ಹೆಚ್ಚು ಜನರು ಇದ್ದ ಕಾರಣದಿಂದಲೇ ಸೇತುವೆ ಕಳಚಿಬಿದ್ದಿದೆ ಎಂಬುದು ದೃಢಪಟ್ಟಿಲ್ಲ.

ಜನರು ಸೇತುವೆ ಹೆಚ್ಚು ಹೊಯ್ದಾಡುವಂತೆ ಮಾಡಿದ್ದರಿಂದ ಅದು ಕಳಚಿಬಿದ್ದಿದೆ ಎಂಬ ಪ್ರತಿಪಾದನೆಯೂ ಇದೆ. ಎಫ್‌ಐಆರ್‌ನಲ್ಲೂ ಇದನ್ನು ಉಲ್ಲೇಖಿಸಲಾಗಿದೆ. ಆದರೆ, ತೂಗು ಸೇತುವೆಯ ನಿರ್ಮಾಣದಲ್ಲಿ ಬಳಸುವ ಕೇಬಲ್‌ಗಳು ಹಿಗ್ಗುವ ಮತ್ತು ಕುಗ್ಗುವ ಗುಣ ಹೊಂದಿರುತ್ತವೆ. ಸೇತುವೆ ಹೊಯ್ದಾಡಿದರೂ, ಅದನ್ನು ತಡೆದುಕೊಳ್ಳಲು ಅವು ಸಮರ್ಥವಾಗಿರುತ್ತವೆ. ಹೀಗಾಗಿ ಜನರು ಸೇತುವೆ ಹೊಯ್ದಾಡುವಂತೆ ಮಾಡಿದ್ದರಿಂದ ಅದು ಕಳಚಿ ಬಿದ್ದಿರುವ ಸಾಧ್ಯತೆ ಕಡಿಮೆ ಎಂದು ದೆಹಲಿಯ ಎಂಜಿನಿಯರ್ಸ್ ಇಂಡಿಯಾ ಲಿಮಿಟೆಡ್‌ನ ತಜ್ಞರು ವಿಶ್ಲೇಷಿಸಿದ್ದಾರೆ.

ನವೀಕರಣ ಕಾಮಗಾರಿ ಸರಿಯಾಗಿ ಮಾಡದೇ ಇದ್ದುದ್ದರಿಂದ ಸೇತುವೆ ಕಳಚಿ ಬಿದ್ದಿದೆ ಎಂಬ ವಾದವೂ ಇದೆ. ಇದೇ ಆರೋಪದ ಅಡಿಯಲ್ಲಿ ಒರೆವಾ ಕಂಪನಿಯ (ನವೀಕರಣ ಮತ್ತು ನಿರ್ವಹಣೆ ಗುತ್ತಿಗೆ ಪಡೆದಿದ್ದ ಕಂಪನಿ) ಹಲವು ಸಿಬ್ಬಂದಿಯನ್ನು ಬಂಧಿಸಲಾಗಿದೆ. ಅಕ್ಟೋಬರ್ 24ರಂದು ಕಂಪನಿಯ ವಕ್ತಾರರು, '₹2 ಕೋಟಿ ವೆಚ್ಚದಲ್ಲಿ ಸೇತುವೆಯನ್ನು ಶೇ 100ರಷ್ಟು ನವೀಕರಣ ಮಾಡಲಾಗಿದೆ' ಎಂದು ಹೇಳಿದ್ದಾರೆ. ನವೀಕರಣದ ವೇಳೆ ಎಲ್ಲಾ ಕೇಬಲ್‌ಗಳನ್ನು ಬದಲಿಸಿದ್ದರೇ ಅಥವಾ ಹಳೆಯ ಕೇಬಲ್‌ಗಳನ್ನು ಉಳಿಸಿಕೊಂಡಿದ್ದರೇ ಎಂಬುದು ತಿಳಿದುಬಂದಿಲ್ಲ. ಕೇಬಲ್‌ಗಳು ಹಳತಾಗಿದ್ದರೆ ಮಾತ್ರ ಅವು ತುಂಡಾಗುವ ಸಾಧ್ಯತೆ ಇದೆ. ಇಲ್ಲದೇ ಇದ್ದಲ್ಲಿ ಅವು ತುಂಡಾಗುವುದಿಲ್ಲ. ಕಳಪೆ ಗುಣಮಟ್ಟದ ಕೇಬಲ್ ಬಳಸಿದ್ದರೂ ಅದು ತುಂಡಾಗುವ ಸಾಧ್ಯತೆ ಇದೆ ಎಂದು ಎಂಜಿನಿಯರ್ಸ್ ಇಂಡಿಯಾ ಲಿಮಿಟೆಡ್‌ನ ತಜ್ಞರು ಹೇಳಿದ್ದಾರೆ. ಈ ಎಲ್ಲಾ ಸಾಧ್ಯತೆಗಳ ಬಗ್ಗೆ ಗುಜರಾತ್ ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ತನಿಖೆ ನಡೆಸುತ್ತಿದ್ದಾರೆ. ತನಿಖೆಯ ವರದಿ ಬಂದ ನಂತರವಷ್ಟೇ ಸೇತುವೆ ಕಳಚಿ ಬೀಳಲು ನಿಖರ ಕಾರಣ ಏನು ಎಂಬುದು ಪತ್ತೆಯಾಗುತ್ತದೆ.

ಆಧಾರ: ಪಿಟಿಐ, ಮೊರ್ಬಿ ಪೊಲೀಸರ ಎಫ್‌ಐಆರ್

ಕಳಚಿ ಬೀಳಲು ಸಂಭಾವ್ಯ ಕಾರಣಗಳು



1. ಮುಖ್ಯ ಕೇಬಲ್ ವಿಫಲ: ಸೇತುವೆಯ ಇಡೀ ಭಾರವನ್ನು ಹೊರುವ ಮುಖ್ಯ ಕೇಬಲ್‌ಗಳು ತುಂಡಾದ ಕಾರಣದಿಂದ ಸೇತುವೆ ಕುಸಿದಿರುವ ಸಾಧ್ಯತೆ ಅತ್ಯಧಿಕವಾಗಿದೆ. ಇಂತಹ ಕೇಬಲ್‌ಗಳನ್ನು ಸಾವಿರಾರು ಸಣ್ಣ ಉಕ್ಕಿನ ಎಳೆಗಳನ್ನು ಹೆಣೆದು ತಯಾರಿಸಲಾಗಿರುತ್ತದೆ. ಸಾಮಾನ್ಯವಾಗಿ ಇವು ತುಂಡಾಗುವುದಿಲ್ಲ. ತೀರಾ ಹಳತಾಗಿದ್ದ ಸಂದರ್ಭದಲ್ಲಿ ಮಾತ್ರ ಇವು ತುಂಡಾಗುತ್ತವೆ. ಮೊರ್ಬಿ ತೂಗು ಸೇತುವೆಯನ್ನು ಈಚೆಗಷ್ಟೇ ನವೀಕರಣ ಮಾಡಲಾಗಿತ್ತು. ನವೀಕರಣದ ವೇಳೆ ಮುಖ್ಯ ಕೇಬಲ್‌ಗಳನ್ನು ಬದಲಿಸಿದ್ದರೆ, ಅದು ತುಂಡಾಗುವ ಸಾಧ್ಯತೆಯೇ ಇಲ್ಲ. ಹಳೆಯ ಕೇಬಲ್ ಇದ್ದು ಅದು ದುರ್ಬಲವಾಗಿದ್ದರಷ್ಟೇ, ಭಾರ ಹೆಚ್ಚಾದಾಗ ತುಂಡಾಗುವ ಸಾಧ್ಯತೆ ಇರುತ್ತದೆ. ಅವಘಡದ ನಂತರವೂ ಒಂದು ಮುಖ್ಯ ಕೇಬಲ್ ಯಥಾಸ್ಥಾನದಲ್ಲೇ ಇದೆ. ಈ ಕೇಬಲ್‌ಗಳಲ್ಲಿ ದೋಷವಿತ್ತೇ ಎಂಬುದನ್ನು ಪತ್ತೆ ಮಾಡಲು ವಿಧಿ ವಿಜ್ಞಾನ ತಜ್ಞರು, ಅದರ ಮಾದರಿಯನ್ನು ಕತ್ತರಿಸಿ ತೆಗೆದುಕೊಂಡು ಹೋಗಿದ್ದಾರೆ.

2. ಆ್ಯಂಕರಿಂಗ್ ಪಾಯಿಂಟ್ ವೈಫಲ್ಯ: ಕೇಬಲ್‌ಗಳು ಜಗ್ಗದಂತೆ ಹಿಡಿದಿಡುವ ಆ್ಯಂಕರಿಂಗ್ ಪಾಯಿಂಟ್‌ಗಳ ವೈಫಲ್ಯದಿಂದ ಸೇತುವೆ ಕುಸಿದು ಬೀಳುವ ಅಪಾಯ ಇರುತ್ತದೆ. ಆದರೆ, ಮೊರ್ಬಿ ತೂಗುಸೇತುವೆ ಪ್ರಕರಣದಲ್ಲಿ ಹೀಗೆ ಆಗಿದೆಯೇ ಎಂಬುದು ದೃಢಪಟ್ಟಿಲ್ಲ. ಎರಡೂ ಮುಖ್ಯ ಕೇಬಲ್‌ಗಳ ನಾಲ್ಕು ತುದಿಗಳನ್ನು ಹಿಡಿದಿಡುವ ಆ್ಯಂಕರಿಂಗ್ ಪಾಯಿಂಟ್‌ಗಳಿಗೆ ಹಾನಿಯಾಗಿದೆಯೇ ಎಂಬುದನ್ನು ತಜ್ಞರ ತಂಡ ಇನ್ನಷ್ಟೇ ಪರಿಶೀಲನೆ ನಡೆಸಬೇಕಿದೆ.

3. ಸಸ್ಪೆಂಡರ್ ಕೇಬಲ್ ವಿಫಲ: ಒಂದು ಸಸ್ಪೆಂಡರ್ ಕೇಬಲ್ ದುರ್ಬಲವಾಗಿ ತುಂಡಾದರೂ, ಬೇರೆ ಕೇಬಲ್‌ಗಳ ಮೇಲೆ ಭಾರ ಹೆಚ್ಚಾಗಿ ಅವು ತುಂಡಾಗುವ ಸಾಧ್ಯತೆ ಇರುತ್ತದೆ. ಮೊರ್ಬಿ ತೂಗು ಸೇತುವೆಯ ಒಂದು ಬದಿಯ ಸಸ್ಪೆಂಡರ್ ಕೇಬಲ್‌ಗಳು ಯಥಾಸ್ಥಾನದಲ್ಲೇ ಇವೆ. ಮತ್ತೊಂದು ಬದಿಯ ಸಸ್ಪೆಂಡರ್ ಕೇಬಲ್‌ಗಳು ಮುಖ್ಯ ಕೇಬಲ್ ಜತೆಗೇ ನೀರು ಸೇರಿವೆ. ಈ ಕೇಬಲ್‌ಗಳಲ್ಲಿ ದೋಷವಿತ್ತೇ ಎಂಬುದನ್ನು ಪತ್ತೆ ಮಾಡುವ ಉದ್ದೇಶದಿಂದ ವಿಧಿ ವಿಜ್ಞಾನ ತಜ್ಞರು, ಸಸ್ಪೆಂಡರ್ ಕೇಬಲ್‌ಗಳ ಮಾದರಿಯನ್ನು ಸಂಗ್ರಹಿಸಿದ್ದಾರೆ.

4. ಕನೆಕ್ಟಿಂಗ್ ಪಾಯಿಂಟ್ ವಿಫಲ: ಸಸ್ಪೆಂಡರ್ ಕೇಬಲ್‌ಗಳನ್ನು ಸೇತುವೆಯ ಪ್ಲಾಟ್‌ಫಾರಂಗೆ ಜೋಡಿಸುವ ಕನೆಕ್ಟಿಂಗ್ ಪಾಯಿಂಟ್‌ಗಳು ವಿಫಲವಾದರೂ, ಸೇತುವೆ ಕಳಚಿ ಬೀಳುವ ಸಾಧ್ಯತೆ ಇರುತ್ತದೆ. ಮೊರ್ಬಿ ತೂಗು ಸೇತುವೆಯ ಒಂದು ಬದಿಯ ಕನೆಕ್ಟಿಂಗ್ ಪಾಯಿಂಟ್‌ಗಳು ಪ್ಲಾಟ್‌ಫಾರಂ ಮತ್ತು ಸಸ್ಪೆಂಡರ್ ಕೇಬಲ್‌ಗಳ ಜತೆಯಲ್ಲಿಯೇ ನೀರಿಗೆ ಬಿದ್ದಿವೆ. ಇನ್ನೊಂದು ಬದಿಯ ಎಲ್ಲಾ ಕನೆಕ್ಟಿಂಗ್ ಪಾಯಿಂಟ್‌ಗಳು ತುಂಡಾಗಿವೆ. ಹೀಗಾಗಿ ಕನೆಕ್ಟಿಂಗ್ ಪಾಯಿಂಟ್‌ನಲ್ಲಿ ಬಳಸಲಾಗಿದ್ದ ನಟ್ ಮತ್ತು ಬೋಲ್ಟ್‌ಗಳ ಮಾದರಿಗಳನ್ನೂ ವಿಧಿ ವಿಜ್ಞಾನ ಪರೀಕ್ಷೆಗೆ ಕಳುಹಿಸಲಾಗಿದೆ.

ನವೀಕರಣ ಮಾಹಿತಿ ಇಲ್ಲ

ಮೊರ್ಬಿ ತೂಗುಸೇತುವೆಯ ನವೀಕರಣಕ್ಕೆ ಸಂಬಂಧಿಸಿದ ಅಧಿಕೃತ ಮಾಹಿತಿಗಳು ಲಭ್ಯವಿಲ್ಲ. ನವೀಕರಣಕ್ಕೆ ಗುತ್ತಿಗೆದಾರರನ್ನು ಹೇಗೆ ಆಯ್ಕೆ ಮಾಡಲಾಗಿತ್ತು ಎಂಬುದನ್ನು ತೋರಿಸುವ ಯಾವ ದಾಖಲೆಯೂ ಸಾರ್ವಜನಿಕ ವೇದಿಕೆಗಳಲ್ಲಿ ಲಭ್ಯವಿಲ್ಲ. ಮೊರ್ಬಿ ಜಿಲ್ಲಾಡಳಿತ ಮತ್ತು ಮೊರ್ಬಿ ನಗರಪಾಲಿಕೆ ಜಾಲತಾಣಗಳಲ್ಲಿ ಈ ಟೆಂಡರ್ ಅಥವಾ ಗುತ್ತಿಗೆ ಒಪ್ಪಂದದ ದಾಖಲೆ ಲಭ್ಯವಿಲ್ಲ. ಈ ಜಾಲತಾಣದಲ್ಲಿ 2018ರ ನವೆಂಬರ್ ನಂತರದ ಎಲ್ಲಾ ದಾಖಲೆಗಳನ್ನು ಅಳಿಸಿಹಾಕಲಾಗಿದೆ. ಜಾಲತಾಣದಲ್ಲಿ ಒಂದು ಪತ್ರಿಕಾ ಪ್ರಕಟಣೆಯೂ ಇಲ್ಲ. ಜಾಲತಾಣದ ಎಲ್ಲಾ ವಿಭಾಗಗಳಲ್ಲಿ 'ಯಾವುದೇ ದಾಖಲೆ ಲಭ್ಯವಿಲ್ಲ' ಎಂಬ ಮಾಹಿತಿ ಬಿತ್ತರವಾಗುತ್ತಿದೆ. ಒರೆವಾ ಕಂಪನಿಯು ನವೀಕರಣದ ಗುತ್ತಿಗೆ ಪಡೆದಿತ್ತು ಮತ್ತು ನವೀಕರಣಕ್ಕಾಗಿ ಸೇತುವೆಯನ್ನು 8–12 ತಿಂಗಳು ಬಳಕೆಗೆ ನಿರ್ಬಂಧಿಸಬೇಕು ಎಂದು ಷರತ್ತು ಹಾಕಿತ್ತು ಎಂದು ಮೊರ್ಬಿ ನಗರ ಪಾಲಿಕೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ, ಆದರೆ ಅದೂ ಅಧಿಕೃತ ಮಾಹಿತಿ ಅಲ್ಲ. ಕಾಮಗಾರಿಯ ಸ್ವರೂಪವನ್ನು ವಿವರಿಸುವ ಯಾವ ದಾಖಲೆಯೂ ಲಭ್ಯವಿಲ್ಲ, ಅಧಿಕಾರಿಗಳೂ ಈ ಬಗ್ಗೆ ಮಾಹಿತಿ ನೀಡಿಲ್ಲ. ಎಷ್ಟು ಮೊತ್ತದ ಕಾಮಗಾರಿಗೆ ಒಪ್ಪಿಗೆ ನೀಡಲಾಗಿತ್ತು, ಇಡೀ ಸೇತುವೆಯ ಎಲ್ಲಾ ಬಿಡಿಭಾಗಗಳನ್ನು ಬದಲಿಸಲು ಸೂಚಿಸಲಾಗಿತ್ತೇ ಅಥವಾ ಹಾನಿಯಾಗಿರುವ ಭಾಗಗಳನ್ನು ಮಾತ್ರ ಬದಲಿಸಲು ಸೂಚಿಸಲಾಗಿತ್ತೇ ಎಂಬ ಮಾಹಿತಿ ಲಭ್ಯವಿಲ್ಲ.

ಪ್ರಮುಖ ಅವಘಡಗಳು...


- 2011ರ ಅಕ್ಟೋಬರ್‌ನಲ್ಲಿ ಡಾರ್ಜಲಿಂಗ್‌ನ ವಿಜನ್‌ಬಾರಿಯಲ್ಲಿ ಚುನಾವಣಾ ರ್‍ಯಾಲಿ ಸಾಗುತ್ತಿದ್ದಾಗ ಮರದ ಸೇತುವೆ ಕುಸಿದುಬಿದ್ದಿತ್ತು. ಅವಘಡದಲ್ಲಿ 32 ಜನರು ಮೃತಪಟ್ಟಿದ್ದರು
- ಅರುಣಾಚಲ ಪ್ರದೇಶದ ಕಮೆಂಗ್ ನದಿಯ ಮೇಲೆ ನಿರ್ಮಿಸಲಾಗಿದ್ದ ಪಾದಚಾರಿ ಸೇತುವೆ 2011ರ ಅಕ್ಟೋಬರ್‌ನಲ್ಲಿ ಕುಸಿದು ಬಿದ್ದಿತ್ತು. 63 ಜನರು ಮೃತಪಟ್ಟಿದ್ದರು
- ಕೋಲ್ಕತ್ತದಲ್ಲಿ ನಿರ್ಮಾಣದ ಹಂತದಲ್ಲಿದ್ದ ವಿವೇಕಾನಂದ ಮೇಲ್ಸೇತುವೆ 2016ರಲ್ಲಿ ಕುಸಿದುಬಿದ್ದಿತ್ತು. ಸೇತುವೆ ಅಡಿ ಸಿಲುಕಿ 22 ಜನರು ಮೃತಪಟ್ಟಿದ್ದರು
- ಮುಂಬೈ–ಗೋವಾ ಮಧ್ಯೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಇದ್ದ 100 ವರ್ಷಕ್ಕೂ ಹಳೆಯ ಸೇತುವೆ 2016ರ ಆಗಸ್ಟ್‌ನಲ್ಲಿ ಕುಸಿದುಬಿದ್ದಿತ್ತು. ಸೇತುವೆ ಮೇಲಿದ್ದ ಹಲವು ಕಾರುಗಳು ಮತ್ತು ಒಂದು ಬಸ್ ನದಿ ನೀರಿನಲ್ಲಿ ಕೊಚ್ಚಿ ಹೋಗಿದ್ದವು. ಮೂರು ಶವಗಳು ಪತ್ತೆಯಾಗಿದ್ದವು. 30ಕ್ಕೂ ಹೆಚ್ಚು ಜನರು ನಾಪತ್ತೆಯಾಗಿದ್ದರು

ಪ್ರಜಾವಾಣಿ ಪ್ರಜಾಧ್ವನಿ – ಜನರ ಮನದಾಳದ ಮಾತು

ಪರ್ತ್‌ನಲ್ಲಿ ವಿರಾಟ್ ಕೊಹ್ಲಿ ತಂಗಿದ್ದ ಹೋಟೆಲ್‌ನ ಕೊಠಡಿಯ ವಿಡಿಯೊವನ್ನು ಅಭಿಮಾನಿಯೊಬ್ಬರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದು ಸರಿಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 264

ಮೂರ್ಛೆಹೋದ ಮೇನಾದೇವಿ

ಇಂದ್ರನಿಗಿಂತಲೂ ತೇಜಸ್ವಿಯಾದ ಚಂದ್ರ ಬರುತ್ತಾನೆ. ಅವನನ್ನು ನೋಡಿ ಮೇನಾದೇವಿ 'ಇವನು ರುದ್ರನೇ' ಎಂದು ಕೇಳುತ್ತಾಳೆ. ಇವನೂ ರುದ್ರನಲ್ಲವೆನ್ನುತ್ತಾನೆ ನಾರದ. ಚಂದ್ರನಿಗಿಂತ ತೇಜಸ್ವಿಯಾದ ಸೂರ್ಯ ಬರುತ್ತಾನೆ. ಇವನು ರುದ್ರನೆಂದು ಭಾವಿಸುತ್ತಾಳೆ. ನಾರದ ಅಲ್ಲವೆನ್ನುತ್ತಾನೆ.

ದೇವತೆಗಳ ನಂತರ ಭೃಗು ಮೊದಲಾದ ಮುನಿಗಳು ಶಿಷ್ಯರೊಡನೆ ಬರುತ್ತಾರೆ. ಮುನಿಗಳ ಮಧ್ಯದಲ್ಲಿ ದೇವಗುರುವಾದ ಬೃಹಸ್ಪತಿ ತೇಜಸ್ಸಿನಿಂದ ಬೆಳಗುತ್ತಿದ್ದ. ಅವನನ್ನು ನೋಡಿ 'ಇವನು ರುದ್ರನೇ' ಎಂದು ಕೇಳುತ್ತಾಳೆ. ಮತ್ತೆ ನಾರದ ಅಲ್ಲವೆಂದು ತಲೆಯಾಡಿಸುತ್ತಾನೆ. ಅಷ್ಟರಲ್ಲಿ ಬ್ರಹ್ಮ ಬರುತ್ತಾನೆ. ಇವನೂ ರುದ್ರ ಅಲ್ಲ ಎನ್ನುತ್ತಾನೆ, ನಾರದ. ವಿಷ್ಣು ಬರುತ್ತಾನೆ. ಹರಿಯನ್ನು ನೋಡಿದ ಮೇನಾದೇವಿಗೆ ಇವನೇ ರುದ್ರನೆಂದು ಭಾವಿಸುತ್ತಾಳೆ. ಆಗ ನಾರದ ಅವನು ವಿಷ್ಣು, ಶಂಕರನ ಎಲ್ಲಾ ಕಾರ್ಯಗಳಿಗೂ ಅಧಿಕಾರಿ. ಶಿವನು ಈ ಹರಿಗಿಂತಲೂ ಶ್ರೇಷ್ಠ. ಆ ಶಿವನ ಮಹಿಮೆಯನ್ನು ವರ್ಣಿಸಲು ನನ್ನಿಂದ ಸಾಧ್ಯವಿಲ್ಲ. ಅವನೇ ಎಲ್ಲಾ ಜಗತ್ತಿಗೂ ಒಡೆಯ' ಎನ್ನುತ್ತಾನೆ.

ನಾರದನ ಮಾತನ್ನು ಕೇಳಿ ಮೇನಾದೇವಿ ಸಂತೋಷಪಡುತ್ತಾಳೆ. ಇಂತಹ ಅಳಿಯ ತನಗೆ ಸಿಕ್ಕಿದನಲ್ಲಾ, ಪಾರ್ವತಿಯನ್ನು ಹಡೆದು ತಾನು ಧನ್ಯಳಾದೆ ಅಂದುಕೊಂಡಳು. ಆಗ ರುದ್ರ ತನ್ನ ಅಪಾರ ಗಣಸೇನೆಯೊಡನೆ ಅಲ್ಲಿಗೆ ಬರುತ್ತಾನೆ. ಶಿವಗಣಗಳು ಮೇನಾದೇವಿಯ ಗರ್ವವನ್ನು ಮುರಿಯಲು ಮಾಯೆಗೆ ಅಧೀನವಲ್ಲದ ನಿರ್ವಿಕಾರವಾಗಿರುವ ತಮ್ಮ ಆತ್ಮವನ್ನು ಅವಳಿಗೆ ತೋರಿಸಲು ನಿರ್ಧರಿಸುತ್ತವೆ. ಶಿವನ ಹಿಂದೆ ಭೂತಪ್ರೇತಗಳು ಕಾಣಿಸುತ್ತವೆ. ಕೆಲವು ಗಣಗಳ ಮುಖ ಡೊಂಕಾಗಿದ್ದರೆ, ಇನ್ನು ಕೆಲವು ವಿಕಾರರೂಪ ಹೊಂದಿದ್ದವು. ಕೆಲವು ಗಣಗಳಿಗೆ ಮುಖವೇ ಇರಲಿಲ್ಲ. ಕೆಲವಕ್ಕೆ ಅನೇಕ ಮುಖಗಳಿದ್ದವು. ಕೆಲವು ತಲೆಯೇ ಇಲ್ಲದವು, ಕಿವಿಗಳಿಲ್ಲದವು ಮತ್ತು ಅನೇಕ ಕಿವಿಗಳುಳ್ಳ ಗಣಗಳೂ ಇದ್ದವು. ಈ ರೀತಿಯಾದ ವಿಕಾರವೂ ಭಯಂಕರವೂ ಆದ ರೂಪವುಳ್ಳ ಗಣಗಳು ಎಣಿಸಲಾರದಷ್ಟು ಇದ್ದುವು. ನಾರದ ಆ ಗಣಗಳನ್ನು ಮೇನಾದೇವಿಗೆ ತೋರಿಸಿ, ಇವರು ಶಂಕರನ ಸೇವಕರು. ಇವರ ಮಧ್ಯದಲ್ಲಿ ಶಂಕರನು ಬರುತ್ತಿರುವನು ನೋಡು ಎಂದು ಹೇಳುತ್ತಾನೆ.

ಭೂತಪ್ರೇತ ಗಣಗಳನ್ನು ನೋಡಿ ಮೇನಾದೇವಿಗೆ ತುಂಬಾ ಭಯವಾಗುತ್ತದೆ. ಗಣಗಳ ಮಧ್ಯದಲ್ಲಿ ಶಂಕರನು ನಂದಿಯ ಮೇಲೆ ಕುಳಿತು ಬರುತ್ತಿದ್ದ. ಅವನಿಗೆ ಐದು ಮುಖಗಳೂ ಮೂರು ಕಣ್ಣುಗಳು ಇದ್ದವು. ಶರೀರಕ್ಕೆ ಭಸ್ಮವನ್ನು ಲೇಪನಮಾಡಿಕೊಂಡಿದ್ದ. ರುಂಡಮಾಲೆಯನ್ನು ಧರಿಸಿದ್ದ. ಅವನ ತಲೆಯಲ್ಲಿ ಚಂದ್ರನಿದ್ದ. ಅವನಿಗೆ ಹತ್ತು ಕೈಗಳಿದ್ದವು. ಬ್ರಹ್ಮಕಪಾಲವನ್ನ ಕೈಯಲ್ಲಿ ಹಿಡಿದಿದ್ದ. ಹುಲಿಯ ಚರ್ಮವನ್ನು ಹೊದೆದಿದ್ದ. ಪಿನಾಕವೆಂಬ ಧನುಸ್ಸನ್ನೂ ಶೂಲವನ್ನೂ ಹಿಡಿದಿದ್ದ. ಅವನ ನೇತ್ರಗಳು ವಿಕಾರವಾಗಿದ್ದವು.

ಇಂಥ ವಿಕಾರವಾದ ರೂಪವುಳ್ಳ ಶಿವನನ್ನು ನೋಡಿ ಮೇನಾದೇವಿ ತುಂಬಾ ಹೆದರಿದಳು. ಇಂಥವನು ಪಾರ್ವತಿ ಗಂಡನಾ – ಅಂತ ಆಕೆ ಮನಸ್ಸು ಕದಡಿ ಶರೀರವು ಕಂಪಿಸಿತು. ಆಗ ಅವಳು ಗಾಳಿಯಿಂದ ಹೊಡೆಯಲ್ಪಟ್ಟ ಬಳ್ಳಿಯಂತೆ ದೊಪ್ಪನೆ ಬಿದ್ದು, ಮೂರ್ಛೆ ಹೋದಳು. ಸಖಿಯರು ಉಪಚರಿಸಿದ ಬಳಿಕ ಮೆಲ್ಲಮೆಲ್ಲಗೆ ಎಚ್ಚರಗೊಂಡಳು.

ಇಲ್ಲಿಗೆ ಪಾರ್ವತೀಖಂಡದ ನಲವತ್ತಮೂರನೆಯ ಅಧ್ಯಾಯ ಮುಗಿಯಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಹಿಂದೂಗಳನ್ನು ಕೊಂದು, ಅವರ ಜನಸಂಖ್ಯೆಯನ್ನು ಕಡಿಮೆ ಮಾಡಲು ಮುಸ್ಲಿಮರು ಸಂಚು ರೂಪಿಸಿದ್ದರು. ಇದಕ್ಕಾಗಿ ಉತ್ತರ ಪ್ರದೇಶದ ಮುಜಫ್ಫರನಗರದಲ್ಲಿ ರಸಗುಲ್ಲಾ ತಯಾರಿಕೆ ವೇಳೆ ಅಪಾರ ಪ್ರಮಾಣದ ವಿಷ ಬೆರೆಸಲಾಗಿತ್ತು. ಆ ರಸಗುಲ್ಲಾವನ್ನು ದೀಪಾವಳಿಯಲ್ಲಿ ಮಾರಾಟ ಮಾಡಲು ಉದ್ದೇಶಿಸಿದ್ದರು. ಆದರೆ, ಈ ಬಗ್ಗೆ ಮಾಹಿತಿ ಪಡೆದ ಪೊಲೀಸರು ಶೋಧ ಕಾರ್ಯ ನಡೆಸಿ ರಸಗುಲ್ಲಾವನ್ನು ನಾಶ ಮಾಡಿದರು. ಮುಸ್ಲಿಮರನ್ನು ಬಂಧಿಸಿದರು ಎಂಬ ವಿವರ ಇರುವ ವಿಡಿಯೊ ಮತ್ತು ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗಿವೆ. ಸುದರ್ಶನ ಟಿ.ವಿ.ಯ ಸುದರ್ಶನ ಚೌಹಾಣ್ಕೆ ಅಂತಹ ವಿಡಿಯೊ ಹಂಚಿಕೊಂಡಿದ್ದಾರೆ. ಪೊಲೀಸರು ರಸಗುಲ್ಲಾವನ್ನು ಹಳ್ಳಕ್ಕೆ ಸುರಿಯುವ ದೃಶ್ಯ ಅದರಲ್ಲಿ ಇದೆ. ಇದು ಸುಳ್ಳು ಸುದ್ದಿ.

'ಇದು ತಿರುಚಲಾದ ಮಾಹಿತಿ. ಮುಜಫ್ಫರನಗರದ ಪಟ್ಟಣವೊಂದರಲ್ಲಿನ ರಸಗುಲ್ಲಾ ತಯಾರಿಕೆಯ ಅಂಗಡಿಗಳಲ್ಲಿ ಇದೇ ಅಕ್ಟೋಬರ್ 21ರಂದು ಪೊಲೀಸರು ಮತ್ತು ಜಿಲ್ಲಾ ಆರೋಗ್ಯ ಅಧಿಕಾರಿಗಳು ಶೋಧ ಕಾರ್ಯ ನಡೆಸಿದ್ದರು. 'ರಸಗುಲ್ಲಾ ತಯಾರಿಕೆಯಲ್ಲಿ ಕಳಪೆ ಗುಣಮಟ್ಟದ ಸಾಮಗ್ರಿ ಮತ್ತು ನಿಷೇಧಿತ ರಾಸಾಯನಿಕಗಳನ್ನು ಬಳಸುತ್ತಿರುವುದು ಪತ್ತೆಯಾಯಿತು. ಆಗ 400 ಕ್ವಿಂಟಲ್‌ನಷ್ಟು ರಸಗುಲ್ಲಾವನ್ನು ನಾಶಮಾಡಲಾಯಿತು. ತಯಾರಿಕೆಯಲ್ಲಿ ತೊಡಗಿದ್ದ ಹಲವರನ್ನು ಬಂಧಿಸಲಾಯಿತು' ಎಂದು ಮುಜಫ್ಫರನಗರ ಪೊಲೀಸರು ಟ್ವೀಟ್ ಮಾಡಿದ್ದಾರೆ. ಬಂಧಿತರಲ್ಲಿ ಹಿಂದೂಗಳು ಮತ್ತು ಮುಸ್ಲಿಮರು ಇದ್ದಾರೆ. ಹಿಂದೂಗಳನ್ನು ಕೊಲ್ಲಲು ಮುಸ್ಲಿಮರು ರಸಗುಲ್ಲಾದಲ್ಲಿ ವಿಷ ಬೆರೆಸಿದ್ದಾರೆ ಎಂಬುದು ಸುಳ್ಳು ಸುದ್ದಿ' ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು – ಗುರುರಾಜ ಕರಜಗಿ

ಅತೃಪ್ತಿ – ಅವಿಧೇಯತೆ

ಅವರೆಷ್ಟು ಧನವಂತರ್, ಇವರೆಷ್ಟು ಬಲವಂತರ್ |
ಅವರೆಷ್ಟು ಯಶವಂತರ್ ಎನುವ ಕರುಬಿನಲಿ ||
ಭವಿಕ ನಿನಗೆಷ್ಟಿಹುದೊ ಮರೆತು ನೀಂ ಕೊರಗುವುದು |
ಶಿವನಿಗೆ ಕೃತಜ್ಞತೆಯೆ? – ಮಂಕುತಿಮ್ಮ || 747 ||

ಪದ-ಅರ್ಥ: ಕರುಬಿನಲಿ = ಕೊರಗಿನಲ್ಲಿ, ಭವಿಕ = ಯುಕ್ತವಾದದ್ದು, ಯೋಗ್ಯವಾದದ್ದು,

ವಾಚ್ಯಾರ್ಥ: ಅವರೆಷ್ಟು ಶ್ರೀಮಂತರು, ಇವರೆಷ್ಟು ಶಕ್ತಿವಂತರು, ಅವರೆಷ್ಟು ಯಶೋವಂತರು ಎಂದು ಹೊಟ್ಟೆಕಿಚ್ಚು ಪಡುತ್ತ, ನಿನಗೆ ಯುಕ್ತವಾದದ್ದು, ಯೋಗ್ಯವಾದದ್ದು ಎಷ್ಟು ಬಂದಿದೆಯೋ ಅದನ್ನು ಮರೆತು ಕೊರಗುವುದು, ನೀನು ಶಿವನಿಗೆ ತೋರುವ ಕೃತಜ್ಞತೆಯೆ?

ವಿವರಣೆ: ಎಲ್ಲರೂ ಸುಖವನ್ನು ಬಯಸುತ್ತಾರೆ. ಅದಕ್ಕಾಗಿ ಸರ್ವಪ್ರಯತ್ನಗಳನ್ನು ಮಾಡುತ್ತಾರೆ. ಆದರೆ ಯಾರೂ ಸುಖವಾಗಿದ್ದಂತೆ ಕಾಣುತ್ತಿಲ್ಲ. ಎಲ್ಲರಿಗೂ ಯಾವುದೋ ವಿಷಯದ ಚಿಂತೆ, ಕೊರಗು. ಹಾಗೆಂದರೆ ಯಾರೂ ಸುಖವಾಗಿಲ್ಲ ಎಂದರ್ಥವಲ್ಲ. ಸರ್ವರೂ ತಕ್ಕಮಟ್ಟಿಗೆ ಸಂತೋಷವಾಗಿಯೇ ಇರುತ್ತಾರೆ. ಆದರೆ ಅವರು ತಮ್ಮನ್ನು ಇತರರಿಗೆ ಹೋಲಿಸಿಕೊಂಡು ತಾವು ಅವರಂತೆ ಸುಖಿಯಾಗಿಲ್ಲ ಎಂದು ಭಾವಿಸುತ್ತಾರೆ. ಇಂಗ್ಲೀಷಿನಲ್ಲಿ ಒಂದು ಮಾತಿದೆ. 'ನಾವು ಸುಖವಾಗಿರಬೇಕೆಂದು ಬಯಸಿದರೆ ಅದು ಸುಲಭ. ಆದರೆ ನಾವು ಪರರಿಗಿಂತ ಹೆಚ್ಚು ಸುಖವಾಗಿರಬೇಕೆಂದು ಬಯಸುತ್ತೇವೆ. ಅದು ಕಷ್ಟ. ಯಾಕೆಂದರೆ ಉಳಿದವರು ನಿಜವಾಗಿಯೂ ಇರುವುದಕ್ಕಿಂತ ಹೆಚ್ಚು ಸುಖವಾಗಿದ್ದಾರೆ ಎಂದು ನಾವು ಭಾವಿಸುತ್ತೇವೆ'. ದೂರದರ್ಶನದಲ್ಲಿ ಒಂದು ಜಾಹೀರಾತು ಬರುತ್ತಿತ್ತು. 'ನನ್ನ ಪಕ್ಕದ ಮನೆಯವರು ನಮಗಿಂತ ಉದ್ದವಾದ ಕಾರು ತರುವವರೆಗೆ ನಾನು ಸಂತೋಷವಾಗಿಯೇ ಇದ್ದೆ'. ಹಾಗೆಂದರೇನು? ನನ್ನ ಸುಖ ಪಕ್ಕದ ಮನೆಯವನ ವಸ್ತುಗಳ ಮೇಲಿದೆ! ನಮ್ಮಲ್ಲಿದ್ದುದಕಿಂತ ಅವರ ವಸ್ತುಗಳು ಚೆನ್ನಾಗಿದ್ದರೆ ನಮ್ಮ ಹೊಟ್ಟೆ ಉರಿಯುತ್ತದೆ.

ಅದನ್ನು ಈ ಕಗ್ಗ ಎತ್ತಿ ತೋರಿಸುತ್ತದೆ. ಅವರು ಎಷ್ಟು ಶ್ರೀಮಂತರು, ಇವರು ಎಷ್ಟು ಶಕ್ತಿಶಾಲಿಗಳು, ಅವರನ್ನು ನೋಡಿ, ಎಷ್ಟು ಯಶಸ್ಸು ಬಂದಿದೆ ಎಂದು ಜನರು ಹೊಟ್ಟೆಕಿಚ್ಚು ಪಡುತ್ತಾರೆ. ಅದು ಬೇಕೆ? ಅವರಿವರನ್ನು ಕಂಡು ತಮ್ಮ ಬದುಕಿನ ಬಗ್ಗೆ ಹೀನತೆಯಿಂದ ನರಳುವ ಬದಲು ನಮಗೆ ಯುಕ್ತವಾದದ್ದನ್ನು, ನಮ್ಮ ಶಕ್ತಿ, ಯೋಗ್ಯತೆಗಳಿಗೆ ಸರಿಯಾದದ್ದನ್ನು, ಭಗವಂತ ಕೊಟ್ಟಿದ್ದಾನೆಂದು ಸಂತೋಷಪಡುವುದು ಆರೋಗ್ಯಕರವಾದ ಬದುಕಿಗೆ ಅವಶ್ಯವಾದದ್ದು. ನಮಗೆ ಏನು ಬೇಕು ಎನ್ನುವುದೇ ತಿಳಿದಿಲ್ಲ. ಭಗವಂತ ನೀಡಿದ್ದೇ ಒಳ್ಳೆಯದೆಂಬ ವಿನಯ, ಕೃತಜ್ಞತೆ ಇರಬೇಕು. ಶ್ರೀ ರಾಮಕೃಷ್ಣರು ಒಂದು ಕಲ್ಪತರುವಿನ ಕಥೆ ಹೇಳುತ್ತಿದ್ದರು. ಒಬ್ಬ ಪ್ರವಾಸಿ ಅದರ ಕೆಳಗೆ ಮಲಗಿದ. ಅದು ಕೇಳಿದ್ದನ್ನು ನೀಡುವ ಕಲ್ಪವೃಕ್ಷ ಎಂಬುದು ಅವನಿಗೆ ತಿಳಿದಿಲ್ಲ. ಇಲ್ಲಿ ಒಂದು ಮೆತ್ತನೆಯ ಹಾಸಿಗೆ ಇದ್ದರೆ ಎಷ್ಟು ಚೆಂದ ಎಂದುಕೊಂಡ. ಹಾಸಿಗೆ ಪ್ರತ್ಯಕ್ಷ. ಒಂದು ಮಂಚ ಬೇಡಿದ. ಅದೂ ಬಂತು. ಮೃಷ್ಟಾನ್ನ ಭೋಜನದ ಆಸೆ ಮೂಡಿತು. ಅದೂ ಸಿದ್ಧವಾಯಿತು. ಅಯ್ಯೋ ಈ ನಿರ್ಜನ ಪ್ರದೇಶದಲ್ಲಿ ಹುಲಿ ಬಂದರೇನು ಗತಿ ಎಂದುಕೊಂಡ. ಅದೂ ಬಂದು ಇವನನ್ನು ತಿಂದು ಹೋಯಿತು. ಯಾವುದರಲ್ಲೂ ನೆಮ್ಮದಿಯನ್ನು ಕಾಣದಿರುವುದು, ಬೇರೆಯವರನ್ನು ನೋಡಿ ಕೊರಗುವುದು, ನಮ್ಮನ್ನು ರಕ್ಷಿಸುವ ಶಿವನಿಗೆ ನಾವು ತೋರುವ ಅವಿಧೇಯತೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ನವೆಂಬರ್ 2, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ನವಮಿ ಗಂ. 21-10 ನಕ್ಷತ್ರ: ಧನಿಷ್ಠಾ ಗಂ. 25-43 ಯೋಗ: ಗಂಡ ಗಂ. 10-26, ಕರಣ: ಬಾಲವ ಗಂ. 10-06, ತುಲಾ ಮಾಸದ 15 ನೇ ದಿನ.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-28 ಸೂರ್ಯಾಸ್ತ : 06-00 ಮುಸ್ಲಿಂ ದಿನಾಂಕ : 06 ರಬಿಯುಸ್ಸಾನಿ
ದಿನ ವಿಶೇಷ : ಜಗದ್ಧಾತ್ರಿ ಪೂಜಾ, ಅಕ್ಷಯ ನವಮಿ
ಅದೃಷ್ಟ ಸಂಖ್ಯೆ : 7, 10

ಮೇಷ: ಮಿತ್ರರ ಉಪಾಯದಿಂದ ನೀವು ಸಂಕಟದಿಂದ ಪಾರಾಗುವಂತಾಗಲಿದೆ. ಈ ದಿನ ಎಂತಹಾ ಅನಿವಾರ್ಯ ಪರಿಸ್ಥಿತಿಗೂ ಯಾರಿಗೂ ಸಾಲ ಕೊಡದಿರಲು ನಿಶ್ಚಯಿಸುವುದು ಉತ್ತಮ. ಕೆಲಸದಲ್ಲಿ ಹೊಸ ಪ್ರಯತ್ನಗಳನ್ನು ಪ್ರಯೋಗಿಸಿ.

ವೃಷಭ: ದೊಡ್ಡ ಸಮಾರಂಭವೊಂದರಲ್ಲಿ ಪಾಲ್ಗೊಳ್ಳುವ ಉತ್ತಮ ಅವಕಾಶ ಲಭಿಸುವುದು. ನೀವು ವೃಥಾ ಕಾಲಹರಣ ಮಾಡಿದರೆ ನಷ್ಟ ಅನುಭವಿಸುವಿರಿ. ಬಿಡುವಿಲ್ಲದ ಕೆಲಸದಲ್ಲೂ ಮನಸ್ಸಿಗೆ ನೆಮ್ಮದಿ ಇರುವುದು ಆಶ್ಚರ್ಯವೆನಿಸಲಿದೆ.

ಮಿಥುನ: ವೃತ್ತಿಯಲ್ಲಿ ನಿಮ್ಮ ನಾಯಕತ್ವದ ಗುಣಗಳನ್ನು ಪ್ರದರ್ಶಿಸಲು ವೇದಿಕೆ ಸಿಗಲಿದೆ. ಕೌಟುಂಬಿಕ ವಿಷಯಗಳತ್ತ, ಅದರಲ್ಲೂ ಮಡದಿಯ ಆರೋಗ್ಯದ ಬಗ್ಗೆ ಗಮನಹರಿಸಬೇಕಾಗುವುದು. ಭೂ ವ್ಯವಹಾರಗಳಿಂದ ಲಾಭ ಗಳಿಸಬಹುದು.

ಕರ್ಕಾಟಕ: ನಿರುದ್ಯೋಗಿಗಳಿಗೆ ಹಂಗಾಮಿ ನೌಕರಿಯನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಗಲಿದೆ. ಮಾರ್ಗದರ್ಶಕರ ವಾಕ್ಯ ಅನುಸರಿಸಿದರೆ ಜೀವನ ರೂಪಿಸಿಕೊಳ್ಳಲು ಸುಲಭವಾಗುತ್ತದೆ. ಅವಿವಾಹಿತರಿಗೆ ವಿವಾಹ ಯೋಗ.

ಸಿಂಹ: ಈ ದಿನ ಪ್ರಾರಂಭಿಸಿದ ಕೆಲಸವನ್ನು ಸಂಪೂರ್ಣವಾಗಿ ಕೊನೆಗಾಣಿಸುವ ಬಗ್ಗೆ ಜವಾಬ್ದಾರಿ ಇರಲಿ. ಧನ ಆದಾಯಕ್ಕೆ ಯಾವುದೇ ಅಡ್ಡಿ ಇರುವುದಿಲ್ಲ. ಹಿರಿಯರ ಆರೋಗ್ಯದ ವಿಚಾರದಲ್ಲಿ ವ್ಯಯವೂ ಅನಿವಾರ್ಯವಾಗುವುದು.

ಕನ್ಯಾ: ಕಾರ್ಯ ಸಾಧನೆಗಾಗಿ ಪ್ರಯಾಣ ಬೆಳೆಸಬೇಕಾಗುತ್ತದೆ. ದ್ರವ ರೂಪದ ವಸ್ತುಗಳ ಮಾರಾಟಗಾರರಿಗೆ ಅಧಿಕ ಲಾಭ. ಉಂಟಾಗುವುದು. ದೊಡ್ಡ ವ್ಯವಹಾರವನ್ನು ಗಮನದಲ್ಲಿಟ್ಟುಕೊಂಡು ಈ ದಿನ ಸಾಲ ಮಾಡುವುದು ಸರಿಯಲ್ಲ.

ತುಲಾ: ದೈವಾನುಗ್ರಹದಿಂದ ಸಾಹಸ ಕಾರ್ಯಗಳು ಕೈಗೂಡಿ ಬಹು ಮಟ್ಟಿಗೆ ನಿರೀಕ್ಷಿತ ಫಲ ಲಭಿಸಲಿದೆ. ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಮೇಲುಗೈ ಸಾಧಿಸುವಿರಿ. ವಕೀಲರು, ನ್ಯಾಯಾಂಗ ಇಲಾಖಾ ಅಧಿಕಾರಿಗಳು ಹೆಚ್ಚಿನ ಪ್ರಗತಿ ಕಾಣುವರು.

ವೃಶ್ಚಿಕ: ಷೇರು ಬಂಡವಾಳ ವ್ಯವಹಾರಗಳಿಂದ ನಿರೀಕ್ಷೆಗೆ ಮೀರಿದ ಲಾಭವನ್ನು ಪಡೆಯುವಿರಿ. ಇನ್ನೊಬ್ಬರಿಗೆ ಹಿತವಾಕ್ಯಗಳನ್ನು ಹೇಳುವ ಸಲುವಾಗಿ ಮಾತಿನ ಚಕಮಕಿ ವಿಪರೀತಕ್ಕೆ ಹೋದೀತು. ಸುಖ ಭೋಜನ ಪ್ರಾಪ್ತಿಯಾಗಲಿದೆ.

ಧನು: ಮಾನಸಿಕವಾಗಿ ಕುಗ್ಗದೇ ಧೈರ್ಯದಿಂದಿರುವುದು ಈ ದಿನದ ನಿಮ್ಮ ಮೂಲ ಮಂತ್ರವಾಗಿದೆ. ಸರ್ಕಾರಿ ವ್ಯವಹಾರಗಳಲ್ಲಿ ಅನುಕೂಲಕರ ವಾತಾವರಣ ಸಿಗಲಿದೆ. ಇನ್ನೊಬ್ಬರ ನಯವಾದ ಮಾತುಗಳಿಗೆ ಮರುಳಾಗಬೇಡಿ.

ಮಕರ: ಬಂಧನದ ಭೀತಿ ಅಥವಾ ಮಾನ ಹಾನಿಯಾಗುವ ಲಕ್ಷಣಗಳಿದೆ. ಜಾಗ್ರತರಾಗಿರಿ. ನಿಮ್ಮ ಪ್ರತಿಭೆಗೆ ಅಥವಾ ನಿಮ್ಮ ಪರಿಶ್ರಮಕ್ಕೆ ತಕ್ಕಂತಹ ಫಲ ದೊರೆತು ಸಂತೋಷವಾಗುವುದು. ಶೀತ ಸಂಬಂಧಿತ ರೋಗ ಕಾಡಬಹುದು.

ಕುಂಭ: ತುಂಬಾ ದಿನಗಳಿಂದ ಕಾಡುತ್ತಿದ್ದ ಸಮಸ್ಯೆಗೆ ದೇವರೇ ದಾರಿ ತೋರಿದಂತೆ ಅಪರಿಚಿತನೊಬ್ಬನ ಭೇಟಿಯಿಂದ ಉತ್ತರ ಸಿಗುತ್ತದೆ. ದುಷ್ಟರ ಸಹವಾಸದಿಂದ ದೂರವಿರುವ ಪ್ರಯತ್ನ ನಿಮ್ಮ ಗೌರವವನ್ನು ಕಾಪಾಡುತ್ತದೆ.

ಮೀನ: ರಕ್ಷಣಾ ಕ್ಷೇತ್ರದಲ್ಲಿರುವವರಿಗೆ ಹಂತ ಹಂತವಾಗಿ ಅಭಿವೃದ್ಧಿ ತೋರಿ ಬರಲಿದೆ. ನಿಮ್ಮ ಶುದ್ಧಹಸ್ತದ ಗುಣದಿಂದ ಹಿರಿಯ ವ್ಯಕ್ತಿಯೊಬ್ಬರ ಜೊತೆ ಕೆಲಸ ಮಾಡುವ ಅವಕಾಶ ಸಿಗುತ್ತದೆ. ಗುರು ಹಿರಿಯರ ದರ್ಶನ ಯೋಗ.

ಪದಬಂಧ 5126

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಲೋಭ ನಡುವಿದ್ದಾಗ ಮೂಡಿದ ಆಸೆ (4)
3.ವಿಷ್ಣುವಿನ ಇನ್ನೊಂದು ಹೆಸರು (4)
5.ಮುಳ್ಳುಗಳ ನಡುವೆ ಅರಳುವ ಸುಂದರ ಹೂ(3)
7.ಸಜಾತಿಯಲ್ಲೇ ಜೈಲುವಾಸ ಬಂದಿದೆಯಲ್ಲಾ!(2)
9.ರಮಣನ ಎದುರು ನಡೆದ ಕಾಳಗ (2)
10.ಪುಡಿ ಮಾಡಿದ ಧಾನ್ಯ (2)
11.ಆವರಣ ಚಿಹ್ನೆ (2)
12.ಮುದುಕರಲ್ಲಿ ಆಭರಣ ಹುಡುಕಿ! (2)
14.ಮಿತಿಗೆ ಒಳಪಟ್ಟಿದ್ದು ಮಿಡಿತದಲ್ಲಿದೆ (2)
16.ಪಾಕ ಮಾಡುವಾಗ ಕುಡಿದಿರುವ ಶರಬತ್ತು(3)
18.ಕಡ ಕೇಳಿ ಪಡೆದಿರುವ ಭರಣಿ (4)
19.ತಂದೆಯ ತಂದೆಯಿವನು (4))

ಮೇಲಿಂದ ಕೆಳಕ್ಕೆ
1.ಪ್ರಯಾಸದಿಂದ ಕೈಗೊಂಡಿರುವ ಸಂಚಾರ (3)
2.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ (2)
3.ಬಿಂಕದಿಂದ ತಯಾರಿಸಿಕೊಟ್ಟ ಲೋಹದ ಎಳೆ (2)
4.ತಾರುಣ್ಯವನ್ನು ಹೊಂದಿದವನು (3)
6.ಖರ್ಚು ಕಳೆದು ಉಳಿದುದು (2)
8.ಮತ್ತೊಬ್ಬನ ಸಾಲಕ್ಕೆ ಹೊಣೆ ನಿಂತ ವ್ಯಕ್ತಿ (5)
9.ಮಾಘ ಶುದ್ಧ ಸಪ್ತಮಿಯನ್ನು ಹೀಗೂ ಹೇಳುವರು (5)
12.ಈತ ವಯಸ್ಸಾದವನು (3)
13.ಮಾತಿಲ್ಲದ ನೀರವತೆ (2)
15.ಪ್ರಕಾರ ಈ ತರ ಬಂದಿದೆ! (3)
16.ಪಾನಕ ಕುಡಿದು ಮಾಡಿರುವ ಅಡುಗೆ (2)
17.ಪಿನಾಕದ ಬಳಿ ಕಾಣಿಸಿಕೊಂಡಿರುವ ಮಂಗ (2)

1			2	■	3			4
	■	■	5	6		■	■	
7	8	■	■		■	■	9	
■		■	■	■	■	■		■
■	10		■	■	■	11		■
■		■	■	■	■	■		■
12		■	■	13	■	■	14	15
	■	■	16		17	■	■	
18				■	19			

5125ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕಲಬೆರಕೆ 4.ಲಾಮಂಚ
5.ಟಕಸಂಣಪ್ರಾ 8.ವಾಯುಪಥಿಕ
11.ಶರಣಾಗತ 14.ಪ್ರತ್ಯಕ್ಷ
15.ಪಾಕಪ್ರವೀಣ

ಮೇಲಿಂದ ಕೆಳಕ್ಕೆ:
1.ಕವಾಟ 2.ರಪಣ
3.ಕಚಗುಳಿ 4.ಲಾಕ್ಷಣಿಕ
6.ಕಕ್ಷೆ 7.ಪ್ರಾಯೋಪವೇಶ
8.ವಾಮಪಕ್ಷ 9.ವಾನಪ್ರಸ್ಥ
10.ಜಾಗ 12.ರಸಿಕ
13.ತಲ್ಲಣ

ಸುಡೊಕು 5512

	4		1		3	5		7
7		6	4				3	1
	3				7	4		
6	1				4			
			8	1	2	6		4
8	2						1	
		3		2		9		8
9			3		6		7	
4		1		8			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5511 ಸುಡೊಕು

3	5	2	1	9	4	8	6	7
6	1	4	5	8	7	9	3	2
7	9	8	6	3	2	5	1	4
2	7	9	8	1	3	6	4	5
1	3	6	7	4	5	2	9	8
4	8	5	9	2	6	3	7	1
5	4	1	2	6	9	7	8	3
9	2	3	4	7	8	1	5	6
8	6	7	3	5	1	4	2	9


ಎಟಿಎಫ್ ಬೆಲೆ ಏರಿಕೆ, ಎಲ್‌ಪಿಜಿ ದರ ಇಳಿಕೆ

ನವದೆಹಲಿ (ಪಿಟಿಐ): ವಿಮಾನ ಇಂಧನ (ಎಟಿಎಫ್) ದರವನ್ನು ಮಂಗಳವಾರ ಶೇಕಡ 4.2ರಷ್ಟು ಹೆಚ್ಚಿಸಲಾಗಿದೆ. ಇದೇ ವೇಳೆ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು ₹ 115.5ರಷ್ಟು ಇಳಿಕೆ ಮಾಡಲಾಗಿದೆ.

ಎಟಿಎಫ್ ದರವು ದೆಹಲಿಯಲ್ಲಿ ಪ್ರತಿ ಕಿಲೋ ಲೀಟರ್‌ಗೆ ₹ 4,842ರಷ್ಟು ಹೆಚ್ಚಳವಾಗಿದ್ದು, ₹ 1.20 ಲಕ್ಷಕ್ಕೆ ತಲುಪಿದೆ. ದೆಹಲಿಯಲ್ಲಿ ವಾಣಿಜ್ಯ ಬಳಕೆ ಎಲ್‌ಪಿಜಿ ದರವು ಮಂಗಳವಾರದ ಇಳಿಕೆಯ ನಂತರದಲ್ಲಿ ಪ್ರತಿ ಸಿಲಿಂಡರ್‌ಗೆ ₹ 1,744ಕ್ಕೆ ತಲುಪಿದೆ.

ಜೂನ್ ನಂತರದಲ್ಲಿ ವಾಣಿಜ್ಯ ಬಳಕೆ ಎಲ್‌ಪಿಜಿ ದರ ಇಳಿಕೆಯಾಗುತ್ತಿರುವುದು ಇದು ಏಳನೆಯ ಬಾರಿ. ಮನೆಗಳಲ್ಲಿ ಬಳಸುವ ಎಲ್‌ಪಿಜಿ ಸಿಲಿಂಡರ್ ದರದಲ್ಲಿ ಬದಲಾವಣೆ ಆಗಿಲ್ಲ.

ಷೇರುಪೇಟೆ ವಹಿವಾಟು




ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,012
ಇಂದಿನ ಅಂತ್ಯ	18,145
▲	133
ದಿನದ ಗರಿಷ್ಠ	18,175

ವಿನಿಮಯ ದರ

$ ಡಾಲರ್	82.59
£ ಪೌಂಡ್	95.36
€ ಯೂರೊ	82.15
¥ ಯೆನ್ (100ಕ್ಕೆ)	55.94

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹520
12 ಮೊಟ್ಟೆಗೆ	₹67
ಮೈಸೂರು	
100 ಮೊಟ್ಟೆಗೆ	₹520

ಖಾದ್ಯ ತೈಲ ಮುಂಬೈ



(10 ಕೆಜಿ)	
ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1360 (1342)
ಸೂರ್ಯಕಾಂತಿ (ರಿಫೈನ್ಡ್)	₹1600 (1570)
ಪಾಮೋಲಿನ್	₹1000 (985)

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹145.50
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹132

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಕೆ.ಜಿ)	₹400-680
ದ್ವಿತಳಿ (ಕೆ.ಜಿ)	₹506-802

ಕರ್ಣಾಟಕ ಬ್ಯಾಂಕ್: ₹411 ಕೋಟಿ ಲಾಭ


ಮಹಾಬಲೇಶ್ವರ ಎಂ.ಎಸ್.

ಮಂಗಳೂರು: ಸೆಪ್ಟೆಂಬರ್ 30ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಕರ್ಣಾಟಕ ಬ್ಯಾಂಕ್ ₹ 411.47 ಕೋಟಿ ನಿವ್ವಳ ಲಾಭ ಗಳಿಸಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಬ್ಯಾಂಕ್‌ನ ನಿವ್ವಳ ಲಾಭ ಶೇ 228ರಷ್ಟು ಏರಿಕೆಯಾಗಿದೆ. ಒಂದು ತ್ರೈಮಾಸಿಕದಲ್ಲಿ ಬ್ಯಾಂಕ್ ಈವರೆಗೆ ದಾಖಲಿಸಿದ ಗರಿಷ್ಠ ಏರಿಕೆ ಇದಾಗಿದೆ.

ಮಂಗಳೂರಿನಲ್ಲಿ ನಡೆದ ಬ್ಯಾಂಕ್‌ನ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಸೆಪ್ಟೆಂಬರ್ ತ್ರೈಮಾಸಿಕ ಹಾಗೂ ಮೊದಲ ಅರ್ಧವಾರ್ಷಿಕ ಲೆಕ್ಕಪತ್ರಗಳನ್ನು ಅಂಗೀಕರಿಸಲಾಯಿತು. ಈ ಅವಧಿಯಲ್ಲಿ ಬ್ಯಾಂಕ್ ಒಟ್ಟಾರೆ ₹ 525.52 ಕೋಟಿ ನಿವ್ವಳ ಲಾಭ ದಾಖಲಿಸಿದೆ. ಇದು ಸಾರ್ವಕಾಲಿಕ ಗರಿಷ್ಠ ದಾಖಲೆಯಾಗಿದೆ. ಕಳೆದ ವರ್ಷದ (2021) ಮೊದಲ ಆರು ತಿಂಗಳಲ್ಲಿ ಬ್ಯಾಂಕ್ ₹231.36 ಕೋಟಿ ನಿವ್ವಳ ಲಾಭ ದಾಖಲಿಸಿತ್ತು.

ಬ್ಯಾಂಕ್‌ನ ನಿವ್ವಳ ಅನುತ್ಪಾದಕ ಆಸ್ತಿ ಪ್ರಮಾಣವು ಶೇ 1.72ಕ್ಕೆ ಇಳಿಕೆಯಾಗಿದೆ. ಕಳೆದ ವರ್ಷ ಅದು ಶೇ 2.16ರಷ್ಟಿತ್ತು. ಸೆಪ್ಟೆಂಬರ್ 30ಕ್ಕೆ ಕೊನೆಗೊಂಡ ಅವಧಿಯಲ್ಲಿ ಬ್ಯಾಂಕ್ ಒಟ್ಟಾರೆ ₹ 1,41,505.87 ಕೋಟಿ ವಹಿವಾಟು ನಡೆಸಿದೆ. ಇದು ಸಹ ಹೊಸ ದಾಖಲೆಯಾಗಿದೆ.

'ಶಿಸ್ತುಬದ್ಧ ವೆಚ್ಚ, ಡಿಜಿಟಲೀಕರಣ, ಗ್ರಾಹಕರೆಡೆಗಿನ ಬದ್ಧತೆಯ ಪರಿಣಾಮವಾಗಿ ಈ ಸಾಧನೆ ಸಾಧ್ಯವಾಗಿದೆ' ಎಂದು ಬ್ಯಾಂಕ್‌ನ ಎಂ.ಡಿ. ಹಾಗೂ ಸಿಇಒ ಮಹಾಬಲೇಶ್ವರ ಎಂ.ಎಸ್. ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ	01-11-2022
ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	9400-9500
ದಪ್ಪ ಗುಜರಾತ್(ಹೊಸ)	10100-10200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1285 (1265)
ಪಾಮ್ ವಾರದ ಡೆಲಿವರಿ	998 (983)
ಸೂರ್ಯಕಾಂತಿ ಎಣ್ಣೆ ಕಚ್ಚಾ	1530 (1500)
ಚಿನ್ನ - ಬೆಳ್ಳಿ (ಜವೇರಿ ಬಜಾರ್)	
ಅಪರಂಜಿ ಚಿನ್ನ 10ಗ್ರಾಂ	50,450 (50,200)
ಬೆಳ್ಳಿ ಕೆ.ಜಿ	59,000 (57,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಜಾಗತಿಕ ಹೂಡಿಕೆದಾರರ ಸಮಾವೇಶ ಕುರಿತು ಸಿ.ಎಂ ಮಾತು

'ಅರ್ಧ ಹಾದಿ ಕ್ರಮಿಸಿಯಾಗಿದೆ'

• ವಿಜಯ್ ಜೋಷಿ



ಪ್ರಜಾವಾಣಿ ಸಂದರ್ಶನ
ಬಸವರಾಜ ಬೊಮ್ಮಾಯಿ

ಬೆಂಗಳೂರು: ಜಾಗತಿಕ ಬಂಡವಾಳ ಹೂಡಿಕೆದಾರರ ಮೂರು ದಿನಗಳ ಸಮಾವೇಶವು ಬುಧವಾರ ಬೆಂಗಳೂರಿನಲ್ಲಿ ಆರಂಭವಾಗಲಿದೆ. ಒಟ್ಟು ₹ 5 ಲಕ್ಷ ಕೋಟಿಯಷ್ಟು ಹೆಚ್ಚಿನ ಬಂಡವಾಳ ಆಕರ್ಷಣೆಯ ಗುರಿಯೊಂದಿಗೆ ನಡೆಯಲಿರುವ ಈ ಸಮಾವೇಶದ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 'ಪ್ರಜಾವಾಣಿ' ಜೊತೆ ಮಾತನಾಡಿದ್ದಾರೆ. ಅವರ ಜೊತೆಗಿನ ಮಾತುಕತೆಯ ಆಯ್ದ ಭಾಗ ಇಲ್ಲಿದೆ.

- **ಈ ಬಾರಿಯ ಸಮಾವೇಶದ ಮೂಲಕ ಎಷ್ಟು ಹೂಡಿಕೆ ಆಕರ್ಷಿಸುವ ಗುರಿ ಇದೆ?**

ಕನಿಷ್ಠ ₹ 5 ಲಕ್ಷ ಕೋಟಿ ಹೂಡಿಕೆ ರಾಜ್ಯಕ್ಕೆ ಬರಲಿದೆ ಎಂಬ ನಿರೀಕ್ಷೆ ಇದೆ. ಇದರಲ್ಲಿ ₹ 2.80 ಲಕ್ಷ ಕೋಟಿ ಹೂಡಿಕೆಗೆ ಒಪ್ಪಂದ (ಎಂಒಯು) ಈಗಾಗಲೇ ಆಗಿದೆ. ಇದು ಈ ಬಾರಿಯ ಸಮಾವೇಶದ ವೈಶಿಷ್ಟ್ಯ. ಇಷ್ಟು ಮೊತ್ತದ ಯೋಜನೆಗಳಿಗೆ ಉನ್ನತಾಧಿಕಾರ ಸಮಿತಿಯು ಅನುಮೋದನೆ ನೀಡಿ ಆಗಿದೆ. ಹಿಂದೆಲ್ಲ ಎಂಒಯು ಆಗುತ್ತಿದ್ದವು. ಆದರೆ, ಒಪ್ಪಂದಗಳು ಕಾರ್ಯರೂಪಕ್ಕೆ ಬರುವುದರ ಪ್ರಮಾಣ ಕಡಿಮೆ ಇತ್ತು.

ಈ ಬಾರಿ ಹಾಗೆ ಆಗಬಾರದು ಎಂಬ ಕಾರಣಕ್ಕೆ ನಾವೇ ಮುಂದಡಿ ಇರಿಸಿದ್ದೇವೆ, ಮೊದಲೇ ಎಂಒಯು ಮಾಡಿಕೊಂಡಿದ್ದೇವೆ. ಕಂಪನಿಗಳಿಂದ ಅವರ ಯೋಜನೆಯ ಬಗ್ಗೆ ವಿಸ್ತೃತವಾದ ವರದಿ ಪಡೆದುಕೊಂಡಿದ್ದೇವೆ, ಹೂಡಿಕೆ ಎಷ್ಟು ಎಂಬುದನ್ನು ತಿಳಿದುಕೊಂಡಿದ್ದೇವೆ. ನಮ್ಮ ಗುರಿಯ ಶೇ 50ಕ್ಕೂ ಹೆಚ್ಚು ತಲುಪಿಯಾಗಿದೆ.

- **ಹೆಚ್ಚಿನ ಹೂಡಿಕೆ ಬರಬಹುದಾದ ಅಮೆರಿಕ ಮತ್ತು ಯುರೋಪ್‌ನಲ್ಲಿ ಆರ್ಥಿಕ ಹಿಂಜರಿತದ ಭೀತಿ ಇದೆ. ಹೀಗಿರುವಾಗ ಹೂಡಿಕೆ ಆಕರ್ಷಿಸುವ ಗುರಿ ಈಡೇರುವುದೇ?**

ಹಿಂಜರಿತದ ಭೀತಿಯಿಂದ ನಮ್ಮ ಮೇಲೆ ಕೆಟ್ಟ ಪರಿಣಾಮ ಆಗಲಿಕ್ಕಿಲ್ಲ. ಅಮೆರಿಕ ಮತ್ತು ಯುರೋಪಿನಲ್ಲಿ ಹಣದುಬ್ಬರ ಹೆಚ್ಚಾಗಿದೆ, ಆರ್ಥಿಕ ಬೆಳವಣಿಗೆ ಮಂದವಾಗಿದೆ. ಕೋವಿಡ್ ನಂತರದಲ್ಲಿ ಚೀನಾ ಬಗ್ಗೆ ಬಹಳಷ್ಟು ದೇಶಗಳಿಗೆ ಅಸಮಾಧಾನ ಇದೆ. ಚೀನಾ ಆಚೆಗೆ ಉತ್ಪಾದನೆ ನಡೆಯಬೇಕು ಎಂಬ ಬಯಕೆ ಹಲವು ದೇಶಗಳಲ್ಲಿದೆ. ಹೀಗಾಗಿ, ಚೀನಾ ಹೊರತುಪಡಿಸಿ ಬೇರೆ ದೇಶಗಳಲ್ಲಿಯೂ ಹೂಡಿಕೆಗೆ ಆದ್ಯತೆ ನೀಡಲಾಗುತ್ತಿದೆ.

ಜಾಗತಿಕವಾಗಿ ಅಸ್ಥಿರತೆ ಇದ್ದರೂ ಪ್ರಧಾನಿ ನರೇಂದ್ರ ಮೋದಿ ಅವರ ಆರ್ಥಿಕ ನೀತಿಗಳ ಕಾರಣದಿಂದಾಗಿ ಭಾರತದಲ್ಲಿ ಜಿಡಿಪಿ ಬೆಳವಣಿಗೆ ಶೇ 7ರಷ್ಟು ಆಗಿದೆ. ಇತರ ದೇಶಗಳ ಅಗತ್ಯಗಳು ನಮಗೆ ಅವಕಾಶಗಳನ್ನು ತೆರೆದುಕೊಡುತ್ತಿವೆ. ಇದನ್ನು ಬಳಕೆ ಮಾಡಿಕೊಳ್ಳುವ ರಾಜ್ಯಗಳು ಉದ್ಯೋಗ ಸೃಷ್ಟಿಸಲಿವೆ. ನಾವು ಬಂಡವಾಳ ಆಕರ್ಷಣೆಯಲ್ಲಿ ಮುಂಚೂಣಿಯಲ್ಲಿರುವುದು ಮಾತ್ರವೇ ಅಲ್ಲದೆ, ಬಂಡವಾಳಗಳನ್ನು ಉದ್ಯೋಗವನ್ನಾಗಿ ಪರಿವರ್ತಿಸಲು ಸನ್ನದ್ಧವಾಗಿದ್ದೇವೆ.

- **ಐ.ಟಿ. ಅಲ್ಲದೆ ಬೇರೆ ಯಾವ ಆದ್ಯತಾ ವಲಯಗಳನ್ನು ಹೂಡಿಕೆಗೆ ಗುರುತಿಸಲಾಗಿದೆ?**

ಆರ್ಥಿಕ ಬೆಳವಣಿಗೆ, ಉದ್ಯೋಗ ಸೃಷ್ಟಿ ಮತ್ತು ಎಲ್ಲ ಪ್ರದೇಶಗಳಲ್ಲಿ ಹಾಗೂ ಎಲ್ಲ ವಲಯಗಳಲ್ಲಿ ಹೂಡಿಕೆ ಆಗಬೇಕು ಎಂಬುದು ಸಮಾವೇಶದ ಉದ್ದೇಶ. ನವೀಕರಿಸಬಹುದಾದ ಇಂಧನ ವಲಯದಲ್ಲಿ ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಬರಲಿದೆ ಎಂಬ ಪ್ರಾಥಮಿಕ ಮಾಹಿತಿ ಇದೆ. ಆಟೊಮೊಬೈಲ್, ಜವಳಿ, ಇತರ ತಯಾರಿಕಾ ವಲಯಗಳಿಗೆ ಆದ್ಯತೆ ನೀಡುತ್ತಿದ್ದೇವೆ. ಇವು ಉದ್ಯೋಗ ಸೃಷ್ಟಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡುತ್ತವೆ. ವಿದ್ಯುತ್ ಚಾಲಿತ ವಾಹನಗಳ (ಇ.ವಿ) ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಬೆಂಗಳೂರು ಮುಂದಿದೆ. ಮುಂದಿನ ಹಂತದಲ್ಲಿ ಇ.ವಿ. ತಯಾರಿಕೆಯಲ್ಲಿಯೂ ನಾವು ಮುಂದಿರಬೇಕು ಎಂಬ ಬಯಕೆ ಇದೆ. ರಕ್ಷಣಾ ವಲಯಕ್ಕೆ ಆದ್ಯತೆ ಕೊಡುತ್ತಿದ್ದೇವೆ. ಕೃತಕ ಬುದ್ಧಿಮತ್ತೆಗೆ (ಎ.ಐ) ಕೂಡ ಒತ್ತು ಕೊಡುತ್ತಿದ್ದೇವೆ.

- **ಬೆಂಗಳೂರಿನ ಆಚೆಗೆ ಹೂಡಿಕೆ ಆಕರ್ಷಿಸಲು ಯಾವ ಕಾರ್ಯತಂತ್ರ ಇದೆ?**

ರಾಜ್ಯದ ಎಲ್ಲ ಪ್ರದೇಶಗಳಲ್ಲಿಯೂ ಹೂಡಿಕೆ ಹೆಚ್ಚಬೇಕು ಎಂಬುದು ನಮ್ಮ ಉದ್ದೇಶ. ಯಾವ ಕಂಪನಿ, ಯಾವ ವಲಯದಲ್ಲಿ ಎಷ್ಟು ಹೂಡಿಕೆ ಮಾಡುತ್ತಿದೆ, ಯಾವ ಊರಿನಲ್ಲಿ ಹೂಡಿಕೆ ಮಾಡುತ್ತಿದೆ ಎಂಬ ಮಾಹಿತಿಯನ್ನು ನನಗೆ ನೀಡಬೇಕು ಎಂದು ಅಧಿಕಾರಿಗಳಿಗೆ ಹೇಳಿದ್ದೇನೆ. ಬೆಂಗಳೂರಿನ ಆಚೆಗೂ ಹೆಚ್ಚಿನ ಪ್ರಮಾಣದಲ್ಲಿ ಹೂಡಿಕೆ ಬರುವ ವಿಶ್ವಾಸ ಇದೆ. ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ಬಳಕೆ ಉತ್ಪನ್ನಗಳ (ಎಫ್‌ಎಂಸಿಜಿ) ಕ್ಲಸ್ಟರ್ ಧಾರವಾಡದಲ್ಲಿ ತಲೆಎತ್ತಿದೆ. ಜವಳಿ ಉದ್ಯಮವು ಬೆಂಗಳೂರಿನ ಆಚೆಗೂ ಹೂಡಿಕೆ ಮಾಡುತ್ತಿದೆ. ಈ ಉದ್ಯಮವು ದಾವಣಗೆರೆ, ಹುಬ್ಬಳ್ಳಿ, ವಿಜಯಪುರ, ಕಲಬುರಗಿ ಕಡೆ ಮುಖಮಾಡಿದೆ.

ಮಹಿಳೆಯರು ಆರಂಭಿಸುವ ನವೋದ್ಯಮಕ್ಕೆ ₹ 50 ಲಕ್ಷ ಕೊಡುವ ಯೋಜನೆ ಜಾರಿಗೆ ಬಂದ ನಂತರದಲ್ಲಿ ರಾಜ್ಯದ ಎರಡನೆಯ ಹಂತದ ನಗರಗಳಲ್ಲಿ ನವೋದ್ಯಮಗಳು ಹೆಚ್ಚುತ್ತಿವೆ.

- **ಬೆಂಗಳೂರಿನ ಮೂಲಸೌಕರ್ಯವನ್ನು ಹೇಗೆ ಉತ್ತಮಪಡಿಸುತ್ತೀರಿ?**

ನಗರದ ಮೂಲಸೌಕರ್ಯವು ಬರುವ ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸುಧಾರಣೆ ಕಾಣಲಿದೆ. ನಗರವನ್ನು ಯೋಜನಾಬದ್ಧವಾಗಿ ರೂಪಿಸುವ ಅಗತ್ಯವಿದೆ. ಇಲ್ಲಿ ವಾಹನ, ಜನಸಂಖ್ಯೆ ಹೆಚ್ಚುತ್ತಿದೆ. ಆದರೆ ರಸ್ತೆ ಜಾಲ ಮೊದಲಿದ್ದಷ್ಟೇ ಇದೆ. ಹಿಂದೆ ಉಪನಗರಗಳನ್ನು ಕಟ್ಟುವ ಮಾತುಗಳು ಬಂದಿದ್ದವು. ಈಗ ಆ ಕುರಿತು ಗಂಭೀರ ಪ್ರಯತ್ನ ಆಗಲಿದೆ.

ಚಿರಸ್ಮರಣೆ



ಎಸ್.ಎನ್.ಶಿವಣ್ಣನವರು
ಪೊಲೀಸ್ ಇಲಾಖೆ, ತುಮಕೂರು
ಜನನ: 20-04-1950 ಮರಣ: 2-11-2002
ಸದಾ ನಿಮ್ಮನ್ನು ಸ್ಮರಿಸುವ ಪತ್ನಿ: ಗಂಗಮ್ಮ
ಎಸ್.ಉಮೇಶ್, ಎಸ್.ದಿನೇಶ್, ಶೀಲ, ಶೋಭ
ವಿನಿತ, ಹರ್ಷಿಣಿ, ಕೀರ್ತನ. ಫೋ:78298 93303

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Accounts & Finance

WANTED ACCOUNTANTS with experience in Accounts GST and income tax. Please send your CV's to jobcabrsco@gmail.com or whatsapp to 7259105338.

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ +ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು ರೋಗಿಯನ್ನು ನೋಡಿಕೊಳ್ಳಲು ಜನರುಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- ESI, PF ಸೌಲಭ್ಯವಿರುತ್ತದೆ. ಬೆಂಗಳೂರು ಸಂಪರ್ಕಿಸಿ: 9606523337, 9606385001

Part-Time Jobs

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611225266/ 9611225388

✓ ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000-20,000 ಗಳಿಸಿ.(ಕೊರಿಯರ್ ಇದೆ). 8884686860, 8884686861.

Wanted

ಬೇಕಾಗಿದ್ದಾರೆ: ವೃದ್ಧರನ್ನು, ರೋಗಿಗಳನ್ನು ಮತ್ತು ಮಗುವನ್ನು ನೋಡಿಕೊಳ್ಳಲು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಮತ್ತು ತರಬೇತಿ ನೀಡಲಾಗುವುದು. ಸಂಬಳ: 15,000/- ರಿಂದ 20,000/-. ಆಸಕ್ತರು ಸಂಪರ್ಕಿಸಿ: 9620985000, 9620557000, 080-41115200. ಮೆರಿಟ್ಟಾ ಕೇರ್, ದೊಡ್ಡ ಬಾಣಸವಾಡಿ, ಬೆಂಗಳೂರು-43.

Walk-in

SUYAMB MANAGEMENT Pvt Ltd looking for Experienced Business Development Manager and Admin Executive for our new branch in Bangalore. Salary not a constrain for the right candidate. Best Communication skills preferred. Walk in on 02-11-22 and 03-11-22 at Novel Business Park, 57 Salapuria Triton, Gajendra Nagar 13th Cross, Hosur Road, Anepalya. Contact 73800 99999.

ವ್ಯಾಪಾರ

Business Offers

Finance

ತುಮಕೂರಿನಲ್ಲಿರುವ ಸ್ಥಿರಾಸ್ತಿಯ ಮೇಲೆ ಮೂರು ಕೋಟಿ ರೂಪಾಯಿ ಸಾಲ ಬೇಕಾಗಿದೆ. ಕನ್ನಡದಲ್ಲಿ (ವ್ಯಕ್ತಿ - ಸಂಸ್ಥೆ) ವ್ಯವಹರಿಸಲಾಗುವುದು. ಕಡಿಮೆ ಬಡ್ಡಿ- ನಿಬಂಧನೆಗಳಿಗೆ ಆದ್ಯತೆ. ಯಾವುದೇ ಶುಲ್ಕವನ್ನು ಮುಂಗಡವಾಗಿ ನೀಡುವುದಿಲ್ಲ. ನಗದು ರೂಪದಲ್ಲಿ ವ್ಯವಹರಿಸಬಹುದು. ಕರೆಮಾಡಿ: 98445 44500.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಚೇಳೂರು ಹೋಬಳಿ ಸೀಗೇಹಳ್ಳಿ ಗ್ರಾಮದ ಎಸ್.ಎಸ್. ಪರಮೇಶ್, ಕೃಷಿಕರು ಹಾಗೂ ಸಂರಕ್ಷಕರು, ಸಿದ್ದು ಹಲಸು ಆದ ನಾನು ಪ್ರಕಟಿಸುವುದೇನೆಂದರೆ: ಭಾರತೀಯ ತೋಟಗಾರಿಕಾ ಸಂಸ್ಥೆ, ಹೆಸರಘಟ್ಟ, ಇವರು ನಾನು ಬೆಳೆಯುತ್ತಿದ್ದ ಹಲಸಿನ ತಳಿಯನ್ನು ಪರೀಕ್ಷಿಸಿ ಇದು ಬೇರೆಲ್ಲಾ ಹಲಸಿನ ತಳಿಗಿಂತ ವಿಶಿಷ್ಟ ಮತ್ತು ವಿಭಿನ್ನವಾಗಿ ಎಂಬ ಕಾರಣದಿಂದ ಇದಕ್ಕೆ ಸಿದ್ದು ಎಂದು ಹೆಸರನ್ನು ನೀಡಿ ನನ್ನನ್ನು ಐ.ಐ.ಹೆಚ್.ಆರ್. ರವರು ಸಿದ್ದು ಹಲಸಿನ ಸಂರಕ್ಷಕ ಎಂದು ಘೋಷಿಸಿದ್ದು, ನನ್ನ ಮತ್ತು ಐ.ಐ.ಹೆಚ್.ಆರ್. ನಡುವೆ ಸದರಿ ವಿಷಯವಾಗಿ ಒಪ್ಪಂದವಾಗಿದ್ದು, ಅದರ ಅನ್ವಯ ಸಿದ್ದು ಹಲಸಿನ ಸಸ್ಯದ ಉತ್ಪಾದನೆಯನ್ನು ಮಾಡಿ ಮಾರಾಟ ಮಾಡುವ ಅಧಿಕಾರ ನನಗೆ ಮತ್ತು ಐ.ಐ.ಹೆಚ್.ಆರ್. ರವರಿಗೆ ಮಾತ್ರ ಇದ್ದು, ಬೇರೆ ಯಾರೂ ಸಿದ್ದು ಹಲಸಿನ ಸಸಿಗಳನ್ನು ಬೆಳೆಯುವಂತಿಲ್ಲ ಮತ್ತು ಮಾರಾಟ ಮಾಡುವಂತಿಲ್ಲ. ಹಾಗೂ ಸದರಿ ಸಿದ್ದು ಹಲಸಿನ ಮಾತೃ ವೃಕ್ಷವು ನಮ್ಮಲ್ಲೇ ಇರುವುದರಿಂದ ಬೇರೆ ಯಾರಿಗೂ ಸಿದ್ದು ಹಲಸಿನ ಸಸ್ಯೋತ್ಪಾದನೆಯನ್ನು ಮಾಡಲು ಸಾಧ್ಯವಾಗಿರುವುದಿಲ್ಲ. ಹೀಗಿರುವಾಗ್ಗೆ ಸಿದ್ದು ಹಲಸಿನ ಸಸ್ಯೋತ್ಪಾದನೆಯನ್ನು ಮಾಡಲು ಸಾಧ್ಯವಾಗಿರುವುದಿಲ್ಲ. ಹೀಗಿರುವಾಗ್ಗೆ ಸಿದ್ದು ಹಲಸಿನ ವೈಶಿಷ್ಟ್ಯತೆ ಹಾಗೂ ಸ್ವಾಧಿಷ್ಟತೆ ಹಾಗೂ ವಿಶಿಷ್ಟ ಗುಣ ಲಕ್ಷಣದಿಂದ ಜನಪ್ರಿಯತೆಯನ್ನು ಪಡೆದುಕೊಂಡಿದ್ದು, ಸದರಿ ಜನಪ್ರಿಯತೆಯ ಲಾಭವನ್ನು ಪಡೆಯುವ ದುರುದ್ದೇಶದಿಂದ ಅನೇಕ ನರ್ಸರಿಯವರು ಸಿದ್ದು ಹಲಸಿನ ಹೆಸರಿನಲ್ಲಿ ಸಸ್ಯೋತ್ಪಾದನೆಯನ್ನು ಮಾಡಿ ಅಕ್ರಮವಾಗಿ ಮಾರಾಟ ಮಾಡುವುದು ಕಂಡುಬಂದಿದ್ದು ರೈತರು/ ಗ್ರಾಹಕರು ಈ ಕೆಳಕಂಡವರ ಹೊರತಾಗಿ ಬೇರೆ ಎಲ್ಲಿಯೂ ಸಸಿಗಳನ್ನು ಕೊಂಡು ಮೋಸ ಹೋಗಬಾರದೆಂದು ಈ ಮೂಲಕ ಗ್ರಾಹಕರಿಗೆ/ರೈತರಿಗೆ ತಿಳಿಸಲಾಗಿದೆ. ಸಿದ್ದು ಹಲಸಿನ ಸಸಿಗಳ ಅಧಿಕೃತ ಮಾರಾಟಗಾರರು: (1) ಭಾರತೀಯ ತೋಟಗಾರಿಕಾ ಸಂಶೋಧನಾ ಕೇಂದ್ರ, ಹೆಸರಘಟ್ಟ, ಬೆಂಗಳೂರು ಉತ್ತರ, (2) ಭಾರತೀಯ ತೋಟಗಾರಿಕಾ ಸಂಶೋಧನಾ ಕೇಂದ್ರ, ಹಿರೇಹಳ್ಳಿ, ತುಮಕೂರು ತಾಲ್ಲೂಕು, (3) ಎಸ್.ಎಸ್.ಪರಮೇಶ್, ಸಿದ್ದು ಹಲಸಿನ ಮಾಲೀಕರು, ಮೊಬೈಲ್: 9902794969, (4) ಎಂ.ಜಿ.ಗೋವಿಂದರಾಜು, ಬೆಂಗಳೂರು, ಮೊ:9620616616.

ಇಂತಿ: ಸಿದ್ದು ಹಲಸು ಪರಮೇಶ್ ಎಸ್.ಎಸ್. ಸಿದ್ದು ಹಲಸು ರೈತರ ತಳಿ ಸಂರಕ್ಷಕರು, ಸೀಗೇಹಳ್ಳಿ, ತುಮಕೂರು

ಭವಿಷ್ಯ

Astrology


ಶ್ರೀ ದುರ್ಗಾದೇವಿ ಆರಾಧನೆಯಿಂದ ಆರೋಗ್ಯ, ಸಂತಾನ, ಶತ್ರುಕಾಟ, ಲೈಂಗಿಕ ಸಮಸ್ಯೆ ಹಾಗೂ ಸ್ತ್ರೀ ಪುರುಷ ವಶೀಕರಣ 3 ದಿನದಲ್ಲಿ ಮಾಡಿಕೊಡುತ್ತಾರೆ. ಫೋನಿನ ಮೂಲಕ ನೇರ ಪರಿಹಾರ. ಶ್ರೀ ಆಚಾರ್ಯ: 9945995681

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ಸ್ತ್ರೀ ಪುರುಷ, ಶತ್ರುಕಾಟ, ಗಂಡಹೆಂಡತಿ ದೂರವಾಗಿದ್ದರೆ, ನಿಮ್ಮಂತೆ ಆಗಲು. 2 ದಿನದಲ್ಲಿ ಪರಿಹಾರ 9611968471

EDUCATION SUCCESS

ಅಭಿನಂದನೆಗಳು



ಮಂಡ್ಯ ಜಿಲ್ಲೆಯ ಮಳವಳ್ಳಿ ಟೌನಿನ **ದೀಪಕ್ ಜಿ ಅಪ್ಪಾಜಿ** (ಬಿನ್ ಲೇಟ್ ಎಂ.ಎಲ್. ಗುರಪ್ಪಾಜಿ) ಅವರು ಸಿವಿಲ್ ಇಂಜಿನಿಯರ್ ವಿಭಾಗದ ಡಾ. ಚೇತನ್ ಕೆ ಅವರ ಮಾರ್ಗದರ್ಶನದಲ್ಲಿ "Durability Studies on Self Compacting Concrete with Mineral Admixtures and Polypropylene Fibres" ಎಂಬ ವಿಷಯದ ಕುರಿತು ಮಂಡಿಸಿದ ಮಹಾ ಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.

ಪ್ರವಾಸ

Travel

05.11.2022ರಿಂದ 13ದಿನಗಳು ಎಸಿ.ಬಸ್ಸು, ಎಸಿ.ರೂಂನೊಂದಿಗೆ ಪಂಚರಾಮಕ್ಷೇತ್ರ ಸಮೇತ ಭದ್ರಾಚಲಂ,ಅನ್ನಾವರಂ,ವಿಶಾಖಪಟ್ಟಣ,ವಾಸವಿಪೆನ್ನಗೊಂಡ ದ್ವಾರಕಾ,ತಿರುಮಲ ಇತ್ಯಾದಿ. 27.11.2022ರಿಂದ 8ದಿನಗಳು ವಿಮಾನ, ಎಸಿ.ರೂಂ, ಎಸಿ.ಬಸ್ಸು ನೊಂದಿಗೆ ಕಾಶಿ,ಗಯಾ, ನೈಮಿಷಾರಣ್ಯ,ಅಯೋಧ್ಯ ಅಹಮದಾಬಾದ್ ಏಷ್ಯನ್ ಟ್ರಾವೆಲ್ ಲೈನ್ಸ್ #164/3 ಅರ್.ವಿ.ರಸ್ತೆ, ಬೆಂಗಳೂರು.ಸಂಪರ್ಕಿಸಿ: 8105657052/ 9480182865

20.11.2022 5ದಿನಗಳು ರಾಮೇಶ್ವರಂ,ಕನ್ಯಾಕುಮಾರಿ ಪ್ರವಾಸ.,16.12.2022 17ದಿನಗಳು ಗುಜರಾತ್ ಭಾವನಗರ,ಅಷ್ಟಜ್ಯೋತಿರ್ಲಿಂಗ., 24.12.2022 10ದಿನಗಳು ಉಜ್ಜೈನಿ,ಓಂಕಾರೇಶ್ವರ ಮಹಾರಾಷ್ಟ್ರಪ್ರವಾಸ. ಆರ್.ಗಾಂಧಿ ಟೂರ್ಸ್(ರಿ) 9945445809, 9902433500, 6363416487

ಕಾರ್ತಿಕ ಮಾಸದ ವಿಶೇಷ ಪ್ರವಾಸ: ವಿಮಾನ/A/C ಬಸ್ಸಿನಲ್ಲಿ 18.11.2022 ರಿಂದ 16 ದಿನಗಳ ಅಷ್ಟ ಜ್ಯೋತಿರ್ಲಿಂಗ ಗುಜರಾತ್ ಮಧ್ಯಪ್ರದೇಶ ಮಹಾರಾಷ್ಟ್ರ ಮೌಂಟ್‌ಅಬು ಇತ್ಯಾದಿ. ಊಟ,ವಸತಿಯೊಂದಿಗೆ ಸಂಪರ್ಕಿಸಿ: ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು4. 9342514289 9686721196

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 5 ದಿನಗಳು. 30.11.2022 ನವಗ್ರಹ ದರ್ಶನ ತಿರುನಲ್ಲಾರು,ತಂಜಾವೂರು, ಕುಂಭಕೋಣಂ ವೇಲಾಂಗಣಿ, ಚಿದಂಬರಂ,ಶ್ರೀರಂಗಂ, ಪುಂಪುಹಾರ್ ಬೀಚ್ 18 ಕ್ಷೇತ್ರಗಳು 6500/. 9448390735 9449721678

Pilgrimage Tours

05.01.2023, 5000 ರಿಯಾಯಿತಿಯೊಂದಿಗೆ ಕಾಶಿ, ಅಯೋಧ್ಯೆ,ಪ್ರಯಾಗ್ ರಾಜ್. 30.11.2022. ಶಿರಡಿ, ಕೊಲ್ಲಾಪುರ, ಪಂಡರಾಪುರ. 24.12.2022, ತ್ರಿರಂಗ, ನವಗ್ರಹ. ಅನುಗ್ರಹಯಾತ್ರ. 9880079351.

TRAVEL CORNER

ಪ್ರಶ್ನೋತ್ತರ


ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹೆಸರು ಬೇಡ, ಊರು ಬೇಡ

- **ಪ್ರಶ್ನೆ:** ನಾನು ಸರ್ಕಾರಿ ನೌಕರ, 45 ವರ್ಷ ವಯಸ್ಸು. ಎನ್‌ಪಿಎಸ್ ಯೋಜನೆಯಲ್ಲಿ ಇದ್ದೇನೆ. ನನ್ನ ತಿಂಗಳ ಸಂಬಳ ₹ 1,10,000. ಗೃಹ ಸಾಲ ₹ 45 ಲಕ್ಷ (2018ರಿಂದ 30 ವರ್ಷ ಅವಧಿಗೆ). ಇದರ ಮಾಸಿಕ ಕಂತು ₹ 30,000 ಕಟ್ಟುತ್ತಿದ್ದೇನೆ. ಎನ್‌ಪಿಎಸ್, ಇತರ ನಿಗದಿತ ಖರ್ಚು, ತೆರಿಗೆ ಸೇರಿ ತಿಂಗಳಿಗೆ ₹ 66,000 ಆಗುತ್ತದೆ. ಉಳಿದ ₹ 14,000ದಲ್ಲಿ, ₹ 10,000ವನ್ನು ಪ್ರತಿ ತಿಂಗಳು ಯಾವುದರಲ್ಲಿ ಹೂಡಿಕೆ ಮಾಡಿದರೆ ನಿವೃತ್ತಿ (2039) ಸಮಯದಲ್ಲಿ ಅನುಕೂಲವಾಗುವುದು? ಎನ್‌ಪಿಎಸ್ ಯೋಜನೆಯಲ್ಲಿ ಪಿಂಚಣಿ ತೃಪ್ತಿಕರವಾಗಿಲ್ಲ. ಆರೋಗ್ಯ ವಿಮೆ ಹಾಗೂ ಉತ್ತಮ ಲಾಭ ಬರುವ ಯೋಜನೆ ಬಗ್ಗೆ ತಿಳಿಸಿ.

ಉತ್ತರ: ನೀವು ನೀಡಿರುವ ಮಾಹಿತಿಯಂತೆ ನಿಮ್ಮ ಗೃಹ ಸಾಲ 30 ವರ್ಷ ಅವಧಿಯದ್ದು. ಇದು 2048ರವರೆಗೆ ಇರಲಿದೆ ಹಾಗೂ ನಿಮ್ಮ ನಿವೃತ್ತಿ 2039ಕ್ಕೆ ನಿಗದಿಯಾಗಿದೆ. ಅಂದರೆ, ನಿಮ್ಮ ನಿವೃತ್ತಿಯ ಬಳಿಕ 10 ವರ್ಷ ನಿಮ್ಮ ಸಾಲದ ಕಂತುಗಳ ಪಾವತಿ ಮುಂದುವರಿಯಲಿದೆ. ನಿಮ್ಮ ನಿವೃತ್ತಿಗೆ ಬಾಕಿ ಉಳಿದಿರುವ ಅವಧಿ 17 ವರ್ಷ. ಅವಕಾಶ ಇದ್ದಾಗ, ಪ್ರತಿ ವರ್ಷ ಒಂದೆರಡು ಇಎಂಐ ಹೆಚ್ಚುವರಿಯಾಗಿ ಕಟ್ಟುವ ಯೋಜನೆ ರೂಪಿಸಿಕೊಳ್ಳಿ. ಇದಕ್ಕೆ ನಿಮ್ಮ ಮುಂದಿನ ಹೆಚ್ಚುವರಿ ಆದಾಯ, ಬಡ್ತಿ ಇತ್ಯಾದಿಗಳಿಂದ ಸಿಗಬಹುದಾದ ಹಣವನ್ನು ಉಪಯೋಗಿಸಿಕೊಳ್ಳಿ. ಇದು ದೀರ್ಘಾವಧಿ ಸಾಲಗಳ ಮೇಲಿನ ಬಡ್ಡಿಯನ್ನು ತಗ್ಗಿಸಲು ನೆರವಾಗುತ್ತದೆ.

ಒಳ್ಳೆಯ ಹೂಡಿಕೆ ಹಾಗೂ ಉತ್ತಮ ಲಾಭದ ಹುಡುಕಾಟದಲ್ಲಿ ಇರುವವರಿಗೆ ಇರುವ ಆಯ್ಕೆಗಳು ಎರಡು ಅಥವಾ ಮೂರು. ಅವು ಮ್ಯೂಚುವಲ್ ಫಂಡ್, ಷೇರುಗಳು ಹಾಗೂ ಇಟಿಎಫ್. ಹೂಡಿಕೆಯ ಗುಣಮಟ್ಟ ಆಧರಿಸಿ ಇವು ನಮ್ಮ ಸಾಂಪ್ರದಾಯಿಕ ಹೂಡಿಕೆಗಳಾದ ಬ್ಯಾಂಕ್ ಎಫ್.ಡಿ ಅಥವಾ ಆರ್.ಡಿ ಇತ್ಯಾದಿಗಳಿಗಿಂತ ಸರಿಸುಮಾರು ಎರಡುಪಟ್ಟು ಹೆಚ್ಚು ಲಾಭ ನೀಡಬಲ್ಲವು. ದೀರ್ಘಾವಧಿಯಲ್ಲಿ ನಾವು ಎಷ್ಟು ದಕ್ಷವಾಗಿ ಮತ್ತು ಎಷ್ಟು ಸೂಕ್ಷ್ಮವಾಗಿ ನಮ್ಮ ಹೂಡಿಕೆಯನ್ನು ನಿಭಾಯಿಸುತ್ತೇವೆ ಎನ್ನುವುದನ್ನು ಆಧರಿಸಿ ಹೂಡಿಕೆಯ ಮೇಲೆ ಲಾಭ ಸಿಗುತ್ತದೆ. ಇವು ಕೆಲವೊಮ್ಮೆ ನಮ್ಮ ನಿರೀಕ್ಷೆಗಿಂತ ಹೆಚ್ಚಿನ ಲಾಭ ಕೊಡುತ್ತವೆ. ಹಾಗೆಯೇ, ಅನೇಕ ಬಗೆಯ ಮಾರುಕಟ್ಟೆ ಅಪಾಯಗಳನ್ನು ಕೂಡ ಹೊಂದಿವೆ. ನಿಮ್ಮ ಸೇವಾವಧಿ ಇನ್ನೂ 17 ವರ್ಷ ಇರುವ ಕಾರಣ ಮೇಲಿನ ಹೂಡಿಕೆಗಳಲ್ಲಿ ಕ್ರಮಬದ್ಧವಾಗಿ ಪ್ರತಿ ತಿಂಗಳು ಹೂಡಿಕೆ ಮಾಡಿ ನಿವೃತ್ತಿಯ ಸಮಯದಲ್ಲಿ ಉತ್ತಮ ಮೊತ್ತ ಪಡೆಯಬಹುದು. ಅಗತ್ಯ ಎದುರಾದರೆ ನಿಮ್ಮ ಆಪ್ತ ಹೂಡಿಕೆ ಸಲಹೆಗಾರರನ್ನೂ ಸಂಪರ್ಕಿಸಿ. ಪ್ರಸ್ತುತ, ಅಭಿವೃದ್ಧಿ ಹೊಂದಿದ ದೇಶಗಳ ಆರ್ಥಿಕತೆಗಿಂತ, ನಮ್ಮ ದೇಶದ ಆರ್ಥಿಕತೆ ಉತ್ತಮವಾಗಿರುವ ಕಾರಣ ಮ್ಯೂಚುವಲ್ ಫಂಡ್, ಷೇರು ಹಾಗೂ ಇಟಿಎಫ್‌ಗಳು ಮುಂದೆಯೂ ಉತ್ತಮವಾಗಿ ಲಾಭಾಂಶ ಕೊಡುವ ನಿರೀಕ್ಷೆ ಇದೆ.

ನಿಮ್ಮ ಹೆಸರಲ್ಲಿ ಒಂದು ಅವಧಿ ವಿಮೆ (ಟರ್ಮ್ ಇನ್ಶೂರೆನ್ಸ್) ಪಡೆಯುವುದು ಉತ್ತಮ. ಇದಲ್ಲದೆ, ವೈದ್ಯಕೀಯ ವಿಮೆ ಯೋಜನೆಯ ಅಡಿ ನೀವು ಮತ್ತು ನಿಮ್ಮ ಮನೆಯವರನ್ನು ಒಳಗೊಂಡ ಫ್ಲೋಟರ್ ಪಾಲಿಸಿಯ ಬಗ್ಗೆ ವಿಮಾ ಕಂಪನಿಗಳಿಂದ ಇನ್ನಷ್ಟು ಮಾಹಿತಿ ಪಡೆದು ಮುಂದುವರಿಯಿರಿ. ಈ ಎರಡು ವಿಮೆಗಳು ಹೂಡಿಕೆ ಅಲ್ಲದಿದ್ದರೂ ವಿಪತ್ತಿನ ಸಂದರ್ಭಗಳಲ್ಲಿ ಆರ್ಥಿಕ ರಕ್ಷಣೆಯನ್ನು ನೀಡುತ್ತವೆ ಹಾಗೂ ತೆರಿಗೆ ಲಾಭವನ್ನು ಕೊಡುತ್ತವೆ. ಇವಲ್ಲದೆ ಯೂನಿಟ್ ಲಿಂಕ್ಡ್ ಇನ್ಶೂರೆನ್ಸ್ (ಯುಲಿಪ್) ಯೋಜನೆಗಳು ಹೂಡಿಕೆ ಹಾಗೂ ವಿಮೆಯ ಸೌಲಭ್ಯವನ್ನು ಕೊಡುತ್ತವೆ.

ಜಯಂತ ಪಾಟೀಲ, ಅರವಿಂದ ನಗರ, ಧಾರವಾಡ

- **ಪ್ರಶ್ನೆ:** ನಾನು ನಿವೃತ್ತ ಶಿಕ್ಷಕ. ವಯಸ್ಸು 76 ವರ್ಷ. ಆರ್ಥಿಕ ವರ್ಷ 2022-23ರ ತೆರಿಗೆ ಬಾಬ್ತಿಗೆ ಹಿರಿಯ ನಾಗರಿಕರ ಉಳಿತಾಯ ಯೋಜನೆಯಲ್ಲಿ ₹ 60,000 ತೊಡಗಿಸಿದ್ದೇನೆ. ಬೇರೆ ಉಳಿತಾಯ ಇಲ್ಲ. 70 ವರ್ಷ ವಯಸ್ಸಿನ ನನ್ನ ಪತ್ನಿಯ ಕಣ್ಣುಗಳ ಕ್ಯಾಟರ್‍ಯಾಕ್ಟ್ ಶಸ್ತ್ರಚಿಕಿತ್ಸೆ ಮಾಡಿದ್ದು ಅದಕ್ಕಾಗಿ ₹ 60,000 ಖರ್ಚಾಗಿದೆ. ಆದಾಯ ತೆರಿಗೆಯ ಸೆಕ್ಷನ್ 80ಡಿ ಪ್ರಕಾರ ವಿನಾಯಿತಿ ಪ್ರಯೋಜನ ಪಡೆಯಬಹುದೇ? ಆರೋಗ್ಯ ವಿಮೆ ಮಾಡಿಸಿಲ್ಲ. ನಿವೃತ್ತಿ ವೇತನವಲ್ಲದೆ ಬೇರೆ ಯಾವ ಆದಾಯವೂ ಇಲ್ಲ.

ಉತ್ತರ: ಆದಾಯ ತೆರಿಗೆಯ ಸೆಕ್ಷನ್ 80 ಡಿಡಿಬಿ, ಹತ್ತಿರದ ಯಾವುದೇ ವ್ಯಕ್ತಿಗಾಗಿ ತೆರಿಗೆದಾರ ಮಾಡಿರುವ ವೈದ್ಯಕೀಯ ವೆಚ್ಚಕ್ಕೆ ಸಿಗುವ ತೆರಿಗೆ ವಿನಾಯಿತಿಗಳನ್ನು ವಿವರಿಸುತ್ತದೆ. ಇದು ನಿರ್ದಿಷ್ಟ ಕಾಯಿಲೆ ಇರುವ ಸಂದರ್ಭಗಳಲ್ಲಿ ರೋಗಿ ಅವಲಂಬಿಸಿರುವ ಸಮೀಪದ ಸಂಬಂಧಿಕರು ಅಂದರೆ, ತೆರಿಗೆ ಪಾವತಿದಾರರು ಮಾಡುವ ವೈದ್ಯಕೀಯ ವೆಚ್ಚಕ್ಕೆ ಲಭ್ಯವಿರುತ್ತದೆ. ಇದಲ್ಲದೆ ತೆರಿಗೆದಾರರು ತಾವೇ ನಿರ್ದಿಷ್ಟ ಕಾಯಿಲೆಗಳಿಂದ ಬಳಲುತ್ತಿದ್ದರೂ ತೆರಿಗೆ ವಿನಾಯಿತಿ ಪಡೆಯಲು ಅವಕಾಶ ಇದೆ. ತೆರಿಗೆದಾರರು ಹಿರಿಯ ನಾಗರಿಕರಾಗಿದ್ದರೆ ಇದರ ಮಿತಿ ₹ 1 ಲಕ್ಷ. ಇತರ ವಯೋಮಾನದವರಿಗೆ ₹ 40,000ದವರೆಗೆ ವಾರ್ಷಿಕ ವಿನಾಯಿತಿ ಇದೆ. ವೈದ್ಯಕೀಯ ಖರ್ಚು ಈ ಮೊತ್ತಕ್ಕಿಂತ ಕಡಿಮೆ ಇದ್ದರೆ, ವಿನಾಯಿತಿ ಆ ಮೊತ್ತಕ್ಕಷ್ಟೇ ಲಭ್ಯ. ಯಾವುದೇ ವಿಮಾ ಕಂಪನಿಯಿಂದ ಪರಿಹಾರ ಮೊತ್ತ ಸಿಕ್ಕಿದರೆ ಅಥವಾ ಅವು ಖರ್ಚು ಭರಿಸಿದ್ದರೆ, ಅಂತಹ ಮೊತ್ತವನ್ನು ಮೇಲಿನ ವಿನಾಯಿತಿ ಮೊತ್ತದಿಂದ ಕಡಿತಗೊಳಿಸಲಾಗುತ್ತದೆ.

ಕಾನೂನಿನ ಅಡಿ ಪರಿಗಣಿಸಲಾದ ನಿರ್ದಿಷ್ಟ ಕಾಯಿಲೆಗಳೆಂದರೆ ನರದೋಷ, ಕ್ಯಾನ್ಸರ್, ಏಡ್ಸ್, ಮೂತ್ರಪಿಂಡ ದೋಷ ಹಾಗೂ ರಕ್ತ ಸಂಬಂಧಿ ಕಾಯಿಲೆ - ಇವುಗಳಷ್ಟೇ. ಇದಕ್ಕೂ ತಜ್ಞ ವೈದ್ಯರಿಂದ ತಪಾಸಣೆ ಹಾಗೂ ರೋಗದ ಬಗ್ಗೆ ದೃಢೀಕೃತ ಪ್ರಮಾಣಪತ್ರಗಳ ದಾಖಲೆ ಹೊಂದಿರಬೇಕು. ಆದರೆ ನೀವು ನೀಡಿದ ಮಾಹಿತಿಯಂತೆ, ಮೇಲ್ನೋಟಕ್ಕೆ ನಿಮ್ಮ ಸಮಸ್ಯೆ ವಯೋಸಹಜವಾಗಿದ್ದು ಮೇಲಿನ ಯಾವುದೇ ವರ್ಗದಲ್ಲಿ ಬರದ ಕಾರಣ ತೆರಿಗೆ ವಿನಾಯಿತಿ ಸಿಗಲಾರದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001
ಇ-ಮೇಲ್: businessdesk@prajavani.co.in

3 ದಿನ ಉದ್ಯಮದ ಹಬ್ಬ

ಒಂದನೇ ಪುಟದಿಂದ...

ಜಾಗತಿಕ ಹೂಡಿಕೆದಾರರ ಸಮಾವೇಶದ ಸಿದ್ಧತೆ ಪರಿಶೀಲನೆ ನಡೆಸಿ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಇದು ಇಡೀ ಜಗತ್ತಿನ ಗಮನವನ್ನು ಸೆಳೆಯಲಿದೆ. ಜಗತ್ತಿನ ಹೂಡಿಕೆಯೂ ಇಲ್ಲಿಗೆ ಬರುತ್ತಿದೆ. ಕರ್ನಾಟಕದಲ್ಲಿ ಒಳ್ಳೆಯ ವಾತಾವರಣವಿದೆ. ಮುಂದಿನ ಐದು ವರ್ಷಗಳ ಬೆಳವಣಿಗೆಗೆ ಒಂದು ಭದ್ರ ಬುನಾದಿಯನ್ನು ಹಾಕಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಬೆಂಗಳೂರು ಬಿಟ್ಟು ಇತರ ನಗರಗಳಲ್ಲಿ ಬಂಡವಾಳ ಹೂಡಲು ಉದ್ಯಮಿಗಳು ಆಸಕ್ತಿ ತೋರಿಸುತ್ತಿದ್ದಾರೆ. ರಾಮನಗರ, ಹುಬ್ಬಳ್ಳಿ-ಧಾರವಾಡ, ಬಳ್ಳಾರಿ, ಕಲಬುರಗಿ, ಮೈಸೂರು ಹೀಗೆ ಎಲ್ಲ ಕಡೆ ಕೈಗಾರಿಕೆಗಳು ಬರುತ್ತಿವೆ. ಅ.28 ರಂದು ಹುಬ್ಬಳ್ಳಿಯಲ್ಲಿ ಎಫ್.ಎಂ.ಸಿ.ಜಿ ಕ್ಲಸ್ಟರ್ ಉದ್ಘಾಟಿಸಲಾಗಿದೆ. ಈ ಪ್ರದೇಶದಲ್ಲಿ ಸುಮಾರು ₹10 ಸಾವಿರ ಕೋಟಿ ಹೂಡಿಕೆಯಾಗಿದೆ ಒಂದು ಲಕ್ಷ ಜನರಿಗೆ ಉದ್ಯೋಗ ಸೃಷ್ಟಿಯಾಗಲಿದೆ' ಎಂದು ಹೇಳಿದರು.

₹1.52ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ಒಂದನೇ ಪುಟದಿಂದ...


ಏಪ್ರಿಲ್ ತಿಂಗಳಲ್ಲಿ ₹ 1.68 ಲಕ್ಷ ಕೋಟಿ ವರಮಾನ ಸಂಗ್ರಹವಾಗಿತ್ತು. ಇದು ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಆದ ಅತಿಹೆಚ್ಚಿನ ವರಮಾನ ಸಂಗ್ರಹ.

ಅಕ್ಟೋಬರ್ ತಿಂಗಳ ವರಮಾನ ಸಂಗ್ರಹವನ್ನೂ ಪರಿಗಣಿಸಿದರೆ, ಜಿಎಸ್‌ಟಿ ವ್ಯವಸ್ಥೆ ಅಡಿಯಲ್ಲಿ ಸಂಗ್ರಹವಾಗುತ್ತಿರುವ ವರಮಾನವು ಸತತ 8 ತಿಂಗಳುಗಳಿಂದ ₹ 1.40 ಲಕ್ಷ ಕೋಟಿಗಿಂತ ಹೆಚ್ಚಿನ ಮಟ್ಟದಲ್ಲಿ ಇದೆ.

'ಅಕ್ಟೋಬರ್‌ನಲ್ಲಿ ಹಬ್ಬಗಳ ಸಂದರ್ಭದಲ್ಲಿ ಇ-ವೇ ಬಿಲ್ ಸೃಷ್ಟಿಯೂ ಹೆಚ್ಚಿನ ಮಟ್ಟದಲ್ಲಿ ಆಗಿರುತ್ತದೆ ಎಂಬ ನಿರೀಕ್ಷೆ ಇದೆ. ಹೀಗಾಗಿ, ನವೆಂಬರ್‌ನಲ್ಲಿಯೂ ಜಿಎಸ್‌ಟಿ ಸಂಗ್ರಹವು ಹೆಚ್ಚಿನ ಮಟ್ಟ ದಲ್ಲಿ ಇರಲಿದೆ' ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಕೇಂದ್ರ ಜಿಎಸ್‌ಟಿ ಸಂಗ್ರಹವು ಪ್ರಸಕ್ತ ಹಣಕಾಸು ವರ್ಷದಲ್ಲಿ ಬಜೆಟ್ ಅಂದಾಜಿಗಿಂತ ₹ 1.3 ಲಕ್ಷ ಕೋಟಿ ಅಥವಾ ₹ 1.4 ಲಕ್ಷ ಕೋಟಿಯಷ್ಟು ಹೆಚ್ಚಾಗಬಹುದು ಎಂಬುದು ಐಸಿಆರ್‌ಎ ಅಂದಾಜು. ನವೆಂಬರ್ ನಂತರದಲ್ಲಿ ಜಿಎಸ್‌ಟಿ ಮಾಸಿಕ ಸಂಗ್ರಹವು ₹ 1.50 ಲಕ್ಷ ಕೋಟಿಗಿಂತ ಹೆಚ್ಚಿನ ಮಟ್ಟದಲ್ಲಿ ಇರುವ ನಿರೀಕ್ಷೆ ಇದೆ ಎಂದು ಪರೋಕ್ಷ ತೆರಿಗೆಗಳ ತಜ್ಞ ಪರಾಗ್ ಮೆಹ್ತಾ ಹೇಳಿದ್ದಾರೆ.

ಜಿಎಸ್‌ಟಿ ಸಂಗ್ರಹ ವಿವರ



'ಉಕ್ಕಿನ ಮನುಷ್ಯ' ಜೆಮ್‌ಶೆಡ್ ಜೆ ಇರಾನಿ ನಿಧನ



ನವದೆಹಲಿ (ಪಿಟಿಐ): ಉದ್ಯಮ ವಲಯದಲ್ಲಿ 'ಭಾರತದ ಉಕ್ಕಿನ ಮನುಷ್ಯ' ಎಂದೇ ಖ್ಯಾತಿ ಹೊಂದಿದ್ದ ಜೆಮ್‌ಶೆಡ್ ಜೆ. ಇರಾನಿ (86) ಅವರು ಸೋಮವಾರ ರಾತ್ರಿ ನಿಧನರಾದರು. ಅವರಿಗೆ ಪತ್ನಿ ಡೈಸಿ ಇರಾನಿ, ಮಕ್ಕಳಾದ ಜುಬಿನ್, ನಿಲೋಫರ್ ಮತ್ತು ತನಾಜ್ ಇದ್ದಾರೆ.

ಪದ್ಮಭೂಷಣ ಗೌರವಕ್ಕೆ ಭಾಜನರಾಗಿದ್ದ ಜೆಮ್‌ಶೆಡ್ ಇರಾನಿ ಅವರು ಟಾಟಾ ಸ್ಟೀಲ್ ಕಂಪನಿಯಲ್ಲಿ ಒಟ್ಟು 43 ವರ್ಷ ಕೆಲಸ ಮಾಡಿದ್ದರು. ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದರು. 2011ರ ಜೂನ್‌ನಲ್ಲಿ ಸಂಸ್ಥೆಯ ನಿರ್ದೇಶಕ ಮಂಡಳಿಯಿಂದ ನಿವೃತ್ತರಾಗಿದ್ದರು. ಟಾಟಾ ಸ್ಟೀಲ್, ಟಾಟಾ ಸನ್ಸ್ ಜೊತೆಗೆ ಟಾಟಾ ಮೋಟರ್ಸ್ ಹಾಗೂ ಟಾಟಾ ಟೆಲಿಸರ್ವೀಸಸ್‌ನ ನಿರ್ದೇಶಕರಾಗಿಯೂ ಕೆಲಸ ಮಾಡಿದ್ದರು.

ಮೋದಿ ಭೇಟಿಗೆ ಮುನ್ನ ಆಸ್ಪತ್ರೆಗೆ ಸುಣ್ಣ–ಬಣ್ಣ

ರಾತ್ರೋರಾತ್ರಿ ಸ್ವಚ್ಛತೆ: ಕಾಂಗ್ರೆಸ್, ಎಎಪಿ, ಟಿಎಂಸಿ ಆಕ್ರೋಶ

ಅಹಮದಾಬಾದ್: ಮೊರ್ಬಿ ತೂಗು ಸೇತುವೆ ದುರಂತ ಸ್ಥಳ ಮತ್ತು ಬದುಕುಳಿದವರು ಚಿಕಿತ್ಸೆ ಪಡೆಯುತ್ತಿರುವ ಆಸ್ಪತ್ರೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಭೇಟಿ ನೀಡಲಿದ್ದಾರೆ ಎಂಬುದು ಸೋಮವಾರ ಪ್ರಕಟವಾದ ಕೂಡಲೇ ಆಸ್ಪತ್ರೆ ಮತ್ತು ಬೀದಿಯನ್ನು ಸ್ವಚ್ಛಗೊಳಿಸುವ ಕಾರ್ಯವನ್ನು ಸ್ಥಳೀಯಾಡಳಿತ ನಡೆಸಿದೆ.

ಆಸ್ಪತ್ರೆಯನ್ನು ಸ್ವಚ್ಛಗೊಳಿಸುವ ಮತ್ತು ಕೆಲವೆಡೆ ಬಣ್ಣ ಬಳಿಯುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ರಾತ್ರೋರಾತ್ರಿ ಸ್ವಚ್ಛಗೊಳಿಸುವ ಕೆಲಸ ಮಾಡಲಾಗಿದೆ. ಸ್ಥಳೀಯಾಡಳಿತದ ಈ ಕ್ರಮವನ್ನು ಕಾಂಗ್ರೆಸ್ ಮತ್ತು ಎಎಪಿ ಖಂಡಿಸಿವೆ.

‘27 ವರ್ಷಗಳಲ್ಲಿ ಆಸ್ಪತ್ರೆಗಳನ್ನು ಸುಧಾರಿಸಲು ಬಿಜೆಪಿ ಏನನ್ನೂ ಮಾಡಿಲ್ಲ. ಆದರೆ, ಪ್ರಧಾನಿ ಭೇಟಿ ನೀಡುತ್ತಾರೆ ಎಂಬ ಕಾರಣಕ್ಕೆ ನೋವಿನ ಈ ಸಂದರ್ಭದಲ್ಲಿಯೂ ಬಣ್ಣ ಬಳಿಯುವ ಕೆಲಸ ಮಾಡಲಾಗಿದೆ. ಇದು ನಾಚಿಕೆಗೇಡು’ ಎಂದು ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಹೇಳಿದ್ದಾರೆ.

ಕಳೆದ 27 ವರ್ಷಗಳಲ್ಲಿ ಆಸ್ಪತ್ರೆ ಸುಧಾರಣೆಗೆ ಏನನ್ನೂ ಮಾಡಿಲ್ಲ ಎಂಬುದನ್ನು ಜನರಿಂದ ಮುಚ್ಚಿಡುವುದಕ್ಕಾಗಿ ಬಣ್ಣ ಬಳಿಯಲಾಗಿದೆ ಎಂದೂ ಅವರು ಆರೋಪಿಸಿದ್ದಾರೆ.

‘ಒಂದೆಡೆ ಹಲವು ಕುಟುಂಬಗಳ ಬದುಕಿನ ಬಣ್ಣವೇ ಮಸುಕಾಗಿದೆ. ಆದರೆ ಮೊರ್ಬಿ ಆಸ್ಪತ್ರೆಗೆ ರಾತ್ರೋರಾತ್ರಿ ಬಣ್ಣ ಬಳಿಯಲಾಗಿದೆ, ನೀವು (ಮೋದಿ) ಬರುತ್ತಿರುವುದು ನಿಜಕ್ಕೂ ಗಾಯಾಳುಗಳನ್ನು ಮಾತನಾಡಿಸುವುದಕ್ಕಾಗಿಯೇ’ ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

ಜನರು ನೆರವಿಗಾಗಿ ಮೊರೆಯಿಡುತ್ತಿದ್ದಾರೆ. ಆದರೆ ಮೋದಿ ಅವರು ಇಂತಹ ದುರಂತದ ಸಮಯದಲ್ಲಿಯೂ ತಮ್ಮ ಡೌಲು ಪ್ರದರ್ಶನಕ್ಕೆ ಮುಂದಾಗಿದ್ದಾರೆ ಎಂದು ಕಾಂಗ್ರೆಸ್ ವಕ್ತಾರ ಪವನ್ ಖೇರಾ ಹೇಳಿದ್ದಾರೆ.

2016ರಲ್ಲಿ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ ಕೋಲ್ಕತ್ತದಲ್ಲಿ ಮೇಲುಸೇತುವೆ ಕುಸಿದಾಗ ಪ್ರಧಾನಿ ಅದನ್ನು ಪ್ರಚಾರಕ್ಕೆ ಬಳಸಿಕೊಂಡಿದ್ದರು. ಮೇಲುಸೇತುವೆ ಕುಸಿಯಲು ಭ್ರಷ್ಟಾಚಾರ ಕಾರಣ ಎಂದಿದ್ದರು. ಈಗ, ಗುಜರಾತ್‌ನ ಬಗ್ಗೆಯೂ ಅದೇ ರೀತಿಯ ಹೇಳಿಕೆ ಕೊಡಲಿ ಎಂದು ಟಿಎಂಸಿ ಪ್ರಧಾನ ಕಾರ್ಯದರ್ಶಿ ಕುನಾಲ್ ಘೋಷ್ ಹೇಳಿದ್ದಾರೆ. ಅವರ ಭೇಟಿಗೆ ಮುನ್ನ ಆಸ್ಪತ್ರೆಗೆ ಬಣ್ಣ ಬಳಿದದ್ದನ್ನು ಟಿಎಂಸಿ ಹಂಗಿಸಿದೆ.



ಪ್ರಧಾನಿ ಮೋದಿ ಅವರು ಮೊರ್ಬಿಯ ಆಸ್ಪತ್ರೆಗೆ ಮಂಗಳವಾರ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು – ಎಎಫ್‌ಪಿ/ಪಿಐಬಿ ಚಿತ್ರ

ಮೃತರ ಸಂಖ್ಯೆ 135: ಮುಂದುವರಿದ ಶೋಧ

ಮೊರ್ಬಿ ತೂಗುಸೇತುವೆ ಕುಸಿತದಿಂದಾಗಿ 135 ಜನರು ಮೃತಪಟ್ಟಿದ್ದಾರೆ ಮತ್ತು 170 ಮಂದಿಯನ್ನು ರಕ್ಷಿಸಲಾಗಿದೆ ಎಂದು ಗುಜರಾತ್‌ನ ಸಚಿವ ರಾಜೇಂದ್ರ ತ್ರಿವೇದಿ ಮಂಗಳವಾರ ಹೇಳಿದ್ದಾರೆ.

ಸಶಸ್ತ್ರ ಪಡೆಗಳು, ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆ ಮತ್ತು ಇತರ ಸಂಸ್ಥೆಗಳು ಶೋಧ ಕಾರ್ಯವನ್ನು ಮುಂದುವರಿಸಿವೆ. ಆದರೆ, ಯಾವುದೇ ವ್ಯಕ್ತಿ ನಾಪತ್ತೆಯಾದ ಕುರಿತು ದೂರು ದಾಖಲಾಗಿಲ್ಲ. ರಕ್ಷಿಸಿದವರಲ್ಲಿ 17 ಮಂದಿ ಗಾಯಗೊಂಡಿದ್ದಾರೆ. ಅವರು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ರಾಷ್ಟ್ರೀಯ ಸ್ಮಾರಕವಾಗುವತ್ತ ‘ಮಾನಗಡ ಧಾಮ’

ಮಾನಗಡ (ರಾಜಸ್ಥಾನ) (ಪಿಟಿಐ): ಬ್ರಿಟಿಷರು 1913ರಲ್ಲಿ 1,500 ಬುಡಕಟ್ಟು ಜನರನ್ನು ಗುಂಡಿಟ್ಟು ಹತ್ಯೆ ಮಾಡಿದ ಮಾನಗಡ ಧಾಮ್ ರಾಷ್ಟ್ರೀಯ ಸ್ಮಾರಕವಾಗುವತ್ತ ಹೆಜ್ಜೆ ಇಟ್ಟಿದ್ದು, ರಾಜಸ್ಥಾನದ ಜತೆಗೆ ಗುಜರಾತ್, ಮಧ್ಯ ಪ್ರದೇಶ ಮತ್ತು ಮಹಾರಾಷ್ಟ್ರ ಸರ್ಕಾರಗಳು ಮಾನಗಡ ಧಾಮ್‌ನ ಸಮಗ್ರ ಅಭಿವೃದ್ಧಿಗೆ ಮಾರ್ಗಸೂಚಿಯನ್ನು ಸಿದ್ಧಪಡಿಸಬೇಕು ಎಂದು ಪ್ರಧಾನಿ ಸೂಚಿಸಿದ್ದಾರೆ.

ರಾಜಸ್ಥಾನದ ಬನ್ಸ್ವಾರಾ ಜಿಲ್ಲೆಯಲ್ಲಿರುವ ಮಾನಗಡ ಧಾಮವು ಗುಜರಾತ್, ಮಧ್ಯಪ್ರದೇಶದ ಗಡಿಗಳಿಗೆ ಸಮೀಪದಲ್ಲಿದೆ. ಮಂಗಳವಾರ ಇಲ್ಲಿಗೆ ಭೇಟಿ ನೀಡಿದ ಪ್ರಧಾನಿ ಹುತಾತ್ಮ ಬುಡಕಟ್ಟು ಸಮುದಾಯದವರನ್ನು ಸ್ಮರಿಸಿದರು.

> **ಪ್ರಜಾಪ್ರಭುತ್ವದ ಆಳವಾದ ಬೇರು ಹೊಂದಿರುವ ದೇಶವನ್ನು ಮೋದಿ ಪ್ರತಿನಿಧಿಸುತ್ತಿರುವ ಕಾರಣ ಜಾಗತಿಕವಾಗಿ ಅವರಿಗೆ ಗೌರವ ದೊರೆಯುತ್ತಿದೆ**
> **ಅಶೋಕ್ ಗೆಹಲೋತ್,** ರಾಜಸ್ಥಾನದ ಮುಖ್ಯಮಂತ್ರಿ

ಹಿಮಾಚಲ ಪ್ರದೇಶ: 30 ವರ್ಷಗಳ ಹಿಂದೆ ಬಿಜೆಪಿ ಸರ್ಕಾರವನ್ನು ಉರುಳಿಸಿದ್ದ ಪ್ರತಿಭಟನೆ

ಮತ್ತೆ ಬೀದಿಗಿಳಿದ ಸೇಬು ಬೆಳೆಗಾರರು

• ಅಮೃತಾ ಮಧುಕಲ್ಯ

ಪ್ರಜಾ ಮತ ಜನತಂತ್ರದ ಹಬ್ಬ 2022

ಕೋಟಖಾಯಿ/ಠಿಯೋಗ್/ಫಾಗು: 1990ರಲ್ಲಿ ಸೇಬು ಬೆಳೆಗಾರರ ಬೃಹತ್ ಪ್ರತಿಭಟನೆಗೆ ಹಿಮಾಚಲ ಪ್ರದೇಶ ಸಾಕ್ಷಿಯಾಗಿತ್ತು. ಸೇಬಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಬೇಕು ಎಂಬುದು ಅಂದು ರಾಜ್ಯದಲ್ಲಿ ಅಧಿಕಾರ ನಡೆಸುತ್ತಿದ್ದ ಬಿಜೆಪಿ ಸರ್ಕಾರದ ಮುಂದಿದ್ದ ಪ್ರಮುಖ ಬೇಡಿಕೆಯಾಗಿತ್ತು. ಅದೇ ವರ್ಷದ ಜುಲೈ 22ರಂದು ಕೋಟಗಢ ಎಂಬಲ್ಲಿ ಸೇರಿದ್ದ ನೂರಾರು ಪ್ರತಿಭಟನಕಾರರ ಮೇಲೆ ಪೊಲೀಸರು ಗುಂಡು ಹಾರಿಸಿದ್ದರು. ಮೂವರು ರೈತರು ಗುಂಡಿಗೆ ಬಲಿಯಾಗಿದ್ದರು.

ಸೇಬು ಬೆಳಗಾರರ ಪ್ರತಿಭಟನೆಯು ರಾಜ್ಯದ ರಾಜಕೀಯ ದಿಕ್ಕನ್ನು ಬದಲಿಸಿತ್ತು. ಕಾಂಗ್ರೆಸ್ ನಾಯಕ ವೀರಭದ್ರ ಸಿಂಗ್ ಅವರು 68 ಸದಸ್ಯಬಲದ ವಿಧಾನಸಭೆಯಲ್ಲಿ 60 ಸೀಟುಗಳನ್ನು ಗೆದ್ದು ಅಧಿಕಾರ ಹಿಡಿದರು. ಕನಿಷ್ಠ ಬೆಂಬಲ ಬೆಲೆ ಜಾರಿಗೊಳಿಸಲು ಮಂಡಿ ಮೂಲಕ ಖರೀದಿ ಯೋಜನೆಯನ್ನು (ಎಂಐಎಸ್) ಸರ್ಕಾರ ಪರಿಚಯಿಸಿತು. ಇದಾದ 30 ವರ್ಷಗಳ ಬಳಿಕ ಹಲವು ಬೇಡಿಕೆಗಳನ್ನು ಮುಂದಿಟ್ಟುಕೊಂಡು ಸೇಬು ಬೆಳೆಗಾರರು ಮತ್ತೆ ಬೀದಿಗಿಳಿದಿದ್ದಾರೆ. ಈ ಸಮಯದಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ನಿಗದಿಯಾಗಿದೆ. ಹಿಮಾಚಲ ಪ್ರದೇಶ ರಾಜಕಾರಣದಲ್ಲಿ ಸೇಬು ಬೆಳೆಗಾರರ ಪ್ರದೇಶ ಮಹತ್ವದ್ದಾಗಿದ್ದು, 20ರಿಂದ 25 ವಿಧಾನಸಭಾ ಕ್ಷೇತ್ರಗಳಲ್ಲಿ ವ್ಯಾಪಿಸಿದೆ. ಶಿಮ್ಲಾ ಜಿಲ್ಲೆಯ ಎಂಟು, ಮಂಡಿ, ಕುಲ್ಲು ಮತ್ತು ಚಂಬಾ ಜಿಲ್ಲೆಯ ತಲಾ ನಾಲ್ಕು ಕ್ಷೇತ್ರಗಳು ಈ ವ್ಯಾಪ್ತಿಯಲ್ಲಿವೆ.

ಸೇಬು ಪೆಟ್ಟಿಗೆಯ ಮೇಲೆ ವಿಧಿಸಲಾಗುತ್ತಿರುವ ಶೇ 18ರಷ್ಟು ಜಿಎಸ್‌ಟಿಯನ್ನು ಶೇ 12ಕ್ಕೆ ಇಳಿಸುವುದು ಬೆಳೆಗಾರರ ಪ್ರಮುಖ ಬೇಡಿಕೆಗಳಲ್ಲೊಂದು. ಎಂಐಎಸ್ ಯೋಜನೆಯಡಿ ಖರೀದಿಸಿದ ದಾಸ್ತಾನಿನ ಪಾವತಿ ಬಾಕಿ ಉಳಿದಿರುವುದು ಬೆಳೆಗಾರರನ್ನು ಕೆರಳಿಸಿದೆ. ಕೀಟನಾಶಕ, ಶಿಲೀಂಧ್ರನಾಶಕಗಳ ಸಬ್ಸಿಡಿಯನ್ನು ಸರ್ಕಾರ ತೆಗೆದುಹಾಕಿದೆ ಎಂದು ರೈತರು ಆರೋಪಿಸುತ್ತಾರೆ.



ಗೃಹ ಸಚಿವ ಅಮಿತ್ ಶಾ ಅವರು ಹಿಮಾಚಲ ಪ್ರದೇಶದ ಕರ್ಸಾಂಗ್‌ನಲ್ಲಿ ಇತ್ತೀಚೆಗೆ ನಡೆಸಿದ್ದ ರ‍್ಯಾಲಿಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನ ಸೇರಿದ್ದರು –ಪಿಟಿಐ ಚಿತ್ರ

ಸೇಬು ಬೆಳೆಗಾರರ ಪ್ರತಿಭಟನೆಯ ನಡುವೆಯೇ ರಾಜಕೀಯ ಪಕ್ಷಗಳು ಚುನಾವಣೆಗೆ ಸಜ್ಜಾಗುತ್ತಿವೆ. ವಿರೋಧ ಪಕ್ಷಗಳಿಂದಾಗಿ ಸೇಬು ಬೆಳೆಗಾರರ ವಿಷಯವು ರಾಜಕೀಯ ರೂಪ ತಾಳಿದೆ ಎಂದು ಮುಖ್ಯಮಂತ್ರಿ ಜೈರಾಮ್ ಠಾಕೂರ್ ಆರೋಪಿಸಿದ್ದಾರೆ. ಗುಂಡಿನ ದಾಳಿಯಲ್ಲಿ ಮೃತಪಟ್ಟ ಸೇಬು ಬೆಳೆಗಾರರ ಸ್ಮರಣೆಗಾಗಿ ಜುಲೈ 22 ಅನ್ನು ಹುತಾತ್ಮರ ದಿನವನ್ನಾಗಿ ಘೋಷಿಸಲಾಗುವುದು ಎಂದು ಆಮ್ ಆದ್ಮಿ ಪಕ್ಷ ಪ್ರಕಟಿಸಿದೆ. ಬಿಜೆಪಿ ವಿರುದ್ಧ ಹರಿಹಾಯ್ದಿರುವ ಕಾಂಗ್ರೆಸ್, ರಾಜ್ಯ ಸರ್ಕಾರವು ಚುನಾವಣೆಗೆ ಎರಡು ತಿಂಗಳ ಮೊದಲಷ್ಟೇ ಬೆಲೆ ನಿಗದಿಗೆ ತಜ್ಞರ ಸಮಿತಿ ರಚಿಸಿದೆ ಎಂದಿದೆ. ಬಹುತೇಕ ಸೇಬು ಬೆಳೆಗಾರರು ಅನಕ್ಷರಸ್ಥರಾಗಿದ್ದು, ಜಿಎಸ್‌ಟಿ ಪರಿಹಾರ ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಸಿಪಿಎಂ ಅಭ್ಯರ್ಥಿ ವಿಶಾಲ್ ಸಂಗ್ತಾ ಹೇಳುತ್ತಾರೆ.

ಮಂಡಿಯಿಂದ ಖರೀದಿ ಯೋಜನೆಯಡಿ 2013ರಿಂದ ಬಾಕಿಯಿದ್ದ ಹಣವನ್ನು ಪಾವತಿ ಮಾಡಲಾಗಿದ್ದು, ಕೆ.ಜಿ.ಗೆ ₹7 ಇದ್ದ ಬೆಂಬಲ ಬೆಲೆಯನ್ನು ₹10.5ಕ್ಕೆ ಹೆಚ್ಚಿಸಲಾಗಿದೆ ಎಂದು ಎಪಿಎಂಸಿ ಮುಖ್ಯಸ್ಥ ನರೇಶ್ ಚೌಹಾಣ್ ಹೇಳುತ್ತಾರೆ. ಬೆಲೆ ನಿಗದಿ ಮಾಡುವ ಸಂಬಂಧ ತಜ್ಞರ ಸಮಿತಿಯನ್ನು ಸರ್ಕಾರ ರಚಿಸಿತ್ತು. ಪ್ರತಿ ಋತುವಿನಲ್ಲೂ ತಜ್ಞರ ತಂಡವು ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಬೇಕು ಎಂದು ಸಮಿತಿ ಶಿಫಾರಸು ಮಾಡಿದೆ ಎಂದು ಅವರು ಹೇಳಿದ್ದಾರೆ.

ಸುಮಾರು ₹5 ಸಾವಿರ ಕೋಟಿ ಮೌಲ್ಯದ ಸೇಬು ಮಾರುಕಟ್ಟೆಯು ರಾಜ್ಯದ ಆರ್ಥಿಕತೆಯಲ್ಲಿ ಶೇ 13.5ರಷ್ಟು ಪಾಲು ಹೊಂದಿದೆ. ಪ್ರತೀ ಸೇಬು ಪೆಟ್ಟಿಗೆಗಳು ₹1500ರಿಂದ ₹2000ಕ್ಕೆ ಮಾರಾಟವಾಗುತ್ತಿವೆ. ಈ ವರ್ಷ 3.5 ಕೋಟಿ ಪೆಟ್ಟಿಗೆಯಷ್ಟು ಸೇಬು ಉತ್ಪಾದನೆಯಾಗಿದೆ.

ಕರಾವಳಿ ಭಾಗದಲ್ಲೂ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಬರುವ ಕರ್ನಾಟಕ ವಿಧಾನಸಭಾ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಲು ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ಯಾತ್ರೆ ನಡೆಸಲು ಕಾಂಗ್ರೆಸ್ ಯೋಜಿಸಿದೆ.

ಕೃಷ್ಣಾ ನ್ಯಾಯಾಧೀಕರಣದ ತೀರ್ಪನ್ನು ಜಾರಿಗೊಳಿಸಲು ಅಧಿಸೂಚನೆ ಹೊರಡಿಸದೇ ಇರುವುದು, ಕಳಸಾ–ಬಂಡೂರಿ (ಮಹದಾಯಿ) ಯೋಜನೆಯ ಜಾರಿ ವಿಳಂಬ ಹಾಗೂ 371 ಜೆ ಸಮರ್ಪಕ ಅನುಷ್ಠಾನ ಆಗುತ್ತಿಲ್ಲ ಎಂಬ ವಿಚಾರಗಳನ್ನು ಮುಂದಿಟ್ಟುಕೊಂಡು ಮತ್ತೆರಡು ಯಾತ್ರೆಗಳನ್ನು ನಡೆಸುವುದಾಗಿ ಕಾಂಗ್ರೆಸ್ ಈಗಾಗಲೇ ಪ್ರಕಟಿಸಿದೆ. ಈ ಎರಡು ಯಾತ್ರೆಗಳಿಗೆ ನವೆಂಬರ್‌ನಲ್ಲಿ ಚಾಲನೆ ನೀಡಿ ಡಿಸೆಂಬರ್‌ನಲ್ಲಿ ಅಂತ್ಯಗೊಳಿಸಬೇಕು ಎಂಬುದು ಕಾಂಗ್ರೆಸ್ ಪಾಳಯದ ಆಲೋಚನೆ.

ಈ ಎರಡು ಯಾತ್ರೆಗಳು ಪೂರ್ಣಗೊಂಡ ಮತ್ತು ಮಲೆನಾಡು ಭಾಗಗಳಲ್ಲಿ ಯಾತ್ರೆ ನಡೆಸಲು ಹೈಕಮಾಂಡ್ ಮುಂದೆ ರಾಜ್ಯ ನಾಯಕರು ಪ್ರಸ್ತಾವ ಇಟ್ಟಿದ್ದಾರೆ ಎಂದು ಸುರ್ಜೆವಾಲಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ವೇಮುಲ: ಹೋರಾಟದ ಪ್ರತೀಕ’



ರಾಧಿಕಾ ವೇಮುಲ ಅವರನ್ನು ರಾಹುಲ್ ಗಾಂಧಿ ಅಪ್ಪಿಕೊಂಡ ಕ್ಷಣ –ಟ್ವಿಟರ್ ಚಿತ್ರ

ಹೈದರಾಬಾದ್ (ಪಿಟಿಐ): ‘ಸಾಮಾಜಿಕ ತಾರತಮ್ಯ ಹಾಗೂ ಅನ್ಯಾಯದ ವಿರುದ್ಧ ನಾನು ನಡೆಸುತ್ತಿರುವ ಹೋರಾಟದ ಪ್ರತೀಕವಾಗಿ ರೋಹಿತ್ ವೇಮುಲ ಅವರನ್ನು ಕಾಣಬಹುದು’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ರೋಹಿತ್ ತಾಯಿ ರಾಧಿಕಾ ವೇಮುಲ ಅವರು ಭಾರತ್ ಜೋಡೊ ಯಾತ್ರೆಯಲ್ಲಿ ಮಂಗಳವಾರ ಪಾಲ್ಗೊಂಡು ರಾಹುಲ್ ಜೊತೆ ಕೆಲ ದೂರ ಹೆಜ್ಜೆ ಹಾಕಿದರು.

‘ಬಿಜೆಪಿ-ಆರ್‌ಎಸ್‌ಎಸ್‌ನಿಂದ ಸಂವಿಧಾನ ರಕ್ಷಿಸುವಂತೆ ಮನವಿ ಮಾಡಿದ್ದೇನೆ. ರೋಹಿತ್ ಕಾಯ್ದೆಯನ್ನು ಅನುಷ್ಠಾನಕ್ಕೆ ತರುವಂತೆ, ದಲಿತರ ಪ್ರಾತಿನಿಧ್ಯ ಹೆಚ್ಚಿಸುವಂತೆ, ಎಲ್ಲರಿಗೂ ಶಿಕ್ಷಣ ನೀಡುವಂತೆ ಮನವಿ ಮಾಡಿದ್ದೇನೆ’ ಎಂದು ರಾಧಿಕಾ ಅವರು ಟ್ವೀಟ್ ಮಾಡಿದ್ದಾರೆ.

ಸತ್ಯೇಂದರ್ ಜೈನ್ ವಿರುದ್ಧ ಆರೋಪ

ಜೈಲಿನಲ್ಲಿ ಸುರಕ್ಷಿತವಾಗಿರಲು ₹10 ಕೋಟಿ ಸುಲಿಗೆ

ನವದೆಹಲಿ (ಪಿಟಿಐ): ‘ಜೈಲಿನಲ್ಲಿ ಸುರಕ್ಷಿತವಾಗಿ ಇರುವಂತೆ ನೋಡಿಕೊಳ್ಳಲು ಸಚಿವ ಹಾಗೂ ಆಮ್ ಆದ್ಮಿ ಪಕ್ಷದ (ಎಎಪಿ) ಮುಖಂಡ ಸತ್ಯೇಂದರ್ ಜೈನ್ ಅವರು ತನ್ನಿಂದ ₹10 ಕೋಟಿ ಸುಲಿಗೆ ಮಾಡಿದ್ದಾರೆ’ ಎಂದು ವಂಚಕ ಸುಕೇಶ್ ಚಂದ್ರಶೇಖರ್ ಆರೋಪಿಸಿದ್ದಾರೆ.

‘ಸದ್ಯ ಮಾಂಡೋಲಿ ಜೈಲಿನಲ್ಲಿರುವ ಸುಕೇಶ್ ಈ ಸಂಬಂಧ ಅಕ್ಟೋಬರ್ 7ರಂದು ಪತ್ರ ಬರೆದಿದ್ದರು. ಅದನ್ನು ಅ. 8ರಂದು ದೆಹಲಿಯ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರಿಗೆ ನೀಡಲಾಗಿದೆ’ ಎಂದು ಸುಕೇಶ್ ಪರ ವಕೀಲ ಅಶೋಕ್ ಕೆ.ಸಿಂಗ್ ಮಂಗಳವಾರ ತಿಳಿಸಿದ್ದಾರೆ.

‘ಆಮ್ ಆದ್ಮಿ ಪಕ್ಷವು ತನಗೆ ಪಕ್ಷದಲ್ಲಿ (ದೆಹಲಿ ದಕ್ಷಿಣ ವಲಯ) ಪ್ರಮುಖ ಹುದ್ದೆಯೊಂದನ್ನು ನೀಡುವ ಹಾಗೂ ರಾಜ್ಯಸಭಾ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡುವ ಭರವಸೆ ನೀಡಿತ್ತು. ಇದಕ್ಕಾಗಿ ನನ್ನಿಂದ ₹50 ಕೋಟಿಗೂ ಅಧಿಕ ಮೊತ್ತ ಪಡೆಯಲಾಗಿತ್ತು. ಭ್ರಷ್ಟಾಚಾರ ಪ್ರಕರಣದಡಿ 2017ರಲ್ಲಿ ಬಂಧನಕ್ಕೊಳಗಾಗಿದ್ದ ನಾನು ತಿಹಾರ್ ಜೈಲಿನಲ್ಲಿದ್ದೆ. ಆಗ ಬಂದೀಖಾನೆ ಸಚಿವರಾಗಿದ್ದ ಸತ್ಯೇಂದರ್ ಜೈನ್ ಜೈಲಿನಲ್ಲಿ ನನ್ನನ್ನು ಭೇಟಿಯಾಗಿದ್ದರು. ಪಕ್ಷಕ್ಕೆ ₹50 ಕೋಟಿ ಹಣ ನೀಡಿರುವ ಮಾಹಿತಿಯನ್ನು ತನಿಖಾ ಸಂಸ್ಥೆ ಎದುರು ಬಾಯ್ಬಿಟ್ಟಿದ್ದೇನೊ ಇಲ್ಲವೊ ಎಂಬುದರ ಕುರಿತು ವಿಚಾರಿಸಿದ್ದರು’ ಎಂದು ಸುಕೇಶ್ ಪತ್ರದಲ್ಲಿ ಹೇಳಿದ್ದಾರೆ.



ಸತ್ಯೇಂದರ್ ಜೈನ್

‘ಸತ್ಯೇಂದರ್ ಅವರು 2019ರಲ್ಲಿ ಮತ್ತೊಮ್ಮೆ ನನ್ನನ್ನು ಜೈಲಿನಲ್ಲಿ ಭೇಟಿಯಾಗಿದ್ದರು. ಆಗ ಅವರ ಕಾರ್ಯದರ್ಶಿ ಹಾಗೂ ಆತ್ಮೀಯ ಸ್ನೇಹಿತ ಸುಶೀಲ್ ಅವರೂ ಜೊತೆಗಿದ್ದರು. ಜೈಲಿನಲ್ಲಿ ಜೀವಂತವಾಗಿ ಇರಬೇಕಾದರೆ, ಅಗತ್ಯ ಸೌಲಭ್ಯಗಳು ಬೇಕಿದ್ದರೆ ಪ್ರತಿ ತಿಂಗಳು ₹2 ಕೋಟಿ ಭದ್ರತಾ ಶುಲ್ಕ ನೀಡಬೇಕೆಂದು ಕೇಳಿದ್ದರು. ಕಾರಾಗೃಹ ಇಲಾಖೆಯ ಮಹಾನಿರ್ದೇಶಕ (ಡಿಜಿ) ಸಂದೀಪ್ ಗೋಯೆಲ್ ತನ್ನ ಆಪ್ತರು. ಅವರಿಗೆ ₹1.5 ಕೋಟಿ ಹಣ ನೀಡುವಂತೆ ಸೂಚಿಸಿದ್ದರು. ₹10 ಕೋಟಿ ಹಣ ನೀಡುವಂತೆ ಪದೇ ಪದೇ ಪೀಡಿಸಿದ್ದರು. ಹೀಗಾಗಿ ಅಷ್ಟೂ ಮೊತ್ತವನ್ನು ನೀಡಿದ್ದೆ. ಅದನ್ನು ಸತ್ಯೇಂದರ್ ಅವರ ಸಹವರ್ತಿಗಳು ಕೋಲ್ಕತ್ತದಲ್ಲಿ ಪಡೆದುಕೊಂಡಿದ್ದರು’ ಎಂದು ಪತ್ರದಲ್ಲಿ ದೂರಿದ್ದಾರೆ.

‘ಈ ವಿಚಾರವನ್ನು ಮನಸ್ಸಿನಲ್ಲೇ ಇಟ್ಟುಕೊಳ್ಳಲು ನನ್ನಿಂದ ಸಾಧ್ಯವಿಲ್ಲ. ಜೈಲಿನಲ್ಲೂ ಅವರು ಭ್ರಷ್ಟಾಚಾರ ನಡೆಸುತ್ತಿದ್ದಾರೆ ಎಂಬುದೂ ಜನರಿಗೆ ತಿಳಿಯಬೇಕು’ ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಸೇತುವೆ ದುರಂತದಿಂದ ಜನರ ಗಮನ ಬೇರೆಡೆ ಸೆಳೆಯುವ ತಂತ್ರ: ಕೇಜ್ರಿವಾಲ್

‘ಗುಜರಾತ್‌ನ ಮೊರ್ಬಿಯಲ್ಲಿ ಸೇತುವೆ ಕುಸಿದು ಬಿದ್ದು ನೂರಾರು ಮಂದಿ ಸಾವಿಗೀಡಾಗಿದ್ದಾರೆ. ಈ ದುರಂತದಿಂದ ಜನರ ಗಮನ ಬೇರೆಡೆ ಸೆಳೆಯಲು ಈ ರೀತಿ ಆರೋಪ ಮಾಡಲಾಗುತ್ತಿದೆ’ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಹೇಳಿದ್ದಾರೆ.

‘ಪಂಜಾಬ್ ಚುನಾವಣೆಗೂ ಮುನ್ನ ಬಿಜೆಪಿಯವರು ಕುಮಾರ್ ವಿಶ್ವಾಸ್ ಅವರನ್ನು ನಮ್ಮ ವಿರುದ್ಧ ಬಳಸಿಕೊಂಡಿದ್ದರು. ಗುಜರಾತ್‌ನಲ್ಲಿ ಪಕ್ಷದ ಸ್ಥಿತಿ ಅಷ್ಟೇನೂ ಉತ್ತಮವಾಗಿಲ್ಲ. ಹೀಗಾಗಿ ಸುಕೇಶ್ ಅವರನ್ನು ನಮ್ಮ ವಿರುದ್ಧ ಬಳಸಿಕೊಳ್ಳುತ್ತಿದೆ’ ಎಂದು ದೂರಿದ್ದಾರೆ.

‘ಒಬಿಸಿ ಅನುದಾನಕ್ಕೆ ಬಿಜೆಪಿ ಕತ್ತರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ಹಿಂದುಳಿದ ವರ್ಗಗಳಿಗೆ ಆದಷ್ಟು ಅನ್ಯಾಯ ಬೇರೆ ಯಾವುದೇ ಸರ್ಕಾರದ ಕಾಲದಲ್ಲೂ ಆಗಿಲ್ಲ. ಈ ವರ್ಗಗಳಿಗೆ ಸೇರಿದ 11ಕ್ಕೂ ಹೆಚ್ಚು ಅಭಿವೃದ್ಧಿ ನಿಗಮಗಳಿಗೆ ನೀಡುತ್ತಿದ್ದ ಅನುದಾನವನ್ನು ಕಡಿಮೆ ಮಾಡಲಾಗಿದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ದೂರಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಲ್ಮೀಕಿ ಅಭಿವೃದ್ಧಿ ನಿಗಮ, ಅಂಬೇಡ್ಕರ್ ಅಭಿವೃದ್ಧಿ ನಿಗಮ, ಜಗಜೀವನ್‌ರಾಂ ಅಭಿವೃದ್ಧಿ ನಿಗಮಗಳಿಗೆ ಅನುದಾನ ಕಡಿಮೆ ಮಾಡಲಾಗಿದೆ. ಇದು ಹಿಂದುಳಿದವರ ಮೇಲೆ ಬಿಜೆಪಿಗಿರುವ ಕಾಳಜಿಗೆ ಸಾಕ್ಷಿ ಎಂದು ಲೇವಡಿ ಮಾಡಿದರು.

ಹಿಂದುಳಿದ ಜಾತಿಗಳ ಕಲ್ಯಾಣಕ್ಕೆ 2017-18 ರಲ್ಲಿ ₹2,791 ಕೋಟಿ ನೀಡಲಾಗಿತ್ತು. 2021-22ರಲ್ಲಿ ₹2,318 ಕೋಟಿ ಘೋಷಿಸಿ, ₹2,257 ಕೋಟಿ ಖರ್ಚು ಮಾಡಲಾಗಿದೆ. ಬಸವರಾಜ ಬೊಮ್ಮಾಯಿ ಅವರಿಗೆ ಹಿಂದುಳಿದ ಜಾತಿಗಳ ಮೇಲೆ ಇರುವ ಪ್ರೀತಿ ಇಷ್ಟೇನಾ ಎಂದೂ ಪ್ರಶ್ನಿಸಿದರು.

‘2013–14 ರಲ್ಲಿ ನಾವು ಅಧಿಕಾರಕ್ಕೆ ಬಂದ ಮೇಲೆ ಅನುದಾನ ₹1,200 ಕೋಟಿ ಇದ್ದದ್ದು, ನಂತರದ ವರ್ಷಗಳಲ್ಲಿ ₹2,267 ಕೋಟಿಗೆ ಹೆಚ್ಚಿಸಲಾಯಿತು. ಬೊಮ್ಮಾಯಿ ಸರ್ಕಾರ ಸಾಮಾಜಿಕ ನ್ಯಾಯದ ಪರವಾಗಿಲ್ಲ. ಹಿಂದುಳಿದ ಮತ್ತು ದಲಿತ ವಿರೋಧಿ ಸರ್ಕಾರ’ ಎಂದು ಹರಿಹಾಯ್ದರು.

‘ಹಿಂದುಳಿದ ಜಾತಿಗಳ ಸಮಾವೇಶ ಮಾಡಿ, ನನ್ನನ್ನು ಟಾರ್ಗೆಟ್ ಮಾಡಿಕೊಂಡು ಸುಳ್ಳು ಭಾಷಣ ಮಾಡುತ್ತಿದ್ದಾರೆ, ಬಿಜೆಪಿಯವರಿಗೆ ನಾಚಿಕೆಯಾಗಬೇಕು. ಇವರಿಗೆ ನನ್ನನ್ನು ಕಂಡರೆ ಎಷ್ಟು ಭಯ ಎಂದರೆ ದೊಡ್ಡಬಳ್ಳಾಪುರ, ಕಲಬುರಗಿ ಸೇರಿ ಎಲ್ಲಿ ಹೋದರೂ ನನ್ನ ಬಗ್ಗೆಯೇ ಮಾತನಾಡುತ್ತಾರೆ. ಆದ್ದರಿಂದಲೇ, ಹಿಂದುಳಿದವರಿಗೆ ಏನು ಮಾಡಿದ್ದೀರಿ ಎಂಬುದರ ಬಗ್ಗೆ ಬಹಿರಂಗ ಚರ್ಚೆಗೆ ಬನ್ನಿ ಎಂದು ಬೊಮ್ಮಾಯಿಗೆ ಸವಾಲು ಹಾಕಿದ್ದೇನೆ. ಆದರೆ ಇವತ್ತಿನವರೆಗೆ ಅವರು ಚರ್ಚೆಗೆ ಬಂದಿಲ್ಲ’ ಎಂದು ಹೇಳಿದರು.

ಕುರಿಗಾರರಿಗೆ ಸಾಲ ಕೊಡಿಸುವುದು ಸಾಧನೆಯೇ?

‘ಒಂದು ಆದೇಶ ಪ್ರತಿ ಹಿಡಿದುಕೊಂಡು ಕಲಬುರಗಿ ಸಮಾವೇಶಕ್ಕೆ ಹೋಗಿದ್ದ ಬಸವರಾಜ ಬೊಮ್ಮಾಯಿ, ಕುರಿಗಾರರಿಗೆ ಒಂದು ದೊಡ್ಡ ಕಾರ್ಯಕ್ರಮ ಕೊಟ್ಟಿರುವುದಾಗಿ ಹೇಳಿಕೊಂಡಿದ್ದಾರೆ. ಸಾಲ ಕೊಡಿಸುವುದು ಸಾಧನೆಯೇ’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

‘ಕಾರ್ಯಕ್ರಮಕ್ಕೆ ಹೋಗುವ ಮುನ್ನ ತರಾತುರಿಯಲ್ಲಿ ಆದೇಶ ಹೊರಡಿಸಲಾಗಿದೆ. 20 ಸಾವಿರ ಜನರಿಗೆ ₹354 ಕೋಟಿ ವೆಚ್ಚದಲ್ಲಿ ತಲಾ 20 ಕುರಿಗಳು ಮತ್ತು ಒಂದು ಟಗರನ್ನು ಒಳಗೊಂಡ ಒಂದು ಘಟಕಕ್ಕೆ ₹1.75 ಲಕ್ಷ ನೀಡುವ ಆದೇಶ ಮಾಡಿದ್ದೇನೆ ಎಂದು ಬೊಮ್ಮಾಯಿ ಆದೇಶ ಪ್ರತಿ ತೋರಿಸಿದರು. ಆದರೆ, ₹1.75 ಲಕ್ಷದಲ್ಲಿ ಶೇ 50 ರಷ್ಟು ಹಣವನ್ನು ಎನ್‌ಸಿಡಿಸಿ ಮೂಲಕ ಸಾಲದ ರೂಪದಲ್ಲಿ ನೀಡಲಾಗುತ್ತದೆ. ಶೇ 25 ಸಬ್ಸಿಡಿ, ಶೇ 25 ರಷ್ಟು ಫಲಾನುಭವಿಯೇ ನೀಡಬೇಕು. ಆದರೆ, ಭಾಷಣದಲ್ಲಿ ಮಾತ್ರ ಉಚಿತವಾಗಿ ನೀಡುತ್ತೇವೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ’ ಎಂದು ಸಿದ್ದರಾಮಯ್ಯ ಕುಟುಕಿದರು..

‘ಜಿಲ್ಲಾವಾರು ಒಬಿಸಿ ಸಮಾವೇಶ’

ಚಿತ್ರದುರ್ಗ: ಪಕ್ಷ ಸಂಘಟನೆಯ ಉದ್ದೇಶದಿಂದ ರಾಜ್ಯದ ಎಲ್ಲ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಸಮಾವೇಶ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಎಸ್. ಮಧು ಬಂಗಾರಪ್ಪ ತಿಳಿಸಿದರು.



ಮಧು ಬಂಗಾರಪ್ಪ

‘ನಿರ್ಲಕ್ಷ್ಯಕ್ಕೆ ಒಳಗಾದ ಸಮುದಾಯಗಳನ್ನು ಒಗ್ಗೂಡಿಸುವ ಜವಾಬ್ದಾರಿಯನ್ನು ವರಿಷ್ಠರು ನೀಡಿದ್ದಾರೆ. ಡಿಸೆಂಬರ್ ಅಥವಾ ಜನವರಿ ಅಂತ್ಯದ ವೇಳೆಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸಮಾವೇಶ ಪೂರ್ಣಗೊಳಿಸಲು ತೀರ್ಮಾನಿಸಲಾಗಿದೆ. ಬಳಿಕ ರಾಜ್ಯಮಟ್ಟದ ಸಮಾವೇಶ ಹಮ್ಮಿಕೊಳ್ಳಲಾಗುವುದು. ರಾಷ್ಟ್ರ ನಾಯಕರು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದು, ಐದು ಲಕ್ಷಕ್ಕೂ ಹೆಚ್ಚು ಜನರನ್ನು ಸೇರಿಸುವ ಗುರಿ ಹೊಂದಲಾಗಿದೆ’ ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಬಿಜೆಪಿ ನಡೆಸುತ್ತಿರುವ ಸಮಾವೇಶಗಳಿಗೆ ಪ್ರತಿಯಾಗಿ ಇಂತಹ ಸಮಾವೇಶಗಳನ್ನು ಹಮ್ಮಿಕೊಳ್ಳಲಾಗುತ್ತಿಲ್ಲ. ಹಿಂದುಳಿದ ವರ್ಗದ ವಿಭಾಗದ ಜವಾಬ್ದಾರಿ ವಹಿಸಿಕೊಂಡಾಗಲೇ ಈ ತೀರ್ಮಾನ ಕೈಗೊಳ್ಳಲಾಗಿತ್ತು. ಚುನಾವಣೆ ಸಮೀಪಿಸಿದಾಗ ಮಾತ್ರ ಬಿಜೆಪಿಗೆ ಹಿಂದುಳಿದ ವರ್ಗಗಳು ನೆನಪಾಗುತ್ತವೆ. ನಾರಾಯಣಗುರು ಅವರನ್ನು ಸ್ಮರಿಸುವ ನಾಟಕ ಮಾಡಲಾಗುತ್ತದೆ. ಹಿಂದುಳಿದ ಸಮುದಾಯದ ಸಮಾವೇಶ ನಡೆಸುವ ಯೋಗ್ಯತೆ ಬಿಜೆಪಿಗೆ ಇಲ್ಲ’ ಎಂದು ಅವರು ಕಿಡಿಕಾರಿದರು.

‘ದಿ ವೈರ್’ ಸಂಪಾದಕರ ಮನೆ, ಕಚೇರಿ ಶೋಧ: ಡಿಜಿಪಬ್, ಸಿಪಿಎಂ ಖಂಡನೆ

ನವದೆಹಲಿ (ಪಿಟಿಐ): ಬಿಜೆಪಿಯ ಸಾಮಾಜಿಕ ಮಾಧ್ಯಮ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಅವರ ದೂರು ಆಧರಿಸಿ ‘ದಿ ವೈರ್’ ಸುದ್ದಿ ಮಾಧ್ಯಮ ಕಚೇರಿ ಮತ್ತು ಸಂಪಾದಕರ ಮನೆಗಳಲ್ಲಿ ದೆಹಲಿ ಪೊಲೀಸರು ಶೋಧ ನಡೆಸಿರುವುದನ್ನು ಡಿಜಿಪಬ್ (ಡಿಜಿಟಲ್ ಮಾಧ್ಯಮ ಸಂಘಟನೆ) ಮತ್ತು ಸಿಪಿಎಂ ಮಂಗಳವಾರ ತೀವ್ರವಾಗಿ ಖಂಡಿಸಿವೆ.

‘ಇದು ದೇಶದಲ್ಲಿ ಮುಖ್ಯವಾಗಿ ಪತ್ರಿಕೋದ್ಯಮ ವೃತ್ತಿಯನ್ನು ಅಪರಾಧೀಕರಿಸುವ ಮತ್ತು ಹತ್ತಿಕ್ಕುವ ಉದ್ದೇಶದ್ದಾಗಿದೆ’ ಎಂದು ಡಿಜಿಪಬ್ ನ್ಯೂಸ್ ಇಂಡಿಯಾ ಫೌಂಡೇಶನ್ ಹೇಳಿಕೆಯಲ್ಲಿ ದೂರಿದೆ.

ಇದೊಂದು ಪ್ರತೀಕಾರದ ಕ್ರಮವೆಂದು ಟೀಕಿಸಿರುವ ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ‘ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಕೆಳಗಿರುವ 30 ದೇಶಗಳಲ್ಲಿ ಭಾರತ ಸೇರಿರುವುದರಲ್ಲಿ ಆಶ್ಚರ್ಯವಿಲ್ಲ’ ಎಂದು ಟ್ವೀಟ್ ಮಾಡಿದ್ದಾರೆ.

ಸಂಪಾದಕ ಸಿದ್ಧಾರ್ಥ್ ವರದರಾಜನ್, ಡೆಪ್ಯುಟಿ ಎಡಿಟರ್ ಎಂ.ಕೆ. ವೇಣು ಮತ್ತು ಎಕ್ಸಿಕ್ಯುಟಿವ್ ನ್ಯೂಸ್ ಪ್ರೊಡ್ಯೂಸರ್ ಜಾಹ್ನವಿ ಸೇನ್ ಅವರ ಮನೆಗಳಲ್ಲೂ ದೆಹಲಿ ಪೊಲೀಸರು ಸೋಮವಾರ ಶೋಧ ನಡೆಸಿದ್ದರು.

‘ಅತಿವಿರಳ ಕಾಯಿಲೆ ಚಿಕಿತ್ಸೆ ನೆರವಿಗೆ ಪ್ರಸ್ತಾವ ಸಲ್ಲಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿವಿರಳ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳು ಮತ್ತು ಅವರ ಚಿಕಿತ್ಸೆಗೆ ಅಗತ್ಯವಿರುವಷ್ಟು ಅನುದಾನದ ವಿವರವನ್ನು ಸಲ್ಲಿಸಿ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ದೇಶದ ಎಲ್ಲಾ ಉತ್ಕೃಷ್ಟತಾ ಕೇಂದ್ರಗಳಿಗೆ (ಸಿಒಇಎಸ್) ಪತ್ರ ಬರೆದಿದೆ.

ಕೇಂದ್ರ ಆರೋಗ್ಯ ಸಚಿವಾಲಯದ ಅತಿವಿರಳ ಕಾಯಿಲೆ ಘಟಕವು, ಅತಿವಿರಳ ಕಾಯಿಲೆಯಿಂದ ಬಳಲುತ್ತಿರುವ ಪ್ರತಿ ರೋಗಿಯ ಚಿಕಿತ್ಸೆಗೆ ಗರಿಷ್ಠ ₹50 ಲಕ್ಷದ ನೆರವು ನೀಡುತ್ತದೆ. ಅಂತಹ ರೋಗಿಗಳನ್ನು ಗುರುತಿಸಿ, ಅವರ ಚಿಕಿತ್ಸೆಗೆ ತಗಲುವ ವೆಚ್ಚದ ಪ್ರಸ್ತಾಪವನ್ನು ದೇಶದ ವಿವಿಧ ರಾಜ್ಯಗಳಲ್ಲಿ ಇರುವ ಒಂಬತ್ತು ಉತ್ಕೃಷ್ಟತಾ ಕೇಂದ್ರಗಳು ಸಲ್ಲಿಸಬೇಕು. ಆದರೆ ಈವರೆಗೆ ಎರಡು ಕೇಂದ್ರಗಳು ಮಾತ್ರ ಅಂತಹ ಪ್ರಸ್ತಾವ ಸಲ್ಲಿಸಿವೆ.

ಈ ಬಗ್ಗೆ ಪತ್ರದಲ್ಲಿ ಉಲ್ಲೇಖಿಸಿರುವ ಸಚಿವಾಲಯವು, ‘ಪ್ರಸ್ತಾವ ಸಲ್ಲಿಸುವಂತೆ ಆಗಸ್ಟ್‌ನಲ್ಲಿಯೂ ಕೋರಲಾಗಿತ್ತು. ಹೀಗಿದ್ದೂ ಎಲ್ಲಾ ಕೇಂದ್ರಗಳು ಪ್ರಸ್ತಾವ ಸಲ್ಲಿಸಿಲ್ಲ. ಇಂತಹ ರೋಗಿಗಳ ಚಿಕಿತ್ಸೆಯ ನೆರವಿಗೆ 2022–23ನೇ ಸಾಲಿನಲ್ಲಿ ತೆಗೆದಿರಿಸಲಾಗಿರುವ ಅನುದಾನವನ್ನು ಬಳಸಿಕೊಳ್ಳಬೇಕು. ಇದಕ್ಕಾಗಿ ಪ್ರಸ್ತಾವಗಳನ್ನು ಸಲ್ಲಿಸಬೇಕು. ಇದರಿಂದ ಪ್ರಸಕ್ತ ಸಾಲಿನ ಅನುದಾನವೂ ಬಳಕೆಯಾಗುತ್ತದೆ ಮತ್ತು 2023–24ನೇ ಸಾಲಿನಲ್ಲಿ ಅನುದಾನ ತೆಗೆದಿರಿಸಲು ಸಾಧ್ಯವಾಗುತ್ತದೆ’ ಎಂದು ಪತ್ರದಲ್ಲಿ ಸೂಚಿಸಲಾಗಿದೆ.

ಪ್ರಜಾವಾಣಿ @75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.inಗೆ ಕಳುಹಿಸಿ. ಇನ್ನಷ್ಟು ಪ್ರತಿಕ್ರಿಯೆಗಳನ್ನು prajavani.net ನಲ್ಲಿ ಓದಬಹುದು...

ಬದ್ಧತೆಗೆ ಹೆಸರು



75ನೇ ವಸಂತಕ್ಕೆ ಕಾಲಿಟ್ಟ ‘ಪ್ರಜಾವಾಣಿ’ ದಿನಪತ್ರಿಕೆಯು ಕನ್ನಡಿಗರಿಗೆ ದಾರಿದೀಪ. ದೈನಂದಿನ ವರದಿಗಳ ಜೊತೆ ಜನಜಾಗೃತಿಯ ಸಂದೇಶವನ್ನೂ ನೀಡುತ್ತದೆ. ವಿವಿಧ ಅಂಕಣಗಳು, ವಿನ್ಯಾಸ ಕನ್ನಡ ಪತ್ರಿಕೋದ್ಯಮದಲ್ಲಿ ಹೊಸ ಸ್ಪರ್ಶವನ್ನು ನೀಡಿದೆ. ನನ್ನ ತಂದೆ ಸೇನ ನಮಿರಾಜ ಮಲ್ಲ ಬರೆದ ಹಲವು ಕತೆ ಲೇಖನಗಳನ್ನು, ಕಾನೂನು ಮತ್ತು (ನೀವು ಅಂಕಣ), ಧಾರಾವಾಹಿ, ಕಾದಂಬರಿ ಬರಹಗಳನ್ನು ಪ್ರಜಾವಾಣಿ ಪ್ರಕಟಿಸಿದೆ.

60ರ ದಶಕದಲ್ಲಿ ಸಂಭಾವನೆಯನ್ನು ಮನಿಯಾರ್ಡರ್ ಮೂಲಕ ಕಳುಹಿಸುವಾಗ ಸ್ಥಾಪಕ ಕೆ.ಎನ್.ಗುರುಸ್ವಾಮಿಯವರ ಹಸ್ತಾಕ್ಷರವೇ ಇರುತ್ತಿತ್ತು! ತಂದೆ ನಮಗೆಲ್ಲ ತೋರಿಸಿದ್ದನ್ನು ಈಗಲೂ ಸಂಗ್ರಹಿಸಿಡಲಾಗಿದೆ. ಇಂದಿಗೂ ಬದ್ಧತೆ, ನಾವೀನ್ಯತೆ ‘ಬಹುಮುಖಿ’ಯಾಗಿದೆ. ಅಭಿನಂದನೆಗಳು

ಎಸ್.ಎನ್. ಅಮೃತ ಮಲ್ಲ, ಪುತ್ತೂರು

ಆರಕ್ಕೇ ಓದುವ ಅಭ್ಯಾಸ

ನನ್ನ ತಂದೆ ಪ್ರಾಥಮಿಕ ಶಾಲೆ ಶಿಕ್ಷಕರು. ಹೀಗಾಗಿ ಮಕ್ಕಳಾದ ನಮಗೆ ಐದು ಆರರ ಪ್ರಾಯದಲ್ಲೇ ಓದುವ ಅಭ್ಯಾಸ ಮಾಡಿಸಿದ್ದರು. ಮಾಧ್ಯಮಿಕ ಶಾಲೆಯಲ್ಲಿ ಜೆ.ಪಾಲ್ ಎಂಬ ಕ್ಲಾಸ್ ಟೀಚರ್ ಪ್ರಾರ್ಥನೆ ಬಳಿಕ ಪ್ರಜಾವಾಣಿಯ ಮುಖ್ಯ ಶಿರೋನಾಮೆಗಳನ್ನು ವಿದ್ಯಾರ್ಥಿಗಳಿಂದ ಓದಿಸುತ್ತಿದ್ದರು. ತಂದೆಯ ಇನ್ನೊಬ್ಬ ವಿದ್ಯಾರ್ಥಿ ಹಾಗೂ ಪ್ರಾಥಮಿಕ ಶಾಲೆಯ ಉಪನ್ಯಾಸಕರೂ ಆಗಿದ್ದ ಮಹಮ್ಮದ್ ಉಸ್ಮಾನ್ ಮೇಸ್ತ್ರು ಒಂದು ಭಾನುವಾರ ಪ್ರಜಾವಾಣಿಯನ್ನು ತಂದು ತಂದೆಯವರಿಗೆ ಓದಲು ಕೊಟ್ಟರು. ಅದನ್ನು ಓದಿದ ನಮ್ಮ ತಂದೆ ತಮ್ಮ ಅಭಿಪ್ರಾಯ ಬದಲಿಸಿ ಪ್ರಜಾವಾಣಿಯನ್ನು ತರಿಸಲು ನಿರ್ಧರಿಸಿದರು. ಇನ್ನೊಂದು ಪತ್ರಿಕೆಯನ್ನು ಕೈಬಿಟ್ಟರು. ಅಂದಿನಿಂದ ನಮಗೆ ಪ್ರಜಾವಾಣಿಯನ್ನು ಓದುವ ರೂಢಿ.

‘ಛೂ ಬಾಣ’ ಅಂಕಣವನ್ನು ತಪ್ಪದೇ ಓದುತ್ತಿದ್ದೆ. 1957ರಲ್ಲಿ ಶುರುವಾದ ದೀಪಾವಳಿ ವಿಶೇಷಾಂಕಗಳನ್ನು ತಪ್ಪದೇ ಓದಿ ಸಂಗ್ರಹಿಸಿ ಇಟ್ಟಿದ್ದೆ. ಕೆಲಸಕ್ಕೆ ಸೇರಿದ ಮೇಲೆ ಮತ್ತು ನಿವೃತ್ತಿ ನಂತರ ಮುಂಜಾನೆಗಳು ಪ್ರಾರಂಭವಾಗುವುದೇ ಪ್ರಜಾವಾಣಿಯ ಓದಿನಿಂದ.

ತನ್ನ ಧೋರಣೆಯಲ್ಲಿ ರಾಜಿ ಆಗದೆ ಮುಂದುವರಿದಿರುವುದೇ ಪ್ರಜಾವಾಣಿಯ ಜನಪ್ರಿಯತೆಗೆ ಸಾಕ್ಷಿ. ನಮ್ಮ ನೆಚ್ಚಿನ ಪ್ರಜಾವಾಣಿ ‘ಶತಕ ಬಾರಿಸಿ’ ನಿರಂತರವಾಗಿ ಮುಂದುವರಿಯಲಿ ಎಂದು ಹಾರೈಸುತ್ತೇನೆ.

ಗುಬ್ಬಿ ರೇವಣಾರಾಧ್ಯ, ಹಂಪಿ ನಗರ, ಬೆಂಗಳೂರು

ಮುಗಿಯದ ಪ್ರೀತಿ



ಪ್ರಜಾವಾಣಿ ಪತ್ರಿಕೆ ಇಲ್ಲದ ನನ್ನ ದಿನಚರಿ ಊಹಿಸಿಕೊಳ್ಳಲೂ ಆಗದು ಎನ್ನುವ ಮಟ್ಟಿಗೆ ಅದು ನನ್ನ ಭಾವಕೋಶ ಆವರಿಸಿಕೊಂಡಿದೆ. ವಾರಗಟ್ಟಲೇ ಊರಿಗೆ ಹೋಗಿ ಬಂದ ಬಳಿಕವೂ ಅಷ್ಟೂ ದಿನಗಳ ಪತ್ರಿಕೆಗಳ ಮೇಲೆ ಕಣ್ಣಾಡಿಸಿದಾಗಲೇ ಸಮಾಧಾನ.

ಪ್ರಜಾವಾಣಿ ನನಗೆ ಇಷ್ಟೊಂದು ಇಷ್ಟವಾಗಲು ಕಾರಣ ಅದರ ದೂರದೃಷ್ಟಿ ಮತ್ತು ದಮನಿತರ ಪರ ಕಾಳಜಿ. 'ಬರಿದಾಗುತ್ತಿದೆ ಅನ್ನದ ಬಟ್ಟಲು' ಮಾಲಿಕೆಯ ಸರಣಿ ವರದಿಗಳು, ಅಗ್ರಲೇಖನಗಳು, ಸಂಪಾದಕೀಯ ಬರಹಗಳು, ದಲಿತ ಸಂಘರ್ಷ ಸಮಿತಿ ಇಬ್ಭಾಗವಾದಾಗ ಅದು ವಿಷಾದದಿಂದ ಪ್ರಕಟಿಸಿದ ವರದಿಗಳು ಹೀಗೆ ಹೆಸರಿಸಬಹುದಾದ ಕೆಲವು ಪ್ರಭಾವ ಬೀರಿವೆ. ಕನ್ನಡ ಸಾಹಿತ್ಯದ ವಿವಿಧ ಪಂಥಗಳನ್ನು ಸುಪುಷ್ಟಗೊಳಿಸುವ ನಿಟ್ಟಿನಲ್ಲಿ ಸಾಪ್ತಾಹಿಕ ಪುರವಣಿ ಮತ್ತು ವಿಶೇಷಾಂಕಗಳ ಕೊಡುಗೆ ಸದಾ ಸ್ಮರಣಾರ್ಹ.

ಚಿದಾನಂದ ಸಾಲಿ, ಸಾಹಿತಿ, ರಾಯಚೂರು

ಸಾಂಸ್ಕೃತಿಕ ಹರಿಕಾರ

ನನಗೀಗ 73, ಪ್ರಜಾವಾಣಿಗೆ 75. ನನಗಿಂತ ಎರಡು ವರ್ಷ ಹಿರಿದಾದ ಪತ್ರಿಕೆಯನ್ನು ನನ್ನ ಎಳೆಯ ಕಣ್ಣುಗಳಿಂದಲೇ ನೋಡುತ್ತಾ, ಓದುತ್ತಾ ಬೆಳೆದವನು ನಾನು. ಯಾವ ಸೆಳೆತವೋ ಏನೋ ಆಗಿನಿಂದಲೂ ಪತ್ರಿಕೆ ಮನೆಯ ಒಡನಾಡಿಯಾಗಿ ಬೆರೆತು ಹೋಗಿದೆ.

ಪ್ರಜಾವಾಣಿಯೆಂದರೆ ಪರ್ಯಾಯ ಗ್ರಂಥಭಂಡಾರವೆಂದರೂ ತಪ್ಪಾಗಲಾರದು. ನನ್ನ ಚೊಚ್ಚಲ ಕವಿತೆ, ಕತೆ ಬೆಳಕು ಕಂಡದ್ದು ಪ್ರಜಾವಾಣಿಯಲ್ಲೇ. ನನ್ನ ಸಿಂಹಪಾಲು ಕವಿತೆ, ಕೆಲವು ಕತೆ, ಲೇಖನಗಳನ್ನು ಪ್ರಕಟಿಸಿದ್ದೂ ಪ್ರಜಾವಾಣಿಯೇ. 75ರ ಹರೆಯದಲ್ಲೂ ಪತ್ರಿಕೆ ‘ನಿಚ್ಚಂ ಪೊಸತಪ್ಪುದು’ ಎನ್ನುವ ಕವಿವಾಣಿಯಂತೆ ಹೊಸತನವನ್ನು ಕಾಪಾಡಿಕೊಳ್ಳುತ್ತಾ ಮತ್ತಷ್ಟು ಸಿರಿತನವನ್ನು ರೂಢಿಸಿಕೊಂಡಿದೆ. ಭವಿಷ್ಯದಲ್ಲಿ ಪತ್ರಿಕೆ ಉಜ್ವಲವಾಗಿ ಬೆಳೆಯಲಿ.

ಚಂದ್ರಶೇಖರ ತಾಳ್ಯ, ಹೊಳಲ್ಕೆರೆ

ಓವಲ್‌ನಲ್ಲಿ ಭಾರತಕ್ಕೆ ಸವಾಲ್

ಬಾಂಗ್ಲಾ ವಿರುದ್ಧ ಪಂದ್ಯ; ರೋಹಿತ್ ಬಳಗಕ್ಕೆ ಸೆಮಿ ಕನಸು; ರಾಹುಲ್‌ಗೆ ಮತ್ತೊಂದು ಅವಕಾಶ?

• ಆರ್. ಕೌಶಿಕ್



ಮಂಗಳವಾರ ಅಭ್ಯಾಸ ನಡೆಸಿದ ಸಂದರ್ಭದಲ್ಲಿ ಭಾರತದ ಕೆ.ಎಲ್. ರಾಹುಲ್ ಹಾಗೂ ವಿರಾಟ್ ಕೊಹ್ಲಿ ಸಮಾಲೋಚನೆ –ಎಎಫ್‌ಪಿ ಚಿತ್ರ

ಅಡಿಲೇಡ್: ಐತಿಹಾಸಿಕ ಅಡಿಲೇಡ್ ಓವಲ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಭಾರತಕ್ಕೆ ಹಾಗೂ ಬಾಂಗ್ಲಾದೇಶ ತಂಡಗಳಿಗೆ ಮರೆಯಲಾಗದ ನೆನಪುಗಳಿವೆ.

ಎರಡು ವರ್ಷಗಳ ಹಿಂದೆ ವಿರಾಟ್ ಕೊಹ್ಲಿ ನಾಯಕತ್ವದ ಭಾರತ ತಂಡವು ಇದೇ ಕ್ರೀಡಾಂಗಣದಲ್ಲಿ ನಡೆದಿದ್ದ ಪಿಂಕ್ ಬಾಲ್ ಟೆಸ್ಟ್ ಪಂದ್ಯದಲ್ಲಿ 36 ರನ್‌ಗಳಿಗೆ ಆಲೌಟ್ ಆಗಿತ್ತು. ಭಾರತವು ಟೆಸ್ಟ್ ಕ್ರಿಕೆಟ್‌ನಲ್ಲಿ ಗಳಿಸಿದ ಅತ್ಯಂತ ಸಣ್ಣ ಮೊತ್ತ ಅದಾಗಿದೆ. ಆದರೆ ಇದೇ ಅಂಗಳದಲ್ಲಿ 2015ರಲ್ಲಿ ನಡೆದಿದ್ದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿ ಪಂದ್ಯದಲ್ಲಿ ಬಲಿಷ್ಠ ಇಂಗ್ಲೆಂಡ್ ತಂಡಕ್ಕೆ ಬಾಂಗ್ಲಾ ಆಘಾತ ನೀಡಿತ್ತು.

ಇದೇ ತಾಣದಲ್ಲಿ ಗುರುವಾರ ಭಾರತ ಮತ್ತು ಬಾಂಗ್ಲಾ ಮುಖಾಮುಖಿಯಾಗಲಿವೆ. ಕಳೆದೊಂದು ದಶಕದಲ್ಲಿ ಬಾಂಗ್ಲಾದೇಶ ತಂಡವೂ ತನ್ನ ಬಲವರ್ಧನೆ ಮಾಡಿಕೊಂಡಿದೆ. ಅದರಿಂದಾಗಿ ಉಭಯ ತಂಡಗಳು ಎದುರಾದಾಗಲೆಲ್ಲ ತುರುಸಿನ ಪೈಪೋಟಿಯ ನಿರೀಕ್ಷೆ ಗರಿಗೆದರುತ್ತದೆ. ಚುಟುಕು ಮಾದರಿಯಲ್ಲಿ ಭಾರತವು ಬಾಂಗ್ಲಾ ಎದುರು 10–1ರ ಗೆಲುವಿನ ಮುನ್ನಡೆಯನ್ನು ಹೊಂದಿದೆ. ಆದರೂ ಸೋತ ಪಂದ್ಯಗಳಲ್ಲೂ ಬಾಂಗ್ಲಾ ದಿಟ್ಟ ಪೈಪೋಟಿ ನೀಡಿರುವುದು ಗಮನಾರ್ಹ.

2016ರಲ್ಲಿ ಬೆಂಗಳೂರಿನಲ್ಲಿ ಟಿ20 ವಿಶ್ವಕಪ್ ಟೂರ್ನಿ ಪಂದ್ಯದಲ್ಲಿ ಕೊನೆಯ ಓವರ್‌ನಲ್ಲಿ ಬಾಂಗ್ಲಾಕ್ಕೆ ಜಯಿಸಲು ಮೂರು ಎಸೆತಗಳಲ್ಲಿ ಎರಡು ರನ್‌ಗಳು ಬೇಕಾಗಿದ್ದವು. ಬ್ಯಾಟರ್ ಮುಷ್ಫಿಕುರ್ ರಹೀಮ್ ಮುಂಚಿತವಾಗಿಯೇ ವಿಜಯೋತ್ಸವ ಆಚರಿಸಿದ್ದರು. ಹಾರ್ದಿಕ್ ಪಾಂಡ್ಯ ಹಾಕಿದ ಆ ಓವರ್‌ನಲ್ಲಿ ಬಾಂಗ್ಲಾ ಕೊನೆಯ ಮೂರು ಎಸೆತಗಳಲ್ಲಿ ಮೂರು ವಿಕೆಟ್ ಕಳೆದುಕೊಂಡಿತು. ಕೊನೆಯ ಎಸೆತದಲ್ಲಿ ವಿಕೆಟ್‌ಕೀಪರ್ ಮಹೇಂದ್ರಸಿಂಗ್ ಧೋನಿ ಓಡುತ್ತ ಬಂದು ಮುಸ್ತಫಿಜುರ್ ರೆಹಮಾನ್ ಅವರನ್ನು ರನೌಟ್ ಮಾಡಿದ್ದರು. ಬಾಂಗ್ಲಾ ಕೇವಲ ಒಂದು ರನ್ ಅಂತರದಿಂದ ಸೋಲುಂಡಿತ್ತು.

2018ರಲ್ಲಿ ಕೊಲಂಬೊದಲ್ಲಿ ನಡೆದಿದ್ದ ನಿಧಾಸ್ ಟ್ರೋಫಿ ಫೈನಲ್‌ನಲ್ಲಿ ಕೊನೆಯ ಎಸೆತದಲ್ಲಿ ಭಾರತಕ್ಕೆ ಐದು ರನ್‌ಗಳ ಅಗತ್ಯವಿತ್ತು. ದಿನೇಶ್ ಕಾರ್ತಿಕ್ ಅವರು ಸೌಮ್ಯ ಸರ್ಕಾರ್ ಎಸೆತವನ್ನು ಫ್ಲ್ಯಾಟ್ ಸಿಕ್ಸರ್ ಹೊಡೆಯುವ ಮೂಲಕ ಬಾಂಗ್ಲಾದಿಂದ ಗೆಲುವು ಕಿತ್ತುಕೊಂಡಿದ್ದರು. ಈ ಸೋಲುಗಳ ಮುಯ್ಯಿ ತೀರಿಸಿಕೊಳ್ಳುವ ಛಲದಿಂದ ಇಲ್ಲಿ ಶಕೀಬ್ ಬಳಗವು ಭಾರತಕ್ಕೆ ಕಠಿಣ ಸವಾಲೊಡ್ಡಬಹುದು. ಸೂಪರ್ 12ರ ಹಂತದಲ್ಲಿ ಬಾಂಗ್ಲಾ ತಂಡವು ಮೊದಲ ಪಂದ್ಯದಲ್ಲಿ ನೆದರ್ಲೆಂಡ್ಸ್ ವಿರುದ್ಧ ಜಯಿಸಿತ್ತು. ಎರಡನೇಯದ್ದರಲ್ಲಿ ದಕ್ಷಿಣ ಆಫ್ರಿಕಾ ಎದುರು ಸೋತಿತ್ತು. ಮೂರನೇ ಪಂದ್ಯದಲ್ಲಿ ಜಿಂಬಾಬ್ವೆ ಎದುರು ರೋಚಕ ಜಯಗಳಿಸಿತ್ತು.

ಭಾರತ ತನ್ನ ಮೊದಲೆರಡು ಪಂದ್ಯಗಳಲ್ಲಿ ಕ್ರಮವಾಗಿ ಪಾಕಿಸ್ತಾನ ಹಾಗೂ ನೆದರ್ಲೆಂಡ್ಸ್ ವಿರುದ್ಧ ಗೆದ್ದಿತ್ತು. ಆದರೆ, ದಕ್ಷಿಣ ಆಫ್ರಿಕಾ ಎದುರು ಬ್ಯಾಟಿಂಗ್ ಹಾಗೂ ಫೀಲ್ಡಿಂಗ್ ವೈಫಲ್ಯಗಳಿಂದ ಸೋಲಿನ ಕಹಿಯುಂಡಿತು. ಸತತ ವೈಫಲ್ಯ ಅನುಭವಿಸುತ್ತಿರುವ ಕೆ.ಎಲ್. ರಾಹುಲ್ ಅವರಿಗೆ ತಮ್ಮ ತಂಡದ ನಾಯಕ ಹಾಗೂ ಆಯ್ಕೆಗಾರರ ವಿಶ್ವಾಸವನ್ನು ಉಳಿಸಿಕೊಳ್ಳಲು ಮತ್ತೊಂದು ಅವಕಾಶ ಲಭಿಸಬಹುದು. ಆದರೆ ವಿರಾಟ್ ಮತ್ತು ಸೂರ್ಯಕುಮಾರ್ ಯಾದವ್ ಅವರನ್ನು ಕಟ್ಟಿಹಾಕುವ ಸವಾಲು ಬಾಂಗ್ಲಾದ ಬೌಲರ್‌ಗಳಾದ ತಸ್ಕಿನ್ ಹಾಗೂ ಅನುಭವಿ ಮುಸ್ತಫಿಜುರ್ ರೆಹಮಾನ್ ಮುಂದಿದೆ.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್.
ದಿನದ ಮೊದಲ ಪಂದ್ಯ: ನೆದರ್ಲೆಂಡ್ಸ್–ಜಿಂಬಾಬ್ವೆ (ಬೆಳಿಗ್ಗೆ 9.30)

ಭಾರತದ ಸೆಮಿ ಹಾದಿ..

ದಕ್ಷಿಣ ಆಫ್ರಿಕಾ ಎದುರಿನ ಪಂದ್ಯದಲ್ಲಿ ಸೋತ ಭಾರತ ತಂಡಕ್ಕೆ ಸೆಮಿಫೈನಲ್ ಹಾದಿ ಸುಲಭವಾಗಿಲ್ಲ. ಎರಡನೇ ಗುಂಪಿನಲ್ಲಿ ಆಡುತ್ತಿರುವ ಭಾರತ ತಂಡವು ತನ್ನ ಪಾಲಿನ ಇನ್ನೆರಡು ಪಂದ್ಯಗಳಲ್ಲಿ ಬಾಂಗ್ಲಾ ಹಾಗೂ ಜಿಂಬಾಬ್ವೆ ತಂಡಗಳನ್ನು ಸೋಲಿಸಿದರೆ ಸೆಮಿ ಹಾದಿ ಸರಾಗವಾಗಲಿದೆ. ಇದರಿಂದ ಕೊನೆಯ ಹಂತದ ಲೆಕ್ಕಾಚಾರಗಳ ಜಂಜಾಟ ತಪ್ಪಲಿದೆ. ಮೂರು ಪಂದ್ಯಗಳನ್ನು ಆಡಿ ಎರಡರಲ್ಲಿ ಜಯಿಸಿರುವ ಭಾರತದ ಖಾತೆಯಲ್ಲಿ ನಾಲ್ಕು ಅಂಕಗಳು ಇವೆ. ಬಾಂಗ್ಲಾದೇಶದ ಖಾತೆಯಲ್ಲಿಯೂ ಇಷ್ಟೇ ಅಂಕಗಳಿವೆ.

ಬುಧವಾರ ಉಭಯ ತಂಡಗಳು ಮುಖಾಮುಖಿಯಾಗಲಿರುವ ಪಂದ್ಯದ ಶೇ 70ರಷ್ಟು ಅವಧಿಯಲ್ಲಿ ಮಳೆ ಸುರಿಯುವ ಸಾಧ್ಯತೆ ಇದೆ. ಅದರಿಂದಾಗಿ ಪಂದ್ಯ ರದ್ದಾದರೆ ಎರಡೂ ತಂಡಗಳೂ ತಲಾ ಒಂದು ಅಂಕ ಗಳಿಸುತ್ತವೆ. ಆದರೆ, ಬಾಂಗ್ಲಾಗಿಂತ (–1.533) ಭಾರತದ ನೆಟ್ ರನ್‌ರೇಟ್ (+0.844) ಉತ್ತಮವಾಗಿದೆ. ಈ ಸನ್ನಿವೇಶದಲ್ಲಿ ಭಾರತವು ತನ್ನ ಕೊನೆಯ ಪಂದ್ಯದಲ್ಲಿ ಜಿಂಬಾಬ್ವೆ ಎದುರು ಹಾಗೂ ಬಾಂಗ್ಲಾ ತಂಡ ಪಾಕಿಸ್ತಾನ ಎದುರು ಜಯಿಸಿದಾಗ ಈ ರನ್‌ರೇಟ್ ಲೆಕ್ಕಾಚಾರ ಮುನ್ನೆಲೆಗೆ ಬರಬಹುದು. ಉಭಯ ತಂಡಗಳು ತಮ್ಮ ಪಾಲಿನಲ್ಲಿರುವ ಎರಡೂ ಪಂದ್ಯಗಳ ಪೈಕಿ ಒಂದರಲ್ಲಿ ಸೋತರೂ ನಾಲ್ಕರ ಘಟ್ಟದ ಹಾದಿ ಕಠಿಣವಾಗಲಿದೆ. ಒಟ್ಟಿನಲ್ಲಿ ಈ ಎರಡೂ ತಂಡಗಳಲ್ಲಿ ಏಳು ಅಂಕ ಗಳಿಸಿದವರಿಗೆ ಸೆಮಿ ಹಂತ ಸುಲಭ.

ಈಗಾಗಲೇ ಐದು ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿರುವ ದಕ್ಷಿಣ ಆಫ್ರಿಕಾ ತಂಡವು ತನ್ನ ಇನ್ನುಳಿದ ಎರಡರಲ್ಲಿ ಪಾಕಿಸ್ತಾನ ಹಾಗೂ ನೆದರ್ಲೆಂಡ್ಸ್ ಎದುರು ಆಡಲಿದೆ. ಇದರಲ್ಲಿ ಒಂದು ಪಂದ್ಯ ಗೆದ್ದರೂ ತೆಂಬಾ ಬವುಮಾ ಬಳಗವು ನಾಲ್ಕರ ಹಂತಕ್ಕೇರಲಿದೆ. ಆದರೆ ಪಾಕಿಸ್ತಾನವು ಇನ್ನುಳಿದ ಎರಡೂ ಪಂದ್ಯಗಳಲ್ಲಿ ಗೆದ್ದರೂ ಸೆಮಿಫೈನಲ್ ಪ್ರವೇಶ ಕಷ್ಟ.

ಮಳೆ ಸಾಧ್ಯತೆ: ಅಡಿಲೇಡ್‌ನಲ್ಲಿ ತಂಪು ವಾತಾವರಣವಿದೆ. ಮಂಗಳವಾರ ಆಗಾಗ ಮಳೆಯಾಗಿದೆ. ಬುಧವಾರವೂ ಮಳೆಯಾಗುವ ಸಾಧ್ಯತೆ ಇದೆ.

ನ್ಯೂಜಿಲೆಂಡ್‌ಗೆ ಸೋಲುಣಿಸಿದ ಇಂಗ್ಲೆಂಡ್

ಬಟ್ಲರ್, ಅಲೆಕ್ಸ್ ಪರಾಕ್ರಮ



ಜೋಸ್ ಬಟ್ಲರ್ ಬ್ಯಾಟಿಂಗ್– ಎಎಫ್‌ಪಿ ಚಿತ್ರ

ಬ್ರಿಸ್ಬೇನ್ (ಪಿಟಿಐ): ನಾಯಕ ಜೋಸ್ ಬಟ್ಲರ್ ಮತ್ತು ಅಲೆಕ್ಸ್ ಹೇಲ್ಸ್ ಹಾಕಿಕೊಟ್ಟ ಬ್ಯಾಟಿಂಗ್ ಬುನಾದಿಯ ಮೇಲೆ ಬೌಲರ್‌ಗಳು ಗೆಲುವಿನ ಸೌಧ ಕಟ್ಟಿದರು. ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಮಹತ್ವದ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು 20 ರನ್‌ಗಳಿಂದ ಮಣಿಸಿದ ಇಂಗ್ಲೆಂಡ್ ಸೆಮಿಫೈನಲ್ ಸ್ಪರ್ಧೆಯಲ್ಲಿ ಉಳಿದುಕೊಂಡಿತು.

ಗಾಬಾ ಕ್ರೀಡಾಂಗಣದಲ್ಲಿ ಮಂಗಳವಾರ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ಆರು ವಿಕೆಟ್‌ಗೆ 179 ರನ್‌ಗಳ ಸವಾಲಿನ ಮೊತ್ತ ಕಲೆಹಾಕಿತು. ಇದಕ್ಕುತ್ತರವಾಗಿ ನ್ಯೂಜಿಲೆಂಡ್ ನಿಗದಿತ ಓವರ್‌ಗಳಲ್ಲಿ ಆರು ವಿಕೆಟ್ ಕಳೆದುಕೊಂಡು 159 ರನ್ ಗಳಿಸಲಷ್ಟೇ ಶಕ್ತವಾಯಿತು.

ಈ ಗೆಲುವಿನೊಂದಿಗೆ ಇಂಗ್ಲೆಂಡ್ ತಂಡವು ಆಸ್ಟ್ರೇಲಿಯಾವನ್ನು ಹಿಂದಿಕ್ಕಿ ಒಂದನೇ ಗುಂಪಿನ ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತು. ಆದರೆ ಸೆಮಿಫೈನಲ್ ಸ್ಥಾನ ಖಚಿತವಾಗಲು ಬಟ್ಲರ್ ಪಡೆ ಶನಿವಾರ ನಡೆಯುವ ಸೂಪರ್ 12 ಹಂತದ ತನ್ನ ಕೊನೆಯ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಸೋಲಿಸಬೇಕಿದೆ.

ಬಟ್ಲರ್–ಅಲೆಕ್ಸ್ ಬ್ಯಾಟಿಂಗ್ ವೈಭವ: ಇಂಗ್ಲೆಂಡ್ ಪರ ಆರಂಭಿಕರಾಗಿ ಕಣಕ್ಕಿಳಿದ ಬಟ್ಲರ್ (73, 47ಎ, 4X7, 6X2) ಮತ್ತು ಹೇಲ್ಸ್ (52, 40ಎ, 4X7, 6X1) ಮೊದಲ ವಿಕೆಟ್‌ಗೆ ಅಮೋಘ 81 ರನ್‌ಗಳ ಜೊತೆಯಾಟವಾಡಿದರು.

ಶ್ರೀಲಂಕಾ ಸೆಮಿ ಆಸೆ ಜೀವಂತ: ವನಿಂದು ಹಸರಂಗ (13ಕ್ಕೆ3) ಬೌಲಿಂಗ್ ಮತ್ತು ಧನಂಜಯ ಡಿಸಿಲ್ವಾ (ಔಟಾಗದೆ 66) ಅವರ ಸೊಗಸಾದ ಬ್ಯಾಟಿಂಗ್ ನೆರವಿನಿಂದ ಶ್ರೀಲಂಕಾ ತಂಡ ಅಫ್ಗಾನಿಸ್ತಾನ ತಂಡವನ್ನು ಆರು ವಿಕೆಟ್‌ಗಳಿಂದ ಮಣಿಸಿ, ಸೆಮಿಫೈನಲ್ ಪ್ರವೇಶದ ಆಸೆಯನ್ನು ಜೀವಂತವಾಗಿರಿಸಿಕೊಂಡಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಮೊಹಮ್ಮದ್ ನಬಿ ನಾಯಕತ್ವದ ಅಫ್ಗನ್ ತಂಡವನ್ನು ಶ್ರೀಲಂಕಾ 8 ವಿಕೆಟ್‌ಗೆ 144 ರನ್‌ಗಳಿಗೆ ನಿಯಂತ್ರಿಸಿತು. 18.3 ಓವರ್‌ಗಳಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡು ದಸುನ್ ಶನಕ ಬಳಗ ಈ ಗುರಿ ತಲುಪಿತು.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಫಲಿತಾಂಶವಿಲ್ಲ	ಪಾಯಿಂಟ್ಸ್	ರನ್ ರೇಟ್
ಗುಂಪು 1						
ನ್ಯೂಜಿಲೆಂಡ್	4	2	1	1	5	2.233
ಇಂಗ್ಲೆಂಡ್	4	2	1	1	5	0.547
ಆಸ್ಟ್ರೇಲಿಯಾ	4	2	1	1	5	-0.304
ಶ್ರೀಲಂಕಾ	4	2	2	0	4	-0.457
ಐರ್ಲೆಂಡ್	4	1	2	1	3	-1.544
ಅಫ್ಗಾನಿಸ್ತಾನ	4	0	2	2	2	-0.718
ಗುಂಪು 2						
ದಕ್ಷಿಣ ಆಫ್ರಿಕಾ	3	2	0	1	5	2.772
ಭಾರತ	3	2	1	0	4	0.844
ಬಾಂಗ್ಲಾದೇಶ	3	2	1	0	4	-1.533
ಜಿಂಬಾಬ್ವೆ	3	1	1	1	3	-0.050
ಪಾಕಿಸ್ತಾನ	3	1	2	0	2	0.765
ನೆದರ್ಲೆಂಡ್ಸ್	3	0	3	0	0	-1.948

ವಿಡಿಯೊ: ದ್ರಾವಿಡ್ ಅಸಮಾಧಾನ



ದ್ರಾವಿಡ್

ಅಡಿಲೇಡ್ (ಪಿಟಿಐ): 'ಭಾರತ ಕ್ರಿಕೆಟ್ ತಂಡದ ಆಟಗಾರರಿಗೆ ಪ್ರವಾಸದ ಅವಧಿಯಲ್ಲಿ ಜನರ ಕಣ್ಣಿನಿಂದ ದೂರವಿರಲು ಸಿಗುವ ಏಕೈಕ ಸ್ಥಳವೆಂದರೆ ಹೋಟೆಲ್‌ನ ಕೊಠಡಿ. ಅಲ್ಲೂ ಖಾಸಗಿತನ ಇಲ್ಲವೆನ್ನುವುದು ನಿರಾಸೆಯ ವಿಚಾರ' ಎಂದು ಭಾರತ ತಂಡದ ಕೋಚ್ ರಾಹುಲ್ ದ್ರಾವಿಡ್ ಹೇಳಿದ್ದಾರೆ.

ವಿರಾಟ್ ಕೊಹ್ಲಿ ತಂಗಿದ್ದ ಹೋಟೆಲ್‌ನ ಕೊಠಡಿಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದರ ಬಗ್ಗೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, 'ಇದು ತುಂಬಾ ನಿರಾಸೆಯ ವಿಚಾರ. ವಿರಾಟ್‌ಗೆ ಮಾತ್ರವಲ್ಲ, ಯಾರಿಗೇ ಆದರೂ ಅದೊಂದು ಕಹಿ ಅನುಭವ' ಎಂದಿದ್ದಾರೆ.

ಪರ್ತ್‌ನಲ್ಲಿ ವಿರಾಟ್ ತಂಗಿದ್ದ ಹೋಟೆಲ್‌ನ ಕೊಠಡಿಯ ವಿಡಿಯೊವನ್ನು ಅದೇ ಹೋಟೆಲ್‌ನ ಸ್ವಚ್ಛತಾ ಸಿಬ್ಬಂದಿ ಚಿತ್ರೀಕರಿಸಿ, ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದರು.

ಟಿ20 ಪಂದ್ಯದಲ್ಲಿ ದಾಖಲೆಯ 501 ರನ್!

ಪಾಚೆಫ್‌ಸ್ಟ್ರೂಮ್ (ಪಿಟಿಐ): ದಕ್ಷಿಣ ಆಫ್ರಿಕಾ ದೇಶೀಯ ಟಿ20 ಟೂರ್ನಿಯಲ್ಲಿ ಟೈಟನ್ಸ್ ಮತ್ತು ನೈಟ್ಸ್ ತಂಡಗಳ ನಡುವಣ ಸೋಮವಾರ ನಡೆದ ಪಂದ್ಯದಲ್ಲಿ ದಾಖಲೆಯ 501 ರನ್ ಹರಿದುಬಂದಿದೆ.

ಮೊದಲು ಬ್ಯಾಟ್ ಮಾಡಿದ ಟೈಟನ್ಸ್ 20 ಓವರ್‌ಗಳಲ್ಲಿ 3 ವಿಕೆಟ್‌ಗೆ 271 ರನ್ ಗಳಿಸಿತು. ಡೆವಾಲ್ಡ್ ಬ್ರೆವಿಸ್ 57 ಎಸೆತಗಳಲ್ಲಿ 162 ರನ್ ಗಳಿಸಿದರು. ನೈಟ್ಸ್ ತಂಡ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 230 ರನ್ ಪೇರಿಸಿ, 41 ರನ್‌ಗಳಿಂದ ಸೋತಿತು.

ನ್ಯೂಜಿಲೆಂಡ್ ದೇಸಿ ಟಿ20 ನಲ್ಲಿ 2016–17ರ ಋತುವಿನಲ್ಲಿ ಸೆಂಟ್ರಲ್ ಡಿಸ್ಟ್ರಿಕ್ಟ್ಸ್ - ಒಟಾಗೊ ನಡುವಣ ಪಂದ್ಯದಲ್ಲಿ 497 ರನ್ ಬಂದದ್ದು ಇದುವರೆಗಿನ ದಾಖಲೆಯಾಗಿತ್ತು. ಟೈಟನ್ಸ್ ತಂಡದ 271 ರನ್, ಟಿ20ನಲ್ಲಿ ದಾಖಲಾದ 4ನೇ ಅತಿದೊಡ್ಡ ಮೊತ್ತ ಹಾಗೂ ದ. ಆಫ್ರಿಕಾದ ತಂಡವೊಂದು ಗಳಿಸಿದ ಅತ್ಯಧಿಕ ಸ್ಕೋರ್ ಆಗಿದೆ.

ನೆಟ್ಟಕಲ್ಲಪ್ಪ ಈಜು ಕೇಂದ್ರಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ನೆಟ್ಟಕಲ್ಲಪ್ಪ ಈಜು ಕೇಂದ್ರದಲ್ಲಿ ಈಜುಪಟುಗಳ ಪ್ರದರ್ಶನ– ಪ್ರಜಾವಾಣಿ ಚಿತ್ರ

ಬೆಂಗಳೂರು: ನೆಟ್ಟಕಲ್ಲಪ್ಪ ಈಜು ಕೇಂದ್ರದ (ಎನ್‌ಎಸಿ) ಈಜುಪಟುಗಳು ಮಂಗಳವಾರ ಇಲ್ಲಿ ನಡೆದ ರೋಟರಿ ಕ್ಲಬ್ ಉತ್ಫುಲ್ಲತಾ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದರು.

ತಮ್ಮ ಕ್ಲಬ್ ಕೇಂದ್ರದಲ್ಲಿಯೇ ನಡೆದ ಕೂಟದಲ್ಲಿ ಒಟ್ಟು 304 ಪಾಯಿಂಟ್ಸ್ ಕಲೆಹಾಕಿದ ಎನ್‌ಎಸಿ ಸಮಗ್ರ ಚಾಂಪಿಯನ್ ಪಟ್ಟ ಗಳಿಸಿತು. ಗ್ಲೋಬಲ್ ಈಜು ಕೇಂದ್ರ (212) ಮತ್ತು ಪಿ.ಎಂ. ಈಜು ಕೇಂದ್ರ (163) ತಂಡಗಳು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದವು.

ಎನ್‌ಎಸಿಯ ನಯನ್ ವಿಘ್ನೇಶ್, ರಾಘವ್ ಸ್ವಚ್ಛಂದಮ್ ಮತ್ತು ಆದರ್ಶ್ ಕುಮಾರ್ ಸಹಾನಿ ಕ್ರಮವಾಗಿ ಬಾಲಕರ 1, 2 ಮತ್ತು ಮೂರನೇ ಗುಂಪಿನಲ್ಲಿ ವೈಯಕ್ತಿಕ ಚಾಂಪಿಯನ್ ಆದರು.

'ಈ ವರ್ಷ 400 ಮಕ್ಕಳು ಭಾಗವಹಿಸಿದ್ದರು. ವೈಯಕ್ತಿಕ ಚಾಂಪಿಯನ್‌ಗಳಾದವರು ₹ 5 ಸಾವಿರ ನಗದು ಬಹುಮಾನ ಪಡೆಯಲಿದ್ದಾರೆ. ಈ ಚಾಂಪಿಯನ್‌ಷಿಪ್‌ಅನ್ನು ಪ್ರತಿವರ್ಷ ಉನ್ನತೀಕರಿಸಲು ಪ್ರಯತ್ನಿಸುತ್ತಿದ್ದೇವೆ' ಎಂದು ಕೂಟ ಆಯೋಜನೆಯಲ್ಲಿ ಪ್ರಮುಖ ಪಾತ್ರ ವಹಿಸಿರುವ ರೋಟರಿ ಸದಸ್ಯೆ ಗೌರಿ ಓಜಾ ಹೇಳಿದರು.

ಫಲಿತಾಂಶಗಳು (ವಿಜೇತರು ಮಾತ್ರ): ಬಾಲಕರು: ಗುಂಪು 1: 100 ಮೀ. ಫ್ರೀಸ್ಟೈಲ್: ವಿಶ್ವನಾಥ್ ಎಸ್. (ಪಿಎಂಎಸ್‌ಸಿ, ಕಾಲ: 57.35 ಸೆ.). 100 ಮೀ ಬಟರ್‌ಫ್ಲೈ: ನಯನ್ ವಿಘ್ನೇಶ್ (ನೆಟ್ಟಕಲ್ಲಪ್ಪ ಈಜು ಕೇಂದ್ರ, ಕಾಲ: 1ನಿ. 10. 51 ಸೆ.). 50 ಮೀ. ಫ್ರೀಸ್ಟೈಲ್:ನಯನ್ ವಿಘ್ನೇಶ್ (ಎನ್‌ಎಸಿ, ಕಾಲ: 26.49 ಸೆ.), 100 ಮೀ. ಬ್ಯಾಕ್‌ಸ್ಟ್ರೋಕ್: ಅಕ್ಷಯ್ ಸೇಠ್ (ಜಿಎಸ್‌ಸಿ, 1 ನಿ. 7.34 ಸೆ.). 100 ಮೀ. ಬ್ರೆಸ್ಟ್‌ಸ್ಟ್ರೋಕ್: ನಯನ್ ವಿಘ್ನೇಶ್ (ಎನ್‌ಎಸಿ, 1 ನಿ. 9.64 ಸೆ.). 4X50 ಮೀ. ಫ್ರೀಸ್ಟೈಲ್: ಪಿಎಂಎಸ್‌ಸಿ, 1 ನಿ. 50.87 ಸೆ–1, ಎನ್‌ಎಸಿ –2. 4X50 ಮೀ. ಮೆಡ್ಲೆ (ಎನ್‌ಎಸಿ 2 ನಿ. 6.29 ಸೆ.)

ಗುಂಪು 2: 100 ಮೀ. ಫ್ರೀಸ್ಟೈಲ್: ಇದಾಂತ್ ಸಿ. (ಪಿಎಂಎಸ್‌ಸಿ, 1 ನಿ. 2.69 ಸೆ.). 100 ಮೀ ಬಟರ್‌ಫ್ಲೈ: ರಾಘವ್ ಸ್ವಚ್ಛಂದಮ್ (ಎನ್‌ಎಸಿ, 1ನಿ. 5.62 ಸೆ.), 100 ಮೀ. ಬ್ಯಾಕ್‌ಸ್ಟ್ರೋಕ್: ರಾಘವ್ ಸ್ವಚ್ಛಂದಮ್ (ಎನ್‌ಎಸಿ, 1 ನಿ. 7.12 ಸೆ.). 100 ಮೀ. ಬ್ರೆಸ್ಟ್‌ಸ್ಟ್ರೋಕ್: ರಾಘವ್ ಸ್ವಚ್ಛಂದಮ್ (ಎನ್‌ಎಸಿ, 1 ನಿ. 17.76 ಸೆ.). 50 ಮೀ. ಫ್ರೀಸ್ಟೈಲ್: ರಿತಿಕ್ ದರ್ಶನ್ (ಜಿಎಸ್‌ಸಿ, 28.79 ಸೆ.) 4X50 ಮೀ. ಫ್ರೀಸ್ಟೈಲ್: ಎನ್‌ಎಸಿ (1 ನಿ. 56.23 ಸೆ.), 4X50 ಮೀ. ಮೆಡ್ಲೆ: ಎನ್‌ಎಸಿ (2 ನಿ. 9.28 ಸೆ.)

ಗುಂಪು 3: 100 ಮೀ. ಫ್ರೀಸ್ಟೈಲ್: ದೇವೇಶ್ (ಜಿಎಸ್‌ಸಿ, 1ನಿ. 13.28 ಸೆ.), 50 ಮೀ. ಬಟರ್‌ಫ್ಲೈ: ವಿಶ್ರುತ್ ಎಂ. ಕುಂಕು (ಜಿಎಸ್‌ಸಿ, 36.03 ಸೆ.). 50 ಮೀ. ಫ್ರೀಸ್ಟೈಲ್: ಆದರ್ಶ್ ಕುಮಾರ್ ಸಹಾನಿ (ಎನ್‌ಎಸಿ, 33.56 ಸೆ.). 100 ಮೀ. ಬ್ಯಾಕ್‌ಸ್ಟ್ರೋಕ್: ವಿಶ್ರುತ್ (ಜಿಎಸ್‌ಸಿ, 1ನಿ.19. 85 ಸೆ.), ಆದರ್ಶ್ ಕುಮಾರ್ ಸಹಾನಿ–2. 100 ಮೀ. ಬ್ರೆಸ್ಟ್‌ಸ್ಟ್ರೋಕ್:ಆದರ್ಶ್ ಕುಮಾರ್ ಸಹಾನಿ (1 ನಿ.30.71 ಸೆ.) 4X50 ಮೀ. ಫ್ರೀಸ್ಟೈಲ್: ಎನ್‌ಎಸಿ (2 ನಿ. 15.18 ಸೆ.). 4X50 ಮೆಡ್ಲೆ (ಎನ್‌ಎಸಿ, 2ನಿ. 35.93 ಸೆ.)

ಗುಂಪು 4: 100 ಮೀ. ಫ್ರೀಸ್ಟೈಲ್: ಆರಿತ್ ಚಂದ್ರಶೇಖರ್ (ಮತ್ಸ್ಯ, 1:23.92)–1, ಸುಜಿತ್ ಕಾರ್ತಿಕ್ (ಎನ್‌ಎಸಿ)–2. 50 ಮೀ. ಬಟರ್‌ಫ್ಲೈ: ಅಮಿತ್ ಪವನ್ ಎಚ್. (ಜಿಎಸ್‌ಸಿ, 35.67 ಸೆ.). 50 ಮೀ. ಫ್ರೀಸ್ಟೈಲ್: ಅಮಿತ್ ಪವನ್ ಎಚ್. (ಜಿಎಸ್‌ಸಿ, 33.26 ಸೆ.), 50 ಮೀ. ಬ್ಯಾಕ್‌ಸ್ಟ್ರೋಕ್: ಅಮಿತ್ ಪವನ್ (ಜಿಎಸ್‌ಸಿ, 41.63 ಸೆ.). 50 ಮೀ. ಬ್ರೆಸ್ಟ್‌ಸ್ಟ್ರೋಕ್: ಶಿವಾಂಶ್ ಎಸ್. (ಆರ್‌ಎವೈ, 48.84ಸೆ.) 4x50 ಮೀ. ಫ್ರೀಸ್ಟೈಲ್: ಬಿಎಸಿ 2 ನಿ.43.41ಸೆ.–1, ಎನ್‌ಎಸಿ–2.

ಗುಂಪು 5: 50 ಮೀ. ಬಟರ್‌ಫ್ಲೈ: ದಕ್ಷ್ ನಟರಾಜ್ ನಾಯಕ್ (ಡಿಕೆವಿ ಈಜು ಕೇಂದ್ರ, 50.93 ಸೆ.), 50 ಮೀ. ಫ್ರೀಸ್ಟೈಲ್: ದಕ್ಷ್ ನಟರಾಜ್ ನಾಯಕ್ (ಡಿಕೆವಿ, 43.93 ಸೆ.). 50 ಮೀ. ಬ್ಯಾಕ್‌ಸ್ಟ್ರೋಕ್: ದಕ್ಷ್ ನಟರಾಜ್ ನಾಯಕ್ (ಡಿಕೆವಿ, 49.40 ಸೆ.). 50 ಮೀ. ಬ್ರೆಸ್ಟ್‌ಸ್ಟ್ರೋಕ್: ಲೋಚನ್ ವೇದಾಂತ್ (ಸ್ಪ್ಲಾಶ್, 1ನಿ. 2.34 ಸೆ.)

ಬಾಲಕಿಯರು: ಗುಂಪು 1: 100 ಮೀ. ಫ್ರೀಸ್ಟೈಲ್: ನೈಶಾ ಶೆಟ್ಟಿ (ಡಾಲ್ಫಿನ್, 1ನಿ. 5.72 ಸೆ.). 100 ಮೀ ಬಟರ್‌ಫ್ಲೈ: ನೈಶಾ ಶೆಟ್ಟಿ (ಡಾಲ್ಫಿನ್, 1ನಿ. 8.96 ಸೆ.). 50 ಫ್ರೀಸ್ಟೈಲ್: ನೈಶಾ ಶೆಟ್ಟಿ (ಡಾಲ್ಫಿನ್, 30.85 ಸೆ.). 100 ಮೀ. ಬ್ಯಾಕ್‌ಸ್ಟ್ರೋಕ್: ಚಿರಾಯು ಪಟೇಲ್ ಆರುಷಿ (ಎನ್‌ಎಂಎಸ್‌ಎ, 1ನಿ.23.76 ಸೆ.). ದಿಶಾ ನಾಗಶೇಖರ್ (ಎನ್‌ಎಸಿ, 1ನಿ. 38.82 ಸೆ.). 100 ಮೀ. ಬ್ರೆಸ್ಟ್‌ಸ್ಟ್ರೋಕ್: ಭಾಷಿಕಾ ಬಿ.ಕೆ. (ಪಿಎಂಎಸ್‌ಸಿ, 1ನಿ. 31.22ಸೆ.)–1. ದಿಶಾ ನಾಗಶೇಖರ್ (ಎನ್‌ಎಸಿ)–2

ಗುಂಪು 2: 100 ಮೀ. ಫ್ರೀಸ್ಟೈಲ್: ಶ್ರೀಚರಣಿ ತುಮು (ಜಿಎಸ್‌ಸಿ, 1ನಿ. 05.28 ಸೆ.)–1, ಹಿತಾಶ್ರೀ ಎನ್. (ಎನ್‌ಎಸಿ)–2, ಪ್ರತಿಷ್ಠಾ ಕಮಲೇಶ್ (ಎನ್‌ಎಸಿ)–3. 100 ಮೀ ಬಟರ್‌ಫ್ಲೈ: ಡಿಂಪಲ್ ಸೋನಾಕ್ಷಿ ಗೌಡ (ಡಾಲ್ಫಿನ್, 1ನಿ. 17.95 ಸೆ.). 50 ಫ್ರೀಸ್ಟೈಲ್: ಶ್ರೀಚರಣಿ ತುಮು (ಜಿಎಸ್‌ಸಿ, 29.41 ಸೆ.). 100 ಮೀ. ಬ್ಯಾಕ್‌ಸ್ಟ್ರೋಕ್: ಹಿತಾಶ್ರೀ ಎನ್. (ಎನ್‌ಎಸಿ, 1ನಿ. 20.40 ಸೆ.). ಪ್ರತಿಷ್ಠಾ ಕಮಲೇಶ್–2, 100 ಮೀ. ಬ್ರೆಸ್ಟ್‌ಸ್ಟ್ರೋಕ್: ಶ್ರೀಚರಣಿ ತುಮು (ಜಿಎಸ್‌ಸಿ, 1 ನಿ. 23.88 ಸೆ.). 4x50 ಮೀ. ಫ್ರೀಸ್ಟೈಲ್: ಜಿಎಸ್‌ಸಿ (2ನಿ. 6.57 ಸೆ.). 4x50 ಮೀ. ಮೆಡ್ಲೆ: ಜಿಎಸ್‌ಸಿ (2ನಿ. 26.23 ಸೆ.), ಎನ್‌ಎಸಿ–2

ಗುಂಪು 3: 100 ಮೀ. ಫ್ರೀಸ್ಟೈಲ್: ನಿಶದಾ ಮಿತ್ರ ಪಿ (ಆರ್‌ಎವೈ, 1ನಿ. 15.96 ಸೆ.). 50 ಮೀ. ಬಟರ್‌ಫ್ಲೈ: ನಿಶದಾ ಮಿತ್ರ ಪಿ (ಆರ್‌ಎವೈ, 37.41 ಸೆ.), 50 ಮೀ. ಫ್ರೀಸ್ಟೈಲ್: ನಿರ್ವಿ ಪೂಣಚ್ಚ (ಬಿಎಸಿ, 34.19 ಸೆ.). 100 ಮೀ. ಬ್ಯಾಕ್‌ಸ್ಟ್ರೋಕ್: ಸುಮೇಧಾ ವಿ. (ಡಿಕೆವಿ, 1ನಿ. 26.86 ಸೆ.). 100 ಮೀ. ಬ್ರೆಸ್ಟ್‌ಸ್ಟ್ರೋಕ್: ದೃತಿ ಕೃಷ್ಣ (ಬಿಎಸಿ, 1ನಿ. 38.67 ಸೆ.). 4x50 ಮೀ. ಫ್ರೀಸ್ಟೈಲ್: ಡಿಕೆವಿ, 2 ನಿ. 25.79 ಸೆ. 4x50 ಮೀ. ಮೆಡ್ಲೆ: ಡಿಕೆವಿ, 2ನಿ. 50.76 ಸೆ.

ಗುಂಪು: 4: 100 ಮೀ. ಫ್ರೀಸ್ಟೈಲ್: ಮೃಗಾಂಕಾ ಪೃಷ್ಟಿ (ಮತ್ಸ್ಯ, 1ನಿ. 22.26 ಸೆ.), 50 ಮೀ. ಬಟರ್‌ಫ್ಲೈ: ಮೃಗಾಂಕಾ ಪೃಷ್ಟಿ (ಮತ್ಸ್ಯ, 44.43 ಸೆ.). 50 ಮೀ. ಫ್ರೀಸ್ಟೈಲ್: ಶೃತಿ ಸಿಂಗ್ (ಮತ್ಸ್ಯ, 36.71 ಸೆ.). 50 ಮೀ. ಬ್ಯಾಕ್‌ಸ್ಟ್ರೋಕ್: ಶೃತಿ ಸಿಂಗ್ (ಮತ್ಸ್ಯ, 47.84 ಸೆ.). 50 ಮೀ. ಬ್ರೆಸ್ಟ್‌ಸ್ಟ್ರೋಕ್: ದೃತಿ ಅಭಿಲಾಷ್ (ಎಂಪಿ ಅಕ್ವಾಟಿಕ್ಸ್, 53.49 ಸೆ.). 4x50 ಮೀ ಫ್ರೀಸ್ಟೈಲ್: ಎನ್‌ಎಸಿ (3ನಿ. 44.95 ಸೆ.). 4x50 ಮೀ. ಮೆಡ್ಲೆ : ಎನ್‌ಎಸಿ (4ನಿ. 17.76 ಸೆ.). ಗುಂಪು 5: 50 ಮೀ. ಬಟರ್‌ಫ್ಲೈ: ತನ್ವಿ ಜಿ.ಡಿ. (ಬಿಎಸಿ, 1ನಿ. 1.93 ಸೆ.)–1, ಸರ್ವಿಕಾ ಎಸ್ ಪುಣೇಕರ್ (ಎನ್‌ಎಸಿ)–3. 50 ಮೀ. ಫ್ರೀಸ್ಟೈಲ್: ಸಮೃದ್ಧಿ (ಪಿಎಂಎಸ್‌ಸಿ, 44.59 ಸೆ.). 50 ಮೀ. ಬ್ಯಾಕ್‌ಸ್ಟ್ರೋಕ್: ತನ್ವಿ ಜಿ.ಡಿ. (ಬಿಎಸಿ, 55.64 ಸೆ.)–1, ಸರ್ವಿಕಾ ಎಸ್ ಪುಣೇಕರ್ (ಎನ್‌ಎಸಿ)–3. 50 ಮೀ. ಬ್ರೆಸ್ಟ್‌ಸ್ಟ್ರೋಕ್: ಸಮೃದ್ಧಿ ಎಸ್ ಹರೀಶ (ಪಿಎಂಎಸ್‌ಸಿ, 57.62 ಸೆ.)

ಕಬಡ್ಡಿ: ಬೆಂಗಳೂರು ಬುಲ್ಸ್‌ಗೆ ನಿರಾಸೆ



ಹರಿಯಾಣ ಸ್ಟೀಲರ್ಸ್ ಮತ್ತು ಬೆಂಗಳೂರು ಬುಲ್ಸ್ ತಂಡಗಳ ಪೈಪೋಟಿ

ಪುಣೆ (ಪಿಟಿಐ): ಮಿಂಚಿನ ದಾಳಿ ನಡೆಸಿದ ಮೀತು ಶರ್ಮಾ ಹಾಗೂ ಡಿಫೆಂಡರ್ ಅಮೀರ್ ಹುಸೇನ್ ಬಸ್ತಾಮಿ ಅವರ ಅಮೋಘ ಆಟದಿಂದ ಹರಿಯಾಣ ಸ್ಟೀಲರ್ಸ್ ತಂಡವು ಪ್ರೊ ಕಬಡ್ಡಿ ಟೂರ್ನಿಯ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ಎದುರು ರೋಚಕ ಜಯ ಸಾಧಿಸಿತು.

ಬಾಲೆವಾಡಿಯ ಶಿವಛತ್ರಪತಿ ಕ್ರೀಡಾ ಸಂಕೀರ್ಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಹರಿಯಾಣ ತಂಡವು 29–27ರಿಂದ ಬುಲ್ಸ್ ತಂಡವನ್ನು ಮಣಿಸಿತು. ಪಂದ್ಯದ ಮೊದಲಾರ್ಧದಲ್ಲಿ ಹರಿಯಾಣ 13–10ರಿಂದ ಬುಲ್ಸ್ ವಿರುದ್ಧ ಮುನ್ನಡೆಯಲ್ಲಿತ್ತು. ನಂತರದ ಅವಧಿಯಲ್ಲಿ ಬುಲ್ಸ್ ದಿಟ್ಟ ಹೋರಾಟ ಮಾಡಿತು. ರೇಡಿಂಗ್‌ನಲ್ಲಿ ಬುಲ್ಸ್ ತಂಡದ ಭರತ್ 10 ಅಂಕ ಗಳಿಸಿದರು. ಕೊನೆಯವರೆಗೂ ಕುತೂಹಲ ಕೆರಳಿಸಿದ್ದ ಪಂದ್ಯದಲ್ಲಿ ಹರಿಯಾಣ ಎರಡು ಅಂಕಗಳ ಮುನ್ನಡೆಯೊಂದಿಗೆ ಜಯ ಸಾಧಿಸಿತು.

ಇನ್ನೊಂದು ಪಂದ್ಯದಲ್ಲಿ ಪುಣೇರಿ ಪಲ್ಟನ್ ತಂಡವು 43–38ರಿಂದ ದಬಂಗ್ ಡೆಲ್ಲಿ ವಿರುದ್ಧ ಜಯಿಸಿತು. ಮೊದಲಾರ್ಧದ ವಿರಾಮದ ವೇಳೆಗೆ ಪುಣೇರಿ ತಂಡವು 23–17 ರಿಂದ ದಬಂಗ್ ವಿರುದ್ಧ ಮೇಲುಗೈ ಪಡೆದಿತ್ತು.

ಪುಣೇರಿಯ ರೇಡರ್‌ಗಳಾದ ಆಕಾಶ್ ಶಿಂಧೆ ಹಾಗೂ ಮೋಹಿತ್ ಗೋಯತ್ ಅವರು ತಲಾ 13 ಅಂಕಗಳನ್ನು ಗಳಿಸಿದರು. ದಬಂಗ್ ತಂಡದ ನವೀನ್ ಕುಮಾರ್ 16 ಅಂಕಗಳನ್ನು ಗಳಿಸಿದರು.

ಇಂದಿನ ಪಂದ್ಯಗಳು:
ಯು ಮುಂಬಾ– ತೆಲುಗು ಟೈಟನ್ಸ್
ಬೆಂಗಾಲ್ ವಾರಿಯರ್ಸ್– ತಮಿಳ್ ತಲೈವಾಸ್

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಬೆಂಗಳೂರು	10	6	3	1	35
ಪುಣೇರಿ	9	5	2	2	32
ಡೆಲ್ಲಿ	10	5	5	0	29
ಜೈಪುರ	9	5	4	0	27
ಹರಿಯಾಣ	9	4	4	1	26
ಮುಂಬಾ	8	5	3	0	26

ಟಿ20: ಕರ್ನಾಟಕ ಪರಾಭವ

ಪ್ರಜಾವಾಣಿ ವಾರ್ತೆ



ಶುಭಮನ್ ಗಿಲ್ –ಸಂಗ್ರಹ ಚಿತ್ರ

ಬೆಂಗಳೂರು: ಕೋಲ್ಕತ್ತದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಪಂಜಾಬ್‌ನ ಶುಭಮನ್ ಗಿಲ್ ಗಳಿಸಿದ ಅಬ್ಬರದ ಶತಕ, ಕರ್ನಾಟಕ ತಂಡಕ್ಕೆ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಿಂದ ನಿರ್ಗಮನದ ಬಾಗಿಲು ತೋರಿಸಿತು.

ಮಂಗಳವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಗಿಲ್ (126 ರನ್, 55 ಎ., 4X11, 6X9) ಬಿರುಸಿನ ಆಟದ ಬಲದಿಂದ 9 ರನ್‌ಗಳ ಗೆಲುವು ಪಡೆದ ಪಂಜಾಬ್, ಸೆಮಿಫೈನಲ್‌ಗೆ ಲಗ್ಗೆಯಿಟ್ಟಿತು. ಮೊದಲು ಬ್ಯಾಟ್ ಮಾಡಿದ ಪಂಜಾಬ್ 4 ವಿಕೆಟ್‌ಗಳಿಗೆ 225 ರನ್ ಗಳಿಸಿತು. ಮಯಂಕ್ ಅಗರವಾಲ್ ಬಳಗ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 216 ರನ್ ಗಳಿಸಿತು.

ಸವಾಲಿನ ಗುರಿ ಬೆನ್ನಟ್ಟಿದ ಕರ್ನಾಟಕ, ಆರಂಭಿಕ ಬ್ಯಾಟರ್ ಮಯಂಕ್ (8), ರೋಹನ್ ಪಾಟೀಲ್ (2) ಮತ್ತು ಲವನೀತ್ ಸಿಸೋಡಿಯಾ (6) ಅವರನ್ನು ಬೇಗನೇ ಕಳೆದುಕೊಂಡಿತು. 18 ರನ್ ಆಗುವಷ್ಟರಲ್ಲಿ ಮೂರು ವಿಕೆಟ್‌ಗಳು ಬಿದ್ದವು.

ಎಲ್.ಆರ್.ಚೇತನ್ (33 ರನ್, 25 ಎ., 4X4, 6X1) ಮತ್ತು ಅನುಭವಿ ಮನೀಷ್ ಪಾಂಡೆ (45 ರನ್, 29 ಎ., 4X5, 6X2) ನಾಲ್ಕನೇ ವಿಕೆಟ್‌ಗೆ 71 ರನ್ ಸೇರಿಸಿ ಮರುಹೋರಾಟದ ಸೂಚನೆ ನೀಡಿದರು. 10 ರನ್ ಅಂತರದಲ್ಲಿ ಇವರಿಬ್ಬರು ಔಟಾದರೂ ಕರ್ನಾಟಕ ವೀರೋಚಿತ ಹೋರಾಟ ನಡೆಸಿತು. ಅಭಿನವ್ ಮನೋಹರ್ (ಔಟಾಗದೆ 62, 29 ಎ., 4X5, 6X5), ಮನೋಜ್ ಭಾಂಡಗೆ (25 ರನ್, 9 ಎ., 6X1, 4X3) ಹಾಗೂ ಕೆ.ಗೌತಮ್ (ಔಟಾಗದೆ 30, 14 ಎ., 4X2, 6X2) ಕೊನೆಯಲ್ಲಿ ಬೌಂಡರಿ, ಸಿಕ್ಸರ್‌ಗಳ ಸುರಿಮಳೆಗರೆದರೂ ಕರ್ನಾಟಕಕ್ಕೆ ಗೆಲುವಿನ ಗಡಿ ದಾಟಲು ಆಗಲಿಲ್ಲ.

ಸೇನ್‌ಗೆ ಸೋಲು

ಸಾರ್‌ಬ್ರೂಕನ್, ಜರ್ಮನಿ (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಮಂಗಳವಾರ ಇಲ್ಲಿ ಆರಂಭವಾದ ಹೈಲೊ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲಿ 12–21, 5–21 ರಲ್ಲಿ ಹಾಂಗ್‌ಕಾಂಗ್‌ನ ಎಂಗ್ ಕಾ ಲಾಂಗ್ ಆ್ಯಂಗಸ್ ಎದುರು ಸೋತರು.

ಮಿಶ್ರ ಡಬಲ್ಸ್‌ನಲ್ಲಿ ಇಶಾನ್ ಭಟ್ನಾಗರ್– ತನೀಷಾ ಕ್ರಾಸ್ಟೊ ಜೋಡಿ 13–21, 12–21 ರಲ್ಲಿ ಚೀನಾ ತೈಪೆಯ ಫೆಂಗ್ ಯಾನ್ ಜೆ- ಹುವಾಂಗ್ ಡಾಂಗ್ ಪಿಂಗ್ ಕೈಯಲ್ಲಿ ಪರಾಭವಗೊಂಡರು.

ಧಾನ್ಯ ರಫ್ತು ಒಪ್ಪಂದದಿಂದ ಹೊರಗುಳಿದ ರಷ್ಯಾ

ಆಹಾರ ಬಿಕ್ಕಟ್ಟು ಉಲ್ಬಣ: ಭಾರತ ಕಳವಳ

ವಿಶ್ವಸಂಸ್ಥೆ/ಇಸ್ತಾಂಬುಲ್ (ಪಿಟಿಐ/ರಾಯಿಟರ್ಸ್): ಉಕ್ರೇನ್‌ನಿಂದ ಆಹಾರಧಾನ್ಯಗಳ ರಫ್ತಿಗೆ ಅವಕಾಶ ಕಲ್ಪಿಸುವ ವಿಶ್ವಸಂಸ್ಥೆ ಮಧ್ಯಸ್ಥಿಕೆಯ ಒಪ್ಪಂದವು ರಷ್ಯಾದೊಂದಿಗಿನ ಸಂಘರ್ಷದ ಮಧ್ಯೆ ಅಮಾನತುಗೊಂಡಿರುವುದು ಜಗತ್ತು, ಅದರಲ್ಲೂ ವಿಶೇಷವಾಗಿ ಜಾಗತಿಕ ದಕ್ಷಿಣವು ಎದುರಿಸುತ್ತಿರುವ ಆಹಾರ ಅಭದ್ರತೆ, ಇಂಧನ ಮತ್ತು ರಸಗೊಬ್ಬರ ಪೂರೈಕೆ ಸವಾಲುಗಳನ್ನು ಮತ್ತಷ್ಟು ಉಲ್ಬಣಗೊಳಿಸುವ ನಿರೀಕ್ಷೆ ಇದೆ ಎಂದು ಭಾರತ ಕಳವಳ ವ್ಯಕ್ತಪಡಿಸಿದೆ.


ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ಆರ್. ಮಧುಸೂದನ್, ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಅವರ ಪ್ರಯತ್ನದಲ್ಲಿ ಆಹಾರ ಧಾನ್ಯಗಳ ರಫ್ತಿಗೆ ನಡೆದಿದ್ದ ಒಪ್ಪಂದವು ಜಾಗತಿಕ ಆಹಾರ ಬಿಕ್ಕಟ್ಟನ್ನು ನಿವಾರಿಸುವ ಮತ್ತು ಆಹಾರ ಭದ್ರತೆ ಖಾತ್ರಿಪಡಿಸುವ ಗುರಿ ಹೊಂದಿತ್ತು. ಅವರ ಈ ಪ್ರಯತ್ನದ ಪರಿಣಾಮ, ಉಕ್ರೇನ್‌ನಿಂದ 90 ಲಕ್ಷ ಟನ್‌ಗೂ ಹೆಚ್ಚಿನ ಧಾನ್ಯಗಳು ಮತ್ತು ಆಹಾರ ಉತ್ಪನ್ನಗಳು ರಫ್ತು ಆಗಿತ್ತು ಎಂದರು.

ಭದ್ರತಾ ಮಂಡಳಿಯ ಸಭೆಯಲ್ಲಿ ಕಪ್ಪು ಸಮುದ್ರದ ಮೂಲಕ ಧಾನ್ಯಗಳ ರಫ್ತು ಕ್ರಮಗಳ ಕುರಿತ ವಿಚಾರವಾಗಿ ಸೋಮವಾರ ಮಾತನಾಡಿದ ಅವರು, 'ಈವರೆಗೆ ಕಪ್ಪು ಸಮುದ್ರದ ಮೂಲಕ ಧಾನ್ಯ ಸಾಗಣೆಯ ಉಪಕ್ರಮಕ್ಕೆ ಎರಡೂ ರಾಷ್ಟ್ರಗಳು ತೋರಿದ ಸಹಕಾರವು ಉಕ್ರೇನ್‌ನಲ್ಲಿ ಶೀಘ್ರ ಶಾಂತಿ ನೆಲೆಸುವ ಭರವಸೆಯ ಕಿರಣ ಮೂಡಿಸಿತ್ತು. ಆದರೆ, ಈ ಒಪ್ಪಂದ ಅಮಾನತು ಆಗಿರುವುದು ಜಾಗತಿಕವಾಗಿ ಆಹಾರ ಬಿಕ್ಕಟ್ಟು ಉಲ್ಬಣಿಸುವ ಸಾಧ್ಯತೆ ಹೆಚ್ಚಿಸಿದೆ' ಎಂದರು.

ಬಂದರು ತೊರೆದ ಹಡಗುಗಳು: ರಷ್ಯಾ ಒಪ್ಪಂದದಿಂದ ಹಿಂದೆ ಸರಿದ ನಂತರ ಕಪ್ಪು ಸಮುದ್ರದ ಧಾನ್ಯ ರಫ್ತು ಒಪ್ಪಂದದಡಿ ಮೂರು ಹೊರ ಹೋಗುವ ಹಡಗುಗಳು ಉಕ್ರೇನ್ ಬಂದರುಗಳನ್ನು ಮಂಗಳವಾರ ಮಧ್ಯಾಹ್ನ ತೊರೆದವು ಎಂದು ವಿಶ್ವಸಂಸ್ಥೆ ನೇತೃತ್ವದ ಸಮನ್ವಯ ಕೇಂದ್ರ ತಿಳಿಸಿದೆ. ಸೋಮವಾರ ಒಂದೇ ದಿನ 12 ಹಡಗುಗಳು ಬಂದರುಗಳನ್ನು ತೊರೆದಿದ್ದವು.

ರಷ್ಯಾ ಆರೋಪ

ಮಾಸ್ಕೊ (ಎಎಫ್‌ಪಿ): ನಾರ್ಡ್ ಸ್ಟ್ರೀಮ್ ಅನಿಲ ಸಾಗಣೆಯ ಕೊಳವೆ ಮಾರ್ಗ ಸ್ಫೋಟದಲ್ಲಿ ಬ್ರಿಟನ್ ನೇರವಾಗಿ ಭಾಗಿಯಾಗಿದೆ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಆಡಳಿತ ಕಚೇರಿ ಕ್ರೆಮ್ಲಿನ್ ಮಂಗಳವಾರ ಆರೋಪ ಮಾಡಿದೆ.



ಚೀನಾದ ಟಿಯಾಂಗಾಂಗ್ ಬಾಹ್ಯಾಕಾಶ ನಿಲ್ದಾಣಕ್ಕೆ ಮೆಂಗ್‌ಟಿಯಾನ್ ಯಶಸ್ವಿ ಉಡಾವಣೆ –ಎಎಫ್‌ಪಿ ಚಿತ್ರ

ಗಮ್ಯಸ್ಥಾನ ತಲುಪಿದ ಮೆಂಗ್‌ಟಿಯಾನ್

ಬೀಜಿಂಗ್ (ಎ.ಪಿ): ಅಂತರಿಕ್ಷ ಕಕ್ಷೆಯಲ್ಲಿ ತನ್ನ ಅಸ್ತಿತ್ವ ಬಲಪಡಿಸುವುದರ ಭಾಗವಾಗಿ ಅಂತಿಮ ಹಂತದ ಪರಿಕರಗಳನ್ನು ಹೊತ್ತ ಮೆಂಗ್‌ಟಿಯಾನ್ ಅನ್ನು ತನ್ನ ಶಾಶ್ವತ ಬಾಹ್ಯಾಕಾಶ ನಿಲ್ದಾಣಕ್ಕೆ ತಲುಪಿಸುವಲ್ಲಿ ಚೀನಾ ಯಶಸ್ವಿಯಾಯಿತು.

ಮೆಂಗ್‌ಟಿಯಾನ್ ಎಂದು ಹೆಸರಿಸಲಾದ ಅಂತಿಮ ಹಂತದ ಪರಿಕರಗಳಿದ್ದ ವಾಹಕವು ಟಿಯಾಂಗಾಂಗ್ ನಿಲ್ದಾಣಕ್ಕೆ ಮಂಗಳವಾರ ಬೆಳಿಗ್ಗೆ ತಲುಪಿದೆ ಎಂದು ಸರ್ಕಾರದ ಅಧಿಕೃತ ವಾಹಿನಿ ಸಿಸಿಟಿವಿ ವರದಿ ಮಾಡಿದೆ.

ವೆನ್‌ಚಾಂಗ್ ಉಡಾವಣಾ ಕೇಂದ್ರದಿಂದ ಸೋಮವಾರ ಮೆಂಗ್‌ಟಿಯಾನ್ ಉಡಾವಣೆ ಮಾಡಲಾಗಿತ್ತು. ಇದು, ಅಂತಿಮ ಗುರಿಯನ್ನು ತಲುಪಲು 13 ಗಂಟೆಯನ್ನು ತೆಗೆದುಕೊಂಡಿತು.

ಸಂಕ್ಷಿಪ್ತ ಸುದ್ದಿ

ಅಮೆರಿಕಕ್ಕೆ ಪ್ರತ್ಯುತ್ತರ ಉ.ಕೊರಿಯಾ ಎಚ್ಚರಿಕೆ

ಸೋಲ್ (ಎ.ಪಿ): 'ದಕ್ಷಿಣ ಕೊರಿಯಾ ಜೊತೆಗೂಡಿ ಗಡಿದಾಟುವ ಯತ್ನಕ್ಕೆ ಮುಂದಾದಲ್ಲಿ ಅದಕ್ಕೆ ತಕ್ಕ ಪ್ರತ್ಯುತ್ತರವನ್ನು ನೀಡಬೇಕಾದಿತು' ಎಂದು ಉತ್ತರ ಕೊರಿಯಾದ ವಿದೇಶಾಂಗ ಸಚಿವಾಲಯವು ಅಮೆರಿಕಕ್ಕೆ ಎಚ್ಚರಿಕೆ ನೀಡಿದೆ.

ದಕ್ಷಿಣ ಕೊರಿಯಾ ಮತ್ತು ಅಮೆರಿಕ ಜಂಟಿಯಾಗಿ ಸೇನಾ ಕಸರತ್ತು ನಡೆಸುತ್ತಿದ್ದು, ಎಫ್–35 ಒಳಗೊಂಡಂತೆ 200ಕ್ಕೂ ಹೆಚ್ಚು ಯುದ್ಧ ವಿಮಾನಗಳು ಈ ತಾಲೀಮಿನಲ್ಲಿ ಭಾಗಿಯಾಗಿವೆ. ಇದರ ಬೆನ್ನಲ್ಲೇ ಉತ್ತರ ಕೊರಿಯಾ ಈ ರೀತಿ ಎಚ್ಚರಿಕೆ ನೀಡಿದೆ.

ಉತ್ತರ ಕೊರಿಯಾವು ಈ ವರ್ಷದಲ್ಲಿ ಪೂರ್ವಸಿದ್ಧತೆಯಾಗಿ ದಾಖಲೆ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿದೆ. ಅಲ್ಲದೆ, 40ಕ್ಕೂ ಹೆಚ್ಚು ಖಂಡಾಂತರ ಕ್ಷಿಪಣಿಗಳ ಪರೀಕ್ಷಾರ್ಥ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಿದ್ದು, ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಇನ್ನೊಂದೆಡೆ, ಇದೇ ವರ್ಷದಲ್ಲಿ ಅಮೆರಿಕ ಮತ್ತು ದಕ್ಷಿಣ ಕೊರಿಯಾ ಕೂಡಾ ಜಂಟಿಯಾಗಿ ದೊಡ್ಡಪ್ರಮಾಣದಲ್ಲಿ ಸೇನಾ ಕಸರತ್ತು ನಡೆಸಿವೆ. ಕೋವಿಡ್ ಮತ್ತು ಪರಿಸ್ಥಿತಿ ತಿಳಿಗೊಳಿಸಲು ರಾಜತಾಂತ್ರಿಕ ಮಾತುಕತೆ ಕಾರಣದಿಂದ ಹಿಂದಿನ ಎರಡು ವರ್ಷ ಈ ಕಸರತ್ತು ನಡೆದಿರಲಿಲ್ಲ.

ಪ್ಯಾಲೆಸ್ಟೀನ್‌ಗೆ ಭಾರತ ನೆರವು

ರಮಲ್ಲಾ (ವೆಸ್ಟ್ ಬ್ಯಾಂಕ್):(ಪಿಟಿಐ): ಪ್ಯಾಲೆಸ್ಟೀನ್ ನಿರಾಶ್ರಿತರ ಶಿಕ್ಷಣ, ಆರೋಗ್ಯ ಸೇರಿದಂತೆ ವಿವಿಧ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಭಾರತವು ₹20.66 ಕೋಟಿ ಮೊತ್ತದ (2.5 ಮಿಲಿಯನ್ ಡಾಲರ್) ಚೆಕ್ ಅನ್ನು ವಿಶ್ವಸಂಸ್ಥೆಗೆ ಹಸ್ತಾಂತರಿಸಿತು.

2018ರಿಂದ ಈಚೆಗೆ ಪ್ಯಾಲೆಸ್ಟೀನಿಯನ್ನರ ನೆರವಿಗಾಗಿ ಭಾರತ ವಿಶ್ವಸಂಸ್ಥೆಯ ರಿಲೀಫ್ ಆ್ಯಂಡ್ ವರ್ಕ್ಸ್ ಏಜೆನ್ಸಿಗೆ (ಯುಎನ್‌ಆರ್‌ಡಬ್ಲ್ಯುಎ) ₹186 ಕೋಟಿ ನೆರವು ನೀಡಿದೆ.

ಯುಎನ್‌ಆರ್‌ಡಬ್ಲ್ಯುಎಗೆ ವಾರ್ಷಿಕ ₹41.32 ಕೋಟಿ (5 ಮಿಲಿಯನ್ ಡಾಲರ್) ನೀಡುವುದಾಗಿ ಭಾರತ ತಿಳಿಸಿದೆ. ಇದರ ಭಾಗವಾಗಿ ಎರಡನೇ ಹಂತದಲ್ಲಿ ಇಷ್ಟು ಹಣ ನೀಡಿದೆ.

ಸೇನಾ ಸಲಕರಣೆ ರಫ್ತಿನಲ್ಲಿ ಭಾರತ ಮುಂಚೂಣಿ

ಜೊಹಾನ್ಸ್‌ಬರ್ಗ್(ಪಿಟಿಐ): ಇತ್ತೀಚಿನ ವರ್ಷಗಳಲ್ಲಿ ಭಾರತ ರಕ್ಷಣಾ ಸಲಕರಣೆಗಳ ಪ್ರಮುಖ ರಫ್ತುದಾರ ದೇಶವಾಗಿ ಹೊರಹೊಮ್ಮಿದೆ. ಮಾರಿಷಸ್, ಮೊಜಾಂಬಿಕ್ ಮತ್ತು ಸಿಚೆಲ್ಸ್ ದೇಶಗಳು 2017–2021ರ ಅವಧಿಯಲ್ಲಿ ಭಾರತದಿಂದ ಅತಿ ಹೆಚ್ಚು ಪ್ರಮಾಣದ ಸೇನಾ ಸಲಕರಣೆಗಳನ್ನು ಆಮದು ಮಾಡಿಕೊಂಡಿವೆ ಎಂದು ಅಧ್ಯಯನ ವರದಿಯೊಂದು ತಿಳಿಸಿದೆ.